ಸಂಪುಟ: 05 ಸಂಚಿಕೆ: 262 ಪುಟಗಳು: 08 ಶನಿವಾರ 06 ಡಿಸೆಂಬರ್ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

**ಮುಂಜಾನೆ ಮಾತು**
ದ್ವೇಷ, ಸಿಟ್ಟು, ಕೋಪ, ಮನಸ್ತಾಪ ಕ್ಷಣಿಕ ಅಷ್ಟೇ ಇಟ್ಟುಕೊಳ್ಳಬೇಕು. ಇರೋ ಮೂರು ದಿನದಲ್ಲಿ ಶಾಶ್ವತವಾದದ್ದು ಪ್ರೀತಿ, ವಿಶ್ವಾಸ, ನಂಬಿಕೆ ಅಷ್ಟೇ.

# ಉದಯ ವಾಹಿನಿ

UV ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಭ್ರಷ್ಟಾಚಾರ ಹೇಳಿಕೆ ದುರ್ಬಳಕೆ: ನ್ಯಾಯಮೂರ್ತಿ ವೀರಪ್ಪ ಬೇಸರ

• ಉದಯವಾಹಿನಿ, ಬೆಂಗಳೂರು

ನನ್ನ ಹೇಳಿಕೆಯನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಉಪ ಲೋಕಾಯುಕ್ತ ವೀರಪ್ಪ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿರುವ ಅವರು, ನನ್ನ ಹೇಳಿಕೆಯನ್ನು ಸ್ವಾರ್ಥಕ್ಕೆ ಬಳಸಿಕೊಳ್ಳಬೇಡಿ ಎಂದು ರಾಜಕಾರಣಿಗಳಲ್ಲಿ ಕೇಳಿಕೊಳ್ಳುತ್ತೇನೆ ಎಂದು ಹೇಳಿದ್ದಾರೆ. ಎಲ್ಲಾ ಸರ್ಕಾರಗಳೂ ಕೂಡ ಭ್ರಷ್ಟಾಚಾರದಲ್ಲಿವೆ.

ನಾನು ಮಾತನಾಡುವಾಗ ಯಾವ ಸರ್ಕಾರ ಎಂದು ಹೇಳಿಲ್ಲ. ಭ್ರಷ್ಟಾಚಾರಕ್ಕೆ ಸಮಾಜ ಹಾಗೂ ಜನರೂ ಕೂಡ ಕಾರಣ ಎಂದು ಹೇಳಿದ್ದಾರೆ. ನನ್ನ ಹೇಳಿಕೆಯನ್ನು ರಾಜಕೀಯ ನಾಯಕರು ಸ್ವಾರ್ಥಕ್ಕೆ ಬಳಸಿಕೊಂಡಿದ್ದಾರೆ ಮತ್ತು ನನ್ನ ಹೇಳಿಕೆಯನ್ನು ತಿರುಚಿದ್ದಾರೆ ಎಂದು ಕಿಡಿಕಾರಿದ್ದಾರೆ. ಭಾರತದಲ್ಲಿ ಯಾವ ಯಾವ ರಾಜ್ಯದಲ್ಲಿ ಭ್ರಷ್ಟಾಚಾರ ಇದೆ ಎಂಬ ಸರ್ವೆ ನಡೆದಿತ್ತು. ಈ ವೇಳೆ ನಾನು ಮಾತನಾಡಿದ್ದೇನೆ. ಯಾವ ಸರ್ಕಾರವನ್ನು ಗಮನದಲ್ಲಿಟ್ಟುಕೊಂಡು ಇದನ್ನು ಹೇಳಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

## ನಾನು ಸಚಿವ ಸ್ಥಾನದ ಆಕಾಂಕ್ಷಿ ಅಲ್ಲ: ಆರ್.ವಿ.ದೇಶಪಾಂಡೆ

• ಉದಯವಾಹಿನಿ, ಬೆಂಗಳೂರು

ನಾನು ಸಚಿವ ಸ್ಥಾನದ ಆಕಾಂಕ್ಷಿಯಲ್ಲ. ಯಾರನ್ನ ಸಂಪುಟಕ್ಕೆ ತೆಗೆದುಕೊಳ್ಳಬೇಕು ಎಂಬುದು ಸಿಎಂ ಪರಮಾಧಿಕಾರ ಎಂದು ಮಾಜಿ ಸಚಿವ ಆರ್.ವಿ.ದೇಶಪಾಂಡೆ ತಿಳಿಸಿದ್ದಾರೆ. ಸಚಿವ ಸಂಪುಟ ಪುನರ್ ರಚನೆ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ನನ್ನಷ್ಟು ಹೆಚ್ಚು ಕಾಲ ಬೇರೆಯವರು ಸಚಿವರಾಗಿ ಇರಲಿಲ್ಲ. ನಾನು ಯಾವುದೇ ಸ್ಥಾನದ ಆಕಾಂಕ್ಷಿಯಲ್ಲ. ಹೀಗಾಗಿ ನಾನು ಸಚಿವ ಸ್ಥಾನದ ಬಗ್ಗೆ ತಲೆ ಕೆಡಿಸಿಕೊಳ್ಳಲ್ಲ. ಸಂಪುಟದಲ್ಲಿ ಯಾರು ಇರಬೇಕು ಅಂತ ಸಿಎಂ ತೀರ್ಮಾನ ಮಾಡ್ತಾರೆ. ಅದು ಪಕ್ಷದ ಪದ್ದತಿ ಇದೆ. ಹೈಕಮಾಂಡ್ ಇದೆ. ರಾಹುಲ್ ಗಾಂಧಿ, ಪಕ್ಷದ ಅಧ್ಯಕ್ಷರು ಚರ್ಚೆ ಮಾಡಿ ನಿರ್ಧಾರ ಮಾಡ್ತಾರೆ. ನಾನು ಅದರ ಬಗ್ಗೆ ಏನು ಮಾತಾಡೊಲ್ಲ. ಅದರ ಬಗ್ಗೆ ಗೊತ್ತಿಲ್ಲ ಎಂದರು.

## ಅಶೋಕ್ ವಿರುದ್ಧ ಎಂಬಿಪಿ ಕಿಡಿ

• ಉದಯವಾಹಿನಿ, ಬೆಂಗಳೂರು

ಅಶೋಕ್ ಅವರನ್ನು ವಿಪಕ್ಷ ನಾಯಕನ ಸ್ಥಾನದಿಂದ ಬಿಜೆಪಿ ಇಳಿಸದೇ ಹೋದ್ರೆ ಶಾಶ್ವತವಾಗಿ ವಿಪಕ್ಷದಲ್ಲಿ ಇರುತ್ತದೆ ಅಂತ ಸಚಿವ ಎಂಬಿ ಪಾಟೀಲ್ ಲೇವಡಿ ಮಾಡಿದ್ದಾರೆ. ಕಾಂಗ್ರೆಸ್ ಸರ್ಕಾರ 63% ಕಮೀಷನ್ ಸರ್ಕಾರ ಎಂಬ ಆರ್. ಅಶೋಕ್ ಹೇಳಿಕೆ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಉಪ ಲೋಕಾಯುಕ್ತರು ಹೇಳಿದ್ದು 2019 ಆಗಸ್ಟ್‌ನಲ್ಲಿ ಹೇಳಿದ್ದು.ಆರ್. ಅಶೋಕ್ ಅಂತಹವರನ್ನು ವಿಪಕ್ಷ ನಾಯಕರಾಗಿ ಇಟ್ಟುಕೊಂಡರೆ ಬಿಜೆಪಿ ತಲೆತಲಾಂತರವಾಗಿ ಸೂರ್ಯ ಚಂದ್ರ ಇರೋವರೆಗೂ ಬಿಜೆಪಿ ವಿಪಕ್ಷವಾಗಿಯೇ ಇರುತ್ತದೆ. ಅಶೋಕ್ ಅವರು ಅಜ್ಞಾನದಿಂದ ಬೇಜವಾಬ್ದಾರಿಯಿಂದ ಮಾತಾಡಿದ್ದಾರೆ ಅಂತ ಕಿಡಿಕಾರಿದರು.

ವಿಪಕ್ಷ ನಾಯಕ ಅಂದರೆ ಶ್ಯಾಡೋ ಸಿಎಂ ಅಂತಾರೆ. ಅಂತಹವರು 2019 ಸರ್ಕಾರದ ಬಗ್ಗೆ ಮಾತಾಡಿದ್ದನ್ನ ಈ ಸರ್ಕಾರಕ್ಕೆ ಅಂತ ಮಾತಾಡ್ತಾರೆ. ವಿಪಕ್ಷ ನಾಯಕರು ಚೆಕ್ ಮಾಡಿ ಮಾತಾಡಬೇಕು. ಮಾಹಿತಿ ಪಡೆಯದೇ ಮಾತಾಡಿ ಇಷ್ಟು ನಗೆ ಪಾಟಲಿಗೆ ಈಡಾಗಿದ್ದಾರೆ. ಬಿಜೆಪಿ ಅವರು ಎಷ್ಟು ಬೇಗ ವಿಪಕ್ಷ ನಾಯಕರನ್ನ ಬದಲಾವಣೆ ಮಾಡುತ್ತೀರೋ ಅಷ್ಟು ಒಳ್ಳೆಯದು.ಇಲ್ಲದೆ ಹೋದ್ರೆ ಶಾಶ್ವತವಾಗಿ ವಿಪಕ್ಷವಾಗಿ ಉಳಿಯಬೇಕಾಗುತ್ತದೆ ಎಂದು ಭವಿಷ್ಯ ನುಡಿದರು.

## ಮಂಡ್ಯಕ್ಕೂ ಕಾರ್ಯಪಡೆ; ಪರಮೇಶ್ವರ

• ಉದಯವಾಹಿನಿ, ಬೆಂಗಳೂರು

ರಾಜ್ಯದ ದಕ್ಷಿಣ ಕನ್ನಡ, ಉಡುಪಿ ಹಾಗೂ ಶಿವಮೊಗ್ಗ ಜಿಲ್ಲೆಗಳ ವ್ಯಾಪ್ತಿಯಲ್ಲಿ ಕೋಮುಹಿಂಸೆ ನಿಗ್ರಹಿಸಲು ರಚಿಸಿರುವ ವಿಶೇಷ ಕಾರ್ಯಪಡೆಯನ್ನು ಮಂಡ್ಯ ಜಿಲ್ಲೆಗೂ ವಿಸ್ತರಿಸಲಾಗುವುದು ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಕರಾವಳಿ ಭಾಗದಲ್ಲಿ ಕೊಲೆ, ಕೋಮು ಗಲಭೆಯಿಂದಾಗಿ ಶಾಂತಿ ಇಲ್ಲದಂತಾಗಿತ್ತು. ವಿಶೇಷ ಕಾರ್ಯಪಡೆ ರಚನೆ ಬಳಿಕ ಕರಾವಳಿ ಭಾಗದಲ್ಲಿ ಕೊಲೆ, ಗಲಭೆಗಳು ಆಗಿಲ್ಲ. 300ಕ್ಕೂ ಹೆಚ್ಚು ಸಿಬ್ಬಂದಿಗೆ ವಿಶೇಷ ತರಬೇತಿ ನೀಡಲಾಗಿದೆ. ಮೂರು ದಿನದ ಹಿಂದೆ ಮಂಗಳೂರಿಗೆ ಭೇಟಿ ನೀಡಿದ್ದ ವೇಳೆ ಸರ್ಕಾರದ ಕಾರ್ಯವೈಖರಿ ಬಗ್ಗೆ ಸ್ಥಳೀಯರಿಂದ ಪ್ರಶಂಸೆ ವ್ಯಕ್ತವಾಯಿತು ಎಂದು ಅವರು ತಿಳಿಸಿದರು.

ಸಿಐಡಿಯಲ್ಲಿ ಠೇವಣಿ ವಂಚನೆ ಮತ್ತು ಕ್ರಿಮಿನಲ್ ಗುಪ್ತಚರ ಘಟಕವನ್ನು ತೆರೆಯಲಾಗಿದೆ. ಬೆಳ್ತಂಗಡಿಯಲ್ಲಿ ಸಿಐಡಿ ಉಪ ವಿಭಾಗವನ್ನು ಸ್ಥಾಪನೆ ಮಾಡಲಾಗಿದೆ. ಅನೇಕ ಘಟನೆಗಳು ಮತ್ತು ಪ್ರಕರಣಗಳು ದಾಖಲಾಗುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು ಸಿಐಡಿ ಉಪವಿಭಾಗ ಸ್ಥಾಪಿಸಲಾಗಿದೆ ಎಂದು ಹೇಳಿದರು.




# ಭಾರತ-ರಷ್ಯಾ ಜಂಟಿ ಮೋದಿ, ಪುಟಿನ್ ಸ್ನೇಹ ಗಟ್ಟಿ

**ನಾವು ತಟಸ್ಥವಾಗಿಲ್ಲ, ಶಾಂತಿಯ ಪರವಾಗಿದ್ದೇವೆ**

## ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಭಾರತ-ರಷ್ಯಾ ಒಟ್ಟಾಗಿ ಸಾಗಲಿವೆ



• ಉದಯವಾಹಿನಿ, ನವದೆಹಲಿ

ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಭಾರತ-ರಷ್ಯಾ ಒಟ್ಟಾಗಿ ಸಾಗಲಿವೆ ಎಂದು ಪ್ರಧಾನಿ ಮೋದಿ ಹೇಳಿದರು. ನವದೆಹಲಿಯಲ್ಲಿ ಪ್ರಧಾನಿ ಮೋದಿ ಹಾಗೂ ಪುಟಿನ್ ನಡುವಿನ ಜಂಟಿ ಸುದ್ದಿಗೋಷ್ಠಿಯಲ್ಲಿ ಏಪ್ರಿಲ್ 22ರ ಪೆಹಲ್ಗಾಮ್ ಭಯೋತ್ಪಾದಕ ದಾಳಿ ಉಲ್ಲೇಖಿಸಿ ಅವರು ಮಾತನಾಡಿದರು.

ಭಯೋತ್ಪಾದನೆಯನ್ನು ಎದುರಿಸುವ ಭಾರತದ ಎಲ್ಲಾ ಪ್ರಯತ್ನಗಳಿಗೆ ರಷ್ಯಾ ಬಲವಾದ ಬೆಂಬಲ ನೀಡುತ್ತಿದೆ. ಏಪ್ರಿಲ್ 22ರಂದು ಜಮ್ಮು ಮತ್ತು ಕಾಶ್ಮೀರದ ಪೆಹಲ್ಗಾಮ್‌ನಲ್ಲಿ ಪಾಕ್ ಉಗ್ರರ ಗುಂಪು ದಾಳಿ ನಡೆಸಿತ್ತು. ಪೆಹಲ್ಗಾಮ್‌ನಲ್ಲಿ ನಡೆದ ದಾಳಿ ಹಾಗೂ ಮಾಸ್ಕೋದ ಕ್ರೋಕಸ್ ಸಿಟಿ ಹಾಲ್‌ನಲ್ಲಿ ನಡೆದ ಉಗ್ರರ ದಾಳಿ ಹಿಂಸಾತ್ಮಕ ಹಾಗೂ ಉಗ್ರವಾದದ ಮೂಲವೇ ಆಗಿದೆ. ಇದು ಮಾನವೀಯ ಮೌಲ್ಯಗಳ ಮೇಲಿನ ದಾಳಿ ಎಂಬುದನ್ನ ಭಾರತ ದೃಢವಾಗಿ ನಂಬುತ್ತದೆ. ಹೀಗಾಗಿ ರಷ್ಯಾ ಭಯೋತ್ಪಾದನೆಯನ್ನ ಮೂಲದಿಂದಲೇ ನಿರ್ಮೂಲನೆ ಮಾಡಲು ಭಾರತದೊಂದಿಗೆ ಯಾವಾಗಲೂ ಒಗಟ್ಟಾಗಿ ನಿಲ್ಲುತ್ತದೆ. ಆಪರೇಷನ್ ಸಿಂಧೂರ ಕಾರ್ಯಾಚರಣೆ ಸಂದರ್ಭದಲ್ಲೂ ರಷ್ಯಾ, ಭಾರತದ ಬೆಂಬಲಕ್ಕೆ ನಿಂತಿತ್ತು ಎಂದ ಮೋದಿ ಎಲ್ಲಾ ದೇಶಗಳು ಭಯೋತ್ಪಾದನೆ ವಿರುದ್ಧ ಒಂದಾದಾಗ ಜಗತ್ತು ಬಲಿಷ್ಠವಾಗಿರುತ್ತದೆ ಎಂದು ಒತ್ತಿ ಹೇಳಿದ್ರು. ಭಾರತ ಮತ್ತು ರಷ್ಯಾ ಈಗಾಗಲೇ ವಿಶ್ವಸಂಸ್ಥೆ, ಜಿ 20, ಬ್ರಿಕ್ಸ್, ಎಸ್‌ಸಿಓ ನಂತಹ ಒಕ್ಕೂಟಗಳಲ್ಲಿ ಸಹಕರಿಸುತ್ತಿವೆ. ಇದರ ಹೊರತಾಗಿಯೂ ಎರಡೂ ರಾಷ್ಟ್ರಗಳು ಒಟ್ಟಾಗಿ ಕೆಲಸ ಮಾಡುವುದನ್ನು ಜೊತೆಗೆ ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಪರಸ್ಪರ ಚರ್ಚಿಸುವುದನ್ನು ಮುಂದುವರಿಸುತ್ತವೆ ಎಂದು ತಿಳಿಸಿದರು.

**ಭಾರತ ಶಾಂತಿಯ ಪರ:** ಇದೇ ವೇಳೆ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, ಮತ್ತೆ ಉಕ್ರೇನ್ ಶಾಂತಿ ಸಂದೇಶ ನೀಡಿದರು. ಉಕ್ರೇನ್ ವಿಷಯದಲ್ಲಿ ಭಾರತ ಯಾವಾಗಲೂ ಶಾಂತಿಯನ್ನ ಬೆಂಬಲಿಸುತ್ತದೆ. ಈ ಸಮಸ್ಯೆಗೆ ಶಾಂತಿಯುತ ಮತ್ತು ಶಾಶ್ವತ ಪರಿಹಾರ ಕಂಡುಕೊಳ್ಳಲು ಮಾಡುವ ಪ್ರತಿಯೊಂದು ಪ್ರಯತ್ನವನ್ನೂ ನಾವು ಸ್ವಾಗತಿಸುತ್ತೇವೆ ಎಂದು ಹೇಳಿದರು. ಅಲ್ಲದೇ ಕಳೆದ 8 ದಶಕಗಳಲ್ಲಿ ಇಡೀ ವಿಶ್ವ ಅನೇಕ ಏರಿಳಿತಗಳನ್ನು ಕಂಡಿದೆ. ಮಾನವೀಯತೆಯು ಅನೇಕ ಸವಾಲುಗಳನ್ನು ಮತ್ತು ಕಠಿಣ ಸಮಯಗಳನ್ನು ಎದುರಿಸಿದೆ. ಇದೆಲ್ಲರದ ನಡುವೆಯೂ ಭಾರತ-ರಷ್ಯಾದ ಸ್ನೇಹವು ಧ್ರುವ ನಕ್ಷತ್ರದಂತೆ ಸ್ಥಿರ ಮತ್ತು ಬಲವಾಗಿ ಉಳಿದಿದೆ ಎಂದು ಶ್ಲಾಘಿಸಿದರು. ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡುವ ಮುನ್ನ ಭಾರತ-ರಷ್ಯಾ ನಡುವೆ ಹಲವು ಒಪ್ಪಂದಗಳಿಗೆ ಸಹಿ ಹಾಕಲಾಯಿತು.

ಉಭಯ ದೇಶಗಳ ನಡುವಿನ ಪರಿಸ್ಪರ ಸಹಕಾರ ಬಲಪಡಿಸುವ ನಿಟ್ಟಿನಲ್ಲಿ ಸಹಕಾರ ಮತ್ತು ವಲಸೆ, ಆರೋಗ್ಯ ರಕ್ಷಣೆ ಮತ್ತು ವೈದ್ಯಕೀಯ ಶಿಕ್ಷಣ, ಆಹಾರ ಸುರಕ್ಷತೆ, ಧ್ರುವ ಹಡಗುಗಳು ಮತ್ತು ಕಡಲ ಸಹಕಾರ ಹಾಗೂ ರಸಗೊಬ್ಬರ ಸೇರಿದಂತೆ ಪ್ರಮುಖ ಒಪ್ಪಂದಗಳಿಗೆ ಸಹಿ ಹಾಕಲಾಯಿತು.

### ಪುಟಿನ್‌ಗೆ ಮುರ್ಮು, ಮೋದಿ ಸ್ವಾಗತ

ಭಾರತ ಪ್ರವಾಸದಲ್ಲಿರುವ ಪುಟಿನ್ ಅವರು ರಾಷ್ಟ್ರಪತಿ ಭವನಕ್ಕೆ ಆಗಮಿಸುತ್ತಿದ್ದಂತೆ ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ ಸ್ವಾಗತಿಸಿದರು. ಅದ್ದೂರಿ ಸಂಗೀತದ ಮೂಲಕ ರೆಡ್ ಕಾರ್ಪೆಟ್ ಹಾಸಿ ಪುಟಿನ್‌ಗೆ ಸ್ವಾಗತ ಕೋರಲಾಯಿತು. ಸೇನಾಪಡೆ ಸಿಬ್ಬಂದಿ 21 ಗನ್ ಸೆಲ್ಯೂಟ್, ಮಿಲಿಟರಿ ಶಿಸ್ತು ಮತ್ತು ಸಕಲ ಗೌರವ ಸಲ್ಲಿಸಿದವು.

### ಪೆಹಲ್ಗಾಮ್ ನರಮೇಧ ಉಲ್ಲೇಖಿಸಿ ಮೋದಿ ಮಾತು

1. ಭಾರತದಲ್ಲಿ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ತಮ್ಮ ಸಂಚಾರಕ್ಕೆ ರೇಂಜ್ ರೋವರ್, ಬೆಂಝ್ ಬಳಸಿಲ್ಲ
2. ರೇಂಜ್ ರೋವರ್, ಬೆಂಝ್ ಬದಲಿಗೆ ಬಿಳಿ ಬಣ್ಣದ ಟೊಯೋಟಾ ಫಾರ್ಚುನರ್ ಆಯ್ಕೆ
3. ಪುಟಿನ್ ಬಳಸುವ ಕಾರನ್ನು ಬಿಟ್ಟು ಬೇರೆ ಕಾರನ್ನು ಬಳಸುವುದರ ಹಿಂದೆ ಒಂದು ದೊಡ್ಡ ತಂತ್ರ ಅಡಗಿದೆ

### ಇದು ಫಾರ್ಚುನರ್ ಡಿಪ್ಲೋಮಸಿ ಎಂದ ನೆಟ್ಟಿಗರು!

ಮೋದಿ - ಪುಟಿನ್ ನಡೆ ಸಾಮಾಜಿಕ ಜಾಲತಾಣಗಳಲ್ಲಿ ಫಾರ್ಚುನರ್ ಡಿಪ್ಲೊಮಸಿ ಎಂದೇ ವೈರಲ್ ಆಗಿದೆ. ರಕ್ಷಣಾ ವಿಶ್ಲೇಷಕ ಕರ್ನಲ್ ರೋಹಿತ್ ದೇವ್ ಅವರು ಟ್ವೀಟ್ ಮಾಡಿ, ಇದು ಪಶ್ಚಿಮಕ್ಕೆ ಒಂದು ಸಂದೇಶ ಎಂದು ಹೇಳಿದ್ದಾರೆ. ಇನ್ನು ಬಿಜೆಪಿ ವಕ್ತಾರ ಶೆಹಜಾದ್ ಪೂನಾವಾಲಾ ಕೂಡ, ಇಬ್ಬರೂ ನಾಯಕರು ಪ್ರಧಾನಿಯವರ ಫಾರ್ಚುನರ್ ಕಾರನ್ನು ಏರಿದ್ದು, ಬುದ್ಧಿವಂತರಿಗೆ ಮಾತ್ರ ಈ ನಡೆಯ ಹಿಂದಿನ ಅರ್ಥ ತಿಳಿಯುತ್ತದೆ ಎಂದು ಮಾರ್ಮಿಕವಾಗಿ ಟ್ವೀಟ್ ಮಾಡಿದ್ದರು.

ನೆಟ್ಟಿಗರು ಕೂಡ, ಯುರೋಪಿಯನ್ ಅಲ್ಲದ ಜಪಾನೀಸ್ ಬ್ರ್ಯಾಂಡ್ ಆಯ್ಕೆ ಮಾಡುವ ಮೂಲಕ, ರಷ್ಯಾದ ನಿರ್ಬಂಧಗಳಲ್ಲಿ ಭಾಗಿಯಾಗಿರುವ ಪಶ್ಚಿಮದ ತಯಾರಕರನ್ನು ಕಡೆಗಣಿಸಲಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ಬಗ್ಗೆ ಪ್ರಧಾನ ಮಂತ್ರಿಗಳ ಕಾರ್ಯಾಲಯವಾಗಲಿ, ರಷ್ಯಾ ಅಧ್ಯಕ್ಷರ ಕಚೇರಿಯಾಗಲಿ ಯಾವುದೇ ರೀತಿಯ ಪ್ರತಿಕ್ರಿಯೆಯನ್ನು ನೀಡಿಲ್ಲ. ಕಾರಣ ಏನೇ ಇರಲಿ, ರಾಜತಾಂತ್ರಿಕತೆಯಲ್ಲಿ ಇಂತಹ ಸಾಂಕೇತಿಕ ಹೆಜ್ಜೆಗಳು ಅಂತಾರಾಷ್ಟ್ರೀಯ ಅಭಿಪ್ರಾಯವನ್ನು ರೂಪಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತವೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ.

### ರಷ್ಯಾದ ಪ್ರವಾಸಿಗರಿಗೆ 30 ದಿನಗಳಲ್ಲಿ ಉಚಿತ ಇ-ವೀಸಾ

2 ದಿನಗಳ ಭಾರತ ಪ್ರವಾಸದಲ್ಲಿರುವ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಹಾಗೂ ಭಾರತದ ಪ್ರಧಾನಿ ನರೇಂದ್ರ ಮೋದಿ ದೆಹಲಿಯಲ್ಲಿ ಜಂಟಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ್ದಾರೆ. ಈ ವೇಳೆ ರಷ್ಯಾದ ಪ್ರವಾಸಿಗರಿಗೆ ಭಾರತ ಇ-ವೀಸಾ ನೀಡಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಘೋಷಿಸಿದ್ದಾರೆ. ಇದನ್ನು 30 ದಿನಗಳಲ್ಲಿ ಇ-ವೀಸಾಗಳ ಪ್ರಕ್ರಿಯೆ ನಡೆಸಲಾಗುವುದು. ಮೊದಲ ಇ-ಟೂರಿಸ್ಟ್ ವೀಸಾ ಮತ್ತು ಗುಂಪು ಪ್ರವಾಸಿ ವೀಸಾ ಸೇವೆಗಳನ್ನು ಶೀಘ್ರದಲ್ಲೇ ಪ್ರಾರಂಭಿಸಲಾಗುವುದು ಎಂದು ಮೋದಿ ಹೇಳಿದ್ದಾರೆ. ಈ ವೀಸಾ ಉಚಿತವಾಗಿರುತ್ತದೆ. ಭಾರತ ಮತ್ತು ರಷ್ಯಾ ಎರಡೂ ದೇಶಗಳ ನಡುವೆ ಆರ್ಥಿಕ ಸಹಕಾರವನ್ನು ಹೆಚ್ಚಿಸಲು ವಿಷನ್- 2030 ದಾಖಲೆಗೆ ಸಹಿ ಹಾಕಲಾಗಿದೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ಈ ಉಪಕ್ರಮವು ಎರಡೂ ರಾಷ್ಟ್ರಗಳಿಗೆ ಹಲವಾರು ವ್ಯಾಪಾರ ಮಾರ್ಗಗಳನ್ನು ತೆರೆಯುತ್ತದೆ ಎಂದು ಅವರು ತಿಳಿಸಿದ್ದಾರೆ. ಆರ್ಥಿಕ ಸಹಕಾರವನ್ನು ಮತ್ತಷ್ಟು ಹೆಚ್ಚಿಸಲು, ನಾವು ವಿಷನ್ 2030 ದಾಖಲೆಗೆ ಸಹಿ ಹಾಕಿದ್ದೇವೆ ಎಂದು ಮೋದಿ ಹೇಳಿದ್ದಾರೆ.

## ಸಂಪುಟ ಸಭೆಯಲ್ಲಿ ವಿವಾದಿತ ಕಾನೂನುಗಳ ಕುರಿತು ಚರ್ಚೆ

• ಉದಯವಾಹಿನಿ, ಬೆಂಗಳೂರು



ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ಪ್ರತಿಬಂಧಕ ಕಾಯ್ದೆ, ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ತಿದ್ದುಪಡಿ ಕಾಯ್ದೆ, ಕರ್ನಾಟಕ ಸಾಮಾಜಿಕ ಬಹಿಷ್ಕಾರ ನಿಷೇಧ ಮತ್ತು ಪರಿಹಾರ ಕುರಿತ ಕಾನೂನುಗಳ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿಂದು ಮಹತ್ವದ ಚರ್ಚೆಗಳಾಗಿವೆ.

ಇದೇ ತಿಂಗಳ 8 ರಿಂದ ಬೆಳಗಾವಿಯಲ್ಲಿ ಆರಂಭವಾಗುವ ಚಳಿಗಾಲದ ಅಧಿವೇಶನದಲ್ಲಿ ವಿವಾದಿತ ಮಸೂದೆಗಳನ್ನು ಮಂಡಿಸಲು ತಯಾರಿಯಾಗಿದ್ದು, ಸಂಪುಟದಲ್ಲಿ ಮಹತ್ವ ಚರ್ಚೆಗಳಾಗಿದೆ. ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ಬಗ್ಗೆ ಕಠಿಣ ಕಾನೂನು ರೂಪಿಸಲಾಗಿದ್ದು, ಇದು ಬಹಳಷ್ಟು ಹಿಂದೂ ಸಂಘಟನೆಗಳು ಹಾಗೂ ಬಿಜೆಪಿ ಬೆಂಬಲಿತ ಪ್ರಮುಖರಿಗೆ ಮುಳುವಾಗುವ ಸಾಧ್ಯತೆ ಇದೆ. ಈ ಕಾಯ್ದೆಯ ವಿರುದ್ಧ ರಾಜ್ಯಾದ್ಯಂತ ಪ್ರತಿಭಟನೆಗಳು ಭುಗಿಲೇಳುವ ನಿರೀಕ್ಷೆ ಇದೆ.

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿ ವಿಧೇಯಕ, ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ತಿದ್ದುಪಡಿ ವಿಧೇಯಕಗಳ ಬಗ್ಗೆಯೂ ಚರ್ಚೆಯಾಗಿದೆ. ವಿಧಾನ ಮಂಡಲದಲ್ಲಿ ಮಂಡನೆಗೆ ಈ ವಿಧೇಯಕಗಳನ್ನು ಅಂಗೀಕರಿಸುವ ಸಾಧ್ಯತೆ ಇದೆ. ಜಾನುವಾರುಗಳನ್ನು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ತಿದ್ದುಪಡಿ ವಿಧೇಯಕ ಮತ್ತೊಂದು ವಿವಾದ ಸೃಷ್ಟಿಸುವ ಅಂದಾಜುಗಳಿವೆ. ಈ ಹಿಂದೆ ಬಿಜೆಪಿ ಸರ್ಕಾರ ಗೋ ಹತ್ಯೆಗೆ ಕಡಿವಾಣ ಹಾಕಲು ಕಠಿಣ ಕಾನೂನನ್ನು ರೂಪಿಸಿತ್ತು.

**ರಾಜ್ಯಾದ್ಯಂತ ಪ್ರತಿಭಟನೆಗಳು ಭುಗಿಲೇಳುವ ನಿರೀಕ್ಷೆ**


ಆ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಲ್ಲದೆ, ಅಧಿಕಾರಕ್ಕೆ ಬಂದರೆ ಕಾನೂನನ್ನು ಸರಳೀಕರಣಗೊಳಿಸುವುದಾಗಿ ಪ್ರಣಾಳಿಕೆಯಲ್ಲಿ ಭರವಸೆ ನೀಡಿತ್ತು. ಅದರಂತೆ ಗೋ ಹತ್ಯೆ ಕ್ರಿಮಿನಲ್ ಅಪರಾಧವಾಗಿರುವುದನ್ನು ಸರಳೀಕರಣಗೊಳಿಸಲು ಸಂಪುಟದಲ್ಲಿ ಚರ್ಚಿಸಲಾಗಿದೆ.

ಬಿಜೆಪಿಯ ಮಹತ್ವಾಕಾಂಕ್ಷೆಯ ಈ ವಿಧೇಯಕಕ್ಕೆ ಕಾಂಗ್ರೆಸ್ ಸರ್ಕಾರ ವಿವಾದವನ್ನು ಕೆದಕುತ್ತಿದೆ ಪ್ರಸ್ತುತ ಮುಖ್ಯಮಂತ್ರಿ ಬದಲಾವಣೆಯ ಬಗ್ಗೆ ಕೊಳ್ಳಿ ಇಡುವ ಮೂಲಕ ವಿವಾದವನ್ನು ಕೆಣಕುತ್ತಿದೆ. ಅಧಿಕಾರ ಹಂಚಿಕೆಯ ವಿವಾದ ರಾಜ್ಯದಲ್ಲಿ ವ್ಯಾಪಕ ಚರ್ಚೆಯಾಗುತ್ತಿರುವ ಹಂತದಲ್ಲಿ ವಿವಾದಿತ ಕಾನೂನುಗಳನ್ನು ಮುನ್ನಡೆಗೆ ತರಲಾಗುತ್ತಿದೆ ಎಂಬ ಆರೋಪಗಳು ಕೇಳಿ ಬಂದಿವೆ.

2025 ನೇ ಸಾಲಿನಲ್ಲಿ ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ ನಡೆದಿದ್ದು, 100 ಕೋಟಿ ರೂಪಾಯಿಗಳಿಗೂ ಹೆಚ್ಚಿನ ಹಣ ಖರ್ಚು ಮಾಡಲಾಗಿದೆ. ಅದಕ್ಕೆ ಸಂಪುಟದಲ್ಲಿ ಘಟನೋತ್ತರ ಅನುಮೋದನೆ ನೀಡಲಾಗಿದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಗಣಕೀಕರಣಕ್ಕಾಗಿ ಕೇಂದ್ರ ಸರ್ಕಾರದ ನೆರವು ಬಳಕೆಗೆ ಖಾಸಗಿ ಸಂಸ್ಥೆಗೆ ಗುತ್ತಿಗೆ ನೀಡುವ ಬಗ್ಗೆಯೂ ಚರ್ಚಿಸಲಾಗಿದೆ. ಕರ್ನಾಟಕ ಒಳನಾಡು ನೌಕೆ ನಿಯಮಗಳ ಬಗ್ಗೆ ವಿಚಾರ ವಿನಿಮಯ ನಡೆದಿದೆ.

## ಕೆಎಸ್‌ಡಿಎಲ್‌ನಲ್ಲಿ 1,000 ಕೋಟಿ ಅವ್ಯವಹಾರ
### ಜೆಡಿಎಸ್ ಶಾಸಕ ಹೆಚ್.ಟಿ ಮಂಜು ಬಾಂಬ್

• ಉದಯವಾಹಿನಿ, ಬೆಂಗಳೂರು



ಮೈಸೂರು ಸ್ಯಾಂಡಲ್ ಸೋಪ್ ಖ್ಯಾತಿಯ ಕರ್ನಾಟಕ ಸಾಬೂನು ಹಾಗೂ ಮಾರ್ಜಕ ಸಂಸ್ಥೆಯಲ್ಲಿ ಗಂಧದೆಣ್ಣೆ ಖರೀದಿಯಲ್ಲಿ ಸಾವಿರಾರು ಕೋಟಿ ರೂಪಾಯಿ ಅವ್ಯವಹಾರ ಆರೋಪ ಕೇಳಿಬಂದಿದೆ. ವಿಧಾನಸೌಧದಲ್ಲಿ ಸುದ್ದಿಗೋಷ್ಠಿ ನಡೆಸಿದ ಕೆ.ಆರ್ ಪೇಟೆ ಕ್ಷೇತ್ರದ ಜೆಡಿಎಸ್ ಶಾಸಕ ಹೆಚ್.ಟಿ ಮಂಜು ತೈಲ ಖರೀದಿ ಟೆಂಡರ್ ನಲ್ಲಿ ಸುಮಾರು 1,000 ಕೋಟಿ ಅವ್ಯವಹಾರ ನಡೆದಿದೆ. ಈ ಹಗರಣದಲ್ಲಿ ಅಧಿಕಾರಿಗಳು, ಶಾಸಕರು, ಸಚಿವರು ಭಾಗಿಯಾಗಿದ್ದಾರೆ. ಸರ್ಕಾರಕ್ಕೆ ಕಿಕ್‌ಬ್ಯಾಕ್ ಹೋಗಿದೆ ಎಂದು ಗಂಭೀರವಾಗಿ ಆರೋಪ ಮಾಡಿದ್ರು.

ಸಾಬೂನು ಮತ್ತು ಮಾರ್ಜಕ ತಯಾರಿಕೆಯಲ್ಲಿ ಬಳಸುವ ತೈಲ ಸರಬರಾಜಿಗೆ ಬೇರೆ ಕಂಪನಿಗೆ ಅವಕಾಶ ನೀಡದೇ, ಒಂದೇ ಕಂಪನಿಗೆ ಟೆಂಡರ್‌ಗೆ ಅವಕಾಶ ಕೊಡಲಾಗಿದೆ. 2019ರಲ್ಲಿಯೇ ಬ್ಲ್ಯಾಕ್‌ಲಿಸ್ಟ್‌ನಲ್ಲಿರುವ ಕಂಪನಿಗೆ ಟೆಂಡರ್ ಕೊಡಲಾಗಿದೆ. 2022, 2023ರಲ್ಲಿ ಒಂದು ಕೆ.ಜಿಗೆ ಸ್ಯಾಂಡಲ್ ಆಯಿಲ್‌ಗೆ 2,24,655 ರೂಪಾಯಿ ಇತ್ತು. ನಾನು ಪತ್ರ ಬರೆದ ನಂತರ 2025ರಲ್ಲಿ ಸ್ಯಾಂಡಲ್ ಆಯಿಲ್ 93,116 ರೂ ಬೆಲೆ ಮಾಡುತ್ತಾರೆ ಎಂದು ಆರೋಪಿಸಿದ್ರು.

ಅಂದರೆ ಹಿಂದಿನ ಬೆಲೆಗಿಂತ ಕೆಜಿ ಗೆ 1.2 ಲಕ್ಷ ಕಡಿಮೆ ಬೆಲೆ ಕೊಟ್ಟು ಖರೀದಿ ಮಾಡಿದ್ದಾರೆ. ಈವರೆಗೆ 11,000 ಕೆ.ಜಿ ಸ್ಯಾಂಡಲ್ ವುಡ್ ತೈಲವನ್ನ 1.2 ಲಕ್ಷಕ್ಕೂ ಅಧಿಕ ದರ ನೀಡಿ ಖರೀದಿ ಮಾಡಿದ್ದಾರೆ. ಇದರಿಂದ ಕಂಪನಿಗೆ ಸುಮಾರು 132 ಕೋಟಿಗೂ ಹೆಚ್ಚು ನಷ್ಟ ಉಂಟಾಗಿದೆ. 1000 ಕೋಟಿಗೂ ಹೆಚ್ಚು ಅವ್ಯವಹಾರ ಆಗಿದೆ.

ಒಟ್ಟು 1,700 ಕೋಟಿ ವ್ಯವಹಾರದಲ್ಲಿ 1 ಸಾವಿರ ಕೋಟಿ ಅವ್ಯವಹಾರ ಆಗಿದೆ. ಎಸ್‌ಐಟಿ ತನಿಖೆ ಆಗಬೇಕು ಎಂದು ಹೆಚ್.ಟಿ ಮಂಜು ಒತ್ತಾಯಿಸಿದರು.

# ಕಾಂಗ್ರೆಸ್ ಬಣ ಬಡಿದಾಟ: ಧಿಡೀರ್ ದೆಹಲಿಗೆ ತೆರಳಿದ ಯಡಿಯೂರಪ್ಪ

**• ಕರ್ನಾಟಕದ ಬೆಳವಣಿಗೆಗಳ ಕುರಿತಂತೆ, ಚರ್ಚೆ ನಡೆಸಿ ತಮ್ಮ ಪುತ್ರ ವಿಜಯೇಂದ್ರ ಪರ ಲಾಭಿ ನಡೆಸಲಿದ್ದಾರೆ**

• ಉದಯವಾಹಿನಿ, ಬೆಂಗಳೂರು

ಒಂದು ಕಡೆ ಬಿಜೆಪಿ ಭಿನ್ನಮತೀಯ ನಾಯಕರು ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಅವರ ಬದಲಾವಣೆಗೆ ಪಟ್ಟು ಹಿಡಿದಿರುವ ಬೆನ್ನಲ್ಲೇ, ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಅವರು ಇದೀಗ ತಮ್ಮ ಪುತ್ರನ ರಾಜಕೀಯ ಭವಿಷ್ಯವನ್ನು ಗಟ್ಟಿಗೊಳಿಸಲು ಬಹಿರಂಗವಾಗಿಯೇ ಅಖಾಡಕ್ಕೆ ಧುಮುಕಿದ್ದಾರೆ.

ಯಾವುದೇ ಅಧಿಕೃತ ಕಾರ್ಯಕ್ರಮ ಇಲ್ಲದಿದ್ದರೂ ಯಡಿಯೂರಪ್ಪ ಅವರು ಏಕಾಏಕಿ ದೆಹಲಿಗೆ ತೆರಳಿರುವುದು ಸಾಕಷ್ಟು ಕುತೂಹಲ ಮೂಡಿಸಿದೆ. ದೆಹಲಿಯಲ್ಲಿ ಬಿಜೆಪಿ ವರಿಷ್ಠರ ಭೇಟಿಗೆ ತೆರಳಿರುವ ಅವರು ಕರ್ನಾಟಕದ ಬೆಳವಣಿಗೆಗಳ ಕುರಿತಂತೆ, ಚರ್ಚೆ ನಡೆಸಿ ತಮ್ಮ ಪುತ್ರ ವಿಜಯೇಂದ್ರ ಪರ ಲಾಭಿ ನಡೆಸಲಿದ್ದಾರೆ ಎನ್ನಲಾಗಿದೆ.

ಇನ್ನೊಂದು ಮೂಲಗಳ ಪ್ರಕಾರ ಕರ್ನಾಟಕದಲ್ಲಿ ಮುಖ್ಯಮಂತ್ರಿ ಕುರ್ಚಿಗಾಗಿ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಬಣಗಳ ನಡುವೆ ಬಹಿರಂಗವಾಗಿ ಕುಸ್ತಿ ನಡೆಯುತ್ತಿದ್ದು ಇದರ ಬಗ್ಗೆ ದೆಹಲಿ ವರಿಷ್ಠರು ಮಾಹಿತಿ ಪಡೆಯಲಿದ್ದಾರೆ ಎಂದು ಗೊತ್ತಾಗಿದೆ. ಕರ್ನಾಟಕದ ಬೆಳವಣಿಗೆಗಳ ಕುರಿತು ಸಮಗ್ರ ವರದಿ ನೀಡಬೇಕೆಂದು ಕೆಲ ದಿನಗಳ ಹಿಂದೆ ದೆಹಲಿ ವರಿಷ್ಠರಿಂದ ಮೌಖಿಕ ಸೂಚನೆ ಬಂದಿತ್ತು. ತಮ್ಮದೇ ಆದ ಆಪ್ತ ಮೂಲಗಳಿಂದ ಮಾಹಿತಿಯನ್ನು ಕಲೆ ಹಾಕಿರುವ ಅವರು, ಕಾಂಗ್ರೆಸ್‌ನ ಬಣ ಬಡಿದಾಟದ ಕುರಿತು ಕೇಂದ್ರ ಗಹ ಸಚಿವ ಅಮಿತ್ ಶಾ ಅವರಿಗೆ ರಹಸ್ಯ ವರದಿಯನ್ನು ನೀಡಲಿದ್ದಾರೆ ಎಂದು ತಿಳಿದು ಬಂದಿದೆ.ಇನ್ನೊಂದು ಮೂಲಗಳ ಪ್ರಕಾರ, ದೆಹಲಿಯಲ್ಲಿ ಮಾಜಿ ಸಚಿವ ರಮೇಶ್ ಜಾರಕಿಹೊಳಿ ನೇತತ್ವದ ತಂಡ ಪಕ್ಷದ ಕೆಲವು ವರಿಷ್ಠರನ್ನು ಭೇಟಿಯಾಗಿ ವಿಜಯೇಂದ್ರ ಅವರನ್ನು ರಾಜ್ಯಾಧ್ಯಕ್ಷ ಸ್ಥಾನದಿಂದ ಬದಲಾಯಿಸಿ ಪಕ್ಷ ಮತ್ತು ಸಂಘ ಪರಿವಾರ ಹಿನ್ನೆಲೆಯುಳ್ಳವರನ್ನು ನೇಮಕ ಮಾಡಬೇಕೆಂದು ಪಟ್ಟು ಹಿಡಿದಿದ್ದು, ರಾಜ್ಯ ಉಸ್ತುವಾರಿ ಡಾ.ರಾಧ ಮೋಹನ್ ಅಗರ್ ವಾಲ್ ಸೇರಿದಂತೆ ದೆಹಲಿಯಲ್ಲಿ ಕೆಲವು ಪ್ರಮುಖರನ್ನು ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ. ಇದರಿಂದ ತುಸು ಅಧೀರರಾದಂತೆ ಕಂಡುಬಂದಿರುವ ಯಡಿಯೂರಪ್ಪ ಪುತ್ರನ ರಾಜಕೀಯ ಭವಿಷ್ಯವನ್ನು ಮತ್ತಷ್ಟು ಗಟ್ಟಿಗೊಳಿಸಲು ದೆಹಲಿಗೆ ದೌಢಾಯಿಸಿದ್ದಾರೆ ಎನ್ನಲಾಗುತ್ತಿದೆ.

ಬಿಜೆಪಿಯಲ್ಲಿ ಈಗಲೂ ಯಡಿಯೂರಪ್ಪ ಮಾತಿಗೆ ತೂಕವಿದೆ. ಯಾವುದೇ ಪ್ರಮುಖ ನೇಮಕಾತಿ ಸೇರಿದಂತೆ ಕೆಲವು ಮಹತ್ವದ ವಿಷಯಗಳಲ್ಲಿ ಅವರ ಮಾತನ್ನು ಪಕ್ಷದ ವರಿಷ್ಠರು ತೆಗೆದು ಹಾಕುವುದಿಲ್ಲ. ಕರ್ನಾಟಕಕ್ಕೆ ಯಾವುದೇ ಸಂದರ್ಭದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಆಯ್ಕೆ ಮಾಡಬಹುದೆಂಬ ಸುಳಿವು ಅರಿತೇ ಯಡಿಯೂರಪ್ಪ ದೆಹಲಿಗೆ ಬಂದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈ ಬಗ್ಗೆ ಯಾವುದೇ ಗುಟ್ಟು ಬಿಟ್ಟು ಕೊಡದ ಅವರ ಆಪ್ತರು, ಇದೊಂದು ಖಾಸಗಿ ಭೇಟಿ ಎಂದು ತೇಪೆ ಹಚ್ಚುವ ಕೆಲಸ ಮಾಡುತ್ತಿದ್ದಾರೆ. ಪ್ರಸ್ತುತ ಸಂಸತ್ ಅಧಿವೇಶನ ನಡೆಯುತ್ತಿರುವ ಸಂದರ್ಭದಲ್ಲಿ ಬಿಎಸ್‌ವೈ ಕೆಲವು ಪ್ರಮುಖ ನಾಯಕರನ್ನು ಭೇಟಿ ಮಾಡಿ ಕರ್ನಾಟಕದ ಬಿಜೆಪಿ ಅಧ್ಯಕ್ಷ ಸ್ಥಾನವನ್ನು ಅಧಿಕೃತವಾಗಿ ಘೋಷಣೆ ಮಾಡುವಂತೆ ಮನವಿ ಮಾಡಲಿದ್ದಾರೆ.



**ಚದುರಂಗದಾಟದ ಕೇಂದ್ರಬಿಂದು ಬಿಎಸ್ ವೈ**

ಕನಿಷ್ಠಪಕ್ಷ ಮೂರು ವರ್ಷಗಳ ಅವಧಿಗೆ ವಿಜಯೇಂದ್ರ ಅವರನ್ನು ಅಧ್ಯಕ್ಷರಾಗಿ ಘೋಷಣೆ ಮಾಡುವಂತೆ ವರಿಷ್ಠರ ಬಳಿ ಬೇಡಿಕೆ ಸಲ್ಲಿಸಲಿದ್ದಾರೆ ಎಂದು ಗೊತ್ತಾಗಿದೆ. ಅಧ್ಯಕ್ಷ ಸ್ಥಾನ ಎಂಬ ಜೇನುಗೂಡಿಗೆ ತಕ್ಷಣವೇ ಕೈ ಹಾಕದೇ ಕಾದು ನೋಡುವ ತಂತ್ರವನ್ನು ಹೈಕಮಾಂಡ್ ಮಾಡುತ್ತಿದೆ. ಅದಕ್ಕೆ ಕಾರಣ ಅಧ್ಯಕ್ಷ ಗಾದಿಯಲ್ಲಿ ಕುಳಿತಿರುವುದು ಯಾರೋ ಸಾಮಾನ್ಯ ವ್ಯಕ್ತಿಯಲ್ಲ ಬದಲಾಗಿ ಮಾಜಿ ಸಿಎಂ, ಬಿಜೆಪಿ ಶಕ್ತಿ ಬಿಎಸ್ ಯಡಿಯೂರಪ್ಪನವರ ಪುತ್ರ, ಇದು ಅವರಿಗೆ ಎಷ್ಟು ಪ್ಲಸ್ ಆಗಿದೆಯೋ, ಅಷ್ಟೇ ಮೈನಸ್ಸೂ ಕೂಡ ಆಗಿದೆ. ಬಿಎಸ್‌ವೈ ಪುತ್ರ ಎಂಬ ಕಾರಣಕ್ಕೆ ಈಗ ಅವರ ವಿರೋಧಿ ಬಣ ವಿಜಯೇಂದ್ರ ಮುಂದುರಿಕೆಗೆ ವಿರೋಧ ವ್ಯಕ್ತಪಡಿಸುತ್ತಿದೆ. ಇನ್ನೊಂದು ಕಡೆ ವಿಜಯೇಂದ್ರ ಮುಂದುವರೆಯಬೇಕು ಎನ್ನುವ ಬಣ ಇದೆ. ಹೀಗಾಗಿ ಹೈಕಮಾಂಡ್ ಇಲ್ಲಿ ತಾಳೆಯ ಆಟ ಆಡುತ್ತಿದೆ. ಈಗ ಮಗನ ಕುರ್ಚಿ ಭದ್ರಪಡಿಸಲು ಸ್ವತಃ ಬಿಎಸ್‌ವೈ ಅಖಾಡಕ್ಕೆ ಧುಮುಕಿದ್ದಾರೆ. ಪಕ್ಷದ ಚುಕ್ಕಾಣಿ ಹಿಡಿಯುವ ರಾಜ್ಯಾಧ್ಯಕ್ಷ ಸ್ಥಾನಕ್ಕೆ ದೊಡ್ಡ ಮಟ್ಟದ ಲಾಬಿ, ಗುಂಪುಗಾರಿಕೆ ಮತ್ತು ತೆರೆಮರೆಯ ತಂತ್ರಗಾರಿಕೆಗಳು ಶುರುವಾಗಿವೆ. ಈ ಚದುರಂಗದಾಟದ ಕೇಂದ್ರಬಿಂದು ಬಿ.ಎಸ್. ಯಡಿಯೂರಪ್ಪ.

ಬಿಹಾರ ಚುನಾವಣೆ ಬಳಿಕ ಕರ್ನಾಟಕ ಬಿಜೆಪಿಯಲ್ಲಿ ಸಂಘಟನಾತಕ ಬದಲಾವಣೆ ಮಾಡಬಹುದೆಂಬ ನಿರೀಕ್ಷೆ ಇದೆ. ಈ ಬೆನ್ನಲ್ಲೇ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಪ್ರಮುಖರನ್ನು ಭೇಟಿ ಮಾಡಿ ಮಹತ್ವದ ಮಾತುಕತೆ ನಡೆಸಲಿದ್ದಾರೆ. ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಮುಂದುವರಿಕೆಗೆ ಯಡಿಯೂರಪ್ಪ ಅವರ ಬೆಂಬಲಿಗರು ಆಶಯ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಬಿಜೆಪಿ ವರಿಷ್ಠರು ನಿರ್ಧಾರ ಇನ್ನೂ ತಿಳಿಸಿಲ್ಲ.ರಾಜ್ಯ ಬಿಜೆಪಿ ಅಧ್ಯಕ್ಷರಾಗಿ ಬಿ.ವೈ. ವಿಜಯೇಂದ್ರ ಅವರ ಮುಂದುವರಿಕೆಗೆ ಯಡಿಯೂರಪ್ಪ ಅವರ ಬೆಂಬಲಿಗರು ಮತ್ತು ಸ್ವತಃ ಯಡಿಯೂರಪ್ಪ ಅವರ ಆಶಯವಾಗಿದೆ. ಆದರೆ, ಬಿಜೆಪಿ ವರಿಷ್ಠರು ಈ ಬಗ್ಗೆ ಇನ್ನೂ ಯಾವುದೇ ನಿರ್ಧಾರ ಪ್ರಕಟಿಸಿಲ್ಲ. ಹೀಗಾಗಿ, ಬಿಎಸ್ ಯಡಿಯೂರಪ್ಪ ಅವರು ಪ್ರಧಾನಿಯನ್ನು ಭೇಟಿ ಮಾಡಿ ಮಾತುಕತೆ ನಡೆಸಲಿದ್ದಾರೆ ಎನ್ನಲಾಗಿದೆ.

### ಯಡಿಯೂರಪ್ಪಗೆ ಹೈಕಮಾಂಡ್‌ನಿಂದ ಸೂಚನೆ

ಇತ್ತೀಚೆಗೆ, ಬಿಹಾರ ಚುನಾವಣೆ ಸಂಬಂಧಿಸಿದ ಬಿಜೆಪಿ ಸಂಸದೀಯ ಮಂಡಳಿ ಮತ್ತು ಕೇಂದ್ರ ಚುನಾವಣಾ ಸಮಿತಿ ಸಭೆಗಳಿಗೆ ಹಾಜರಾಗುವಂತೆ ಯಡಿಯೂರಪ್ಪ ಅವರಿಗೆ ಹೈಕಮಾಂಡ್‌ನಿಂದ ಸೂಚನೆ ಬಂದಿತ್ತು. ಯಡಿಯೂರಪ್ಪ ಅವರ ಬೆಂಬಲಿಗರು ತಮ್ಮ ನಾಯಕನ ಪುತ್ರ, ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ತಮ್ಮ ಸ್ಥಾನದಲ್ಲಿ ಮುಂದುವರಿಯಬೇಕು ಎಂದು ಬಯಸುತ್ತಿದ್ದಾರೆ. ಯಡಿಯೂರಪ್ಪ ಅವರೂ ತಮ್ಮ ಪುತ್ರನ ರಾಜಕೀಯ ಭವಿಷ್ಯದ ದೃಷ್ಟಿಯಿಂದ ಪ್ರಯತ್ನಿಸುತ್ತಿದ್ದಾರೆ. ಆದರೆ, ಬಿಜೆಪಿ ವರಿಷ್ಠರು ಈ ವಿಚಾರದಲ್ಲಿ ತಮ್ಮ ನಿಲುವನ್ನು ಇನ್ನೂ ಸ್ಪಷ್ಟಪಡಿಸಿಲ್ಲ.!

**ಈ ದಿನದ ದರ** ಪೆಟ್ರೋಲ್: 102.92 ₹/L | ಡೀಸೆಲ್ : 91.31 ₹/L | ಬಂಗಾರ: ₹12,993/Gram(24ct) ₹11,910/Gram(22ct) | ಬೆಳ್ಳಿ: ₹187.00/Gram



## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
**ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ**
**ರಾಮೋಹಳ್ಳಿ**

### ಸಿದ್ಧಾರೂಢರ ದೀನ ದಲಿತ ಕಾಳಜಿ

ಸಿದ್ಧಾರೂಢರು ಬ್ರಹ್ಮಜ್ಞಾನಿಗಳು. ಮೇಲು ಕೀಳು ಅವರಲ್ಲಿರಲಿಲ್ಲ.ಮಹಿಳೆ ಮಕ್ಕಳ, ಬಡಬಗ್ಗರ ದೀನ ದಲಿತರ ತುಳಿತಕ್ಕೊಳಗಾದವರ ಬಗ್ಗೆ ಅವರಿಗೆ ವಿಶೇಷ ಕಾಳಜಿ. ಒಮ್ಮೆ ಹಿಂದುಳಿದವನೊಬ್ಬನನ್ನು ಊಟದ ಪಂಕ್ತಿಯಿಂದ ಯಾವನೋ ಒಬ್ಬನು ಎಬ್ಬಿಸಿ ಕಳಿಸಿದನಂತೆ. ಇದನ್ನು ತಿಳಿದ ಸಿದ್ಧಾರೂಢರು ಆತನನ್ನು ಕರೆಸಿ ತಮ್ಮ ಪಕ್ಕದಲ್ಲೇ ಕುಳ್ಳಿರಿಸಿಕೊಂಡು ಊಟ ಮಾಡಿದರಂತೆ. ಸಾವಿರದೊಂಬೈನೂರಾ ಇಪ್ಪತ್ತರಲ್ಲಿ ಸರ್ ಸಿದ್ಧಪ್ಪ ಕಂಬಳಿ ಹುಬ್ಬಳ್ಳಿಯ ಇಂದಿನ ನೆಹರೂ ಮೈದಾನದಲ್ಲಿ ಶೋಷಿತರ ಬೃಹತ್ ಸಮಾವೇಶ ಏರ್ಪಡಿಸಿದ್ದರು.

ಮಹಾರಾಷ್ಟ್ರದ ಛತ್ರಪತಿ ಶಾಹು ಮಹಾರಾಜ್ ಇದರ ಮುಖ್ಯ ಅತಿಥಿಯಾಗಿದ್ದರು. ಮುಂದೆ ಮೈಸೂರು ಮಹಾರಾಜರ ದಿವಾನ್ ಆಗಿದ್ದ ಮದ್ರಾಸ್‌ನ ಅರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಮುಂತಾದ ಘಟಾನುಘಟಿಗಳು ಈ ಸಮಾವೇಶದಲ್ಲಿ ಭಾಗಿಯಾಗಿದ್ದರು. ಈ ಐತಿಹಾಸಿಕ ಸಮಾವೇಶದ ಸಾನ್ನಿಧ್ಯವನ್ನು ಸಿದ್ಧಾರೂಢರು ವಹಿಸಿದ್ದರು. ಮಹಾರಾಷ್ಟ್ರದಲ್ಲಿ ಮೊದಲ ಬಾರಿ ಮೀಸಲಾತಿಯನ್ನು ಜಾರಿಗೆ ತರುವ ಮೂಲಕ ಅಸ್ಪೃಶ್ಯರು ಮತ್ತು ಹಿಂದುಳಿದ ವರ್ಗದವರಿಗೆ ಶಿಕ್ಷಣದೊಂದಿಗೆ ಅಧಿಕಾರದಲ್ಲಿ ಸಮಪಾಲು ಮತ್ತು ಸಾಮಾಜಿಕ ಸ್ಥಾನ ಮಾನ ದೊರಕಿಸಿಕೊಟ್ಟ ಶಾಹು ಮಹಾರಾಜ್ ಸಿದ್ಧಾರೂಢರ ಪರಮಾಪ್ತರು. ಇಂದಿನ ಮಠಾಧೀಶರು ತಮ್ಮ ಹುಟ್ಟಿನ ಜಾತಿಪರ ಹೋರಾಟದಲ್ಲಿರುವುದನ್ನು ಲಿಂಗಾಯತರಾಗಿ ಹುಟ್ಟಿಯೂ ದೀನ ದಲಿತಪರವಾಗಿದ್ದ ಸಿದ್ಧಾರೂಢರೊಂದಿಗೆ ಹೋಲಿಸಿ ಅಳೆಯಬೇಕು.

## ಕೆಂಗೇರಿ ಮೆಟ್ರೋ ನಿಲ್ದಾಣದಲ್ಲಿ ಟ್ರ್ಯಾಕ್‌ಗೆ ಹಾರಿ ವ್ಯಕ್ತಿ ಆತ್ಮಹತ್ಯೆ

• ಉದಯವಾಹಿನಿ ಬೆಂಗಳೂರು

ಮೆಟ್ರೋ ರೈಲು ಬರುತ್ತಿದ್ದಂತೆ ಟ್ರ್ಯಾಕ್‌ಗೆ ಹಾರಿ ವ್ಯಕ್ತಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬೆಂಗಳೂರಿನ ನೇರಳೆ ಮಾರ್ಗದ ಕೆಂಗೇರಿ ಮೆಟ್ರೋ ನಿಲ್ದಾಣದಲ್ಲಿ ನಡೆದಿದೆ.ಮೃತ ವ್ಯಕ್ತಿಯನ್ನು ವಿಜಯಪುರ ಮೂಲದ ಶಾಂತಗೌಡ ಪಾಟೀಲ್ (38) ಎಂದು ಗುರುತಿಸಲಾಗಿದೆ. ಬೆಂಗಳೂರಿನ ರಾಜಾಜಿನಗರದಲ್ಲಿ ಪತ್ನಿ ಹಾಗೂ ಪುಟ್ಟ ಕಂದಮ್ಮನೊಂದಿಗೆ ವಾಸಿಸುತ್ತಿದ್ದು, ಮಾನಸಿಕ ಖಿನ್ನತೆಗೆ ಒಳಗಾಗಿದ್ದರು ಎಂದು ತಿಳಿದು ಬಂದಿದೆ. ಶುಕ್ರವಾರ ಬೆಳಗ್ಗೆ ಈ ಅವಘಡ ಸಂಭವಿಸಿದೆ. ಮೆಟ್ರೋ ಬರುತ್ತಿದ್ದಂತೆಯೇ ವ್ಯಕ್ತಿ ಟ್ರ್ಯಾಕ್‌ಗೆ ಹಾರಿದ್ದು, ಪರಿಣಾಮ ಮೆಟ್ರೋ ಹರಿದು ವ್ಯಕ್ತಿ ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾನೆ. ಘಟನಾ ಸ್ಥಳಕ್ಕೆ ಕೆಂಗೇರಿ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ಮೆಟ್ರೋ ಸಿಬ್ಬಂದಿ ಘಟನೆಯ ಕುರಿತು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಪೊಲೀಸರು ಮತ್ತು ವೈದ್ಯಕೀಯ ಸಿಬ್ಬಂದಿ ಟ್ರ್ಯಾಕ್ ಮೇಲಿದ್ದ ಶವವನ್ನು ತೆರವುಗೊಳಿಸಿದ್ದಾರೆ. ಆತ್ಮಹತ್ಯೆ ಮಾಡಿಕೊಂಡ ಹಿನ್ನೆಲೆ ನೇರಳೆ ಮಾರ್ಗದಲ್ಲಿ ರೈಲುಗಳ ಓಡಾಟದಲ್ಲಿ ವ್ಯತ್ಯಯ ಉಂಟಾಗಿ, ಚಲ್ಲಘಟ್ಟದಿಂದ ನಾಯಂಡಹಳ್ಳಿವರೆಗೆ ಮೆಟ್ರೋ ಓಡಾಟವನ್ನು ಸ್ಥಗಿತಗೊಳಿಸಲಾಗಿತ್ತು. ಸದ್ಯ ಮೆಟ್ರೋ ಎಂದಿನಂತೆ ಸಂಚಾರ ಆರಂಭಿಸಿದೆ.

## ಶ್ರೀದತ್ತಜಯಂತಿ ಆಚರಣೆ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಶ್ರೀ ದತ್ತ ಜಯಂತಿ ಅಂಗವಾಗಿ ವಸಂತ ಪುರದಲ್ಲಿರುವ ಶ್ರೀ ಸಾಯಿ ಆಧ್ಯಾತ್ಮಿಕ ಕೇಂದ್ರದ ಸಾಯಿ ಮಂದಿರದಲ್ಲಿ ಗುರುವಾರ ಶ್ರೀ ದತ್ತ ಜಯಂತಿಯನ್ನು ಶ್ರೀ ದತ್ತ ದೇವರಿಗೆ ವಿಶೇಷ ಅಲಂಕಾರ ಪೂಜೆಯೊಂದಿಗೆ ವಿಜೃಂಭಣೆಯಿಂದ ಆಚರಿಸಲಾಯಿತು. ಬೆಳಿಗ್ಗೆ ದತ್ತ ಹೋಮ, ಪೂರ್ಣಹುತಿ, ನಡೆಯಿತು ನಂತರ ಉಚಿತ ಮಹಾ ಅನ್ನ ಪ್ರಸಾದ ಏರ್ಪಡಿಸಲಾಗಿತ್ತು ಸುಮಾರು ಎರಡು ಸಾವಿರ ಭಕ್ತರು ದೇವರ ದರ್ಶನ ಪಡೆದು ಮಹಾ ಪ್ರಸಾದ ಸ್ವೀಕರಿಸಿದರು.

## ಬಿಜೆಪಿ ಶಾಶ್ವತವಾಗಿ ವಿಪಕ್ಷದಲ್ಲಿರುತ್ತೆ ಅಶೋಕ್ ವಿರುದ್ಧ ಎಂಬಿಪಿ ಕಿಡಿ

• ಉದಯವಾಹಿನಿ ಬೆಂಗಳೂರು

ಅಶೋಕ್ ಅವರನ್ನು ವಿಪಕ್ಷ ನಾಯಕನ ಸ್ಥಾನದಿಂದ ಬಿಜೆಪಿ ಇಳಿಸದೇ ಹೋದ್ರೆ ಶಾಶ್ವತವಾಗಿ ವಿಪಕ್ಷದಲ್ಲಿ ಇರುತ್ತದೆ ಅಂತ ಸಚಿವ ಎಂಬಿ ಪಾಟೀಲ್ ಲೇವಡಿ ಮಾಡಿದ್ದಾರೆ. ಕಾಂಗ್ರೆಸ್ ಸರ್ಕಾರ 63% ಕಮೀಷನ್ ಸರ್ಕಾರ ಎಂಬ ಆರ್. ಅಶೋಕ್ ಹೇಳಿಕೆ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಉಪ ಲೋಕಾಯುಕ್ತರು ಹೇಳಿದ್ದು 2019 ಆಗಸ್ಟ್‌ನಲ್ಲಿ ಹೇಳಿದ್ದು. ಆರ್. ಅಶೋಕ್ ಅಂತಹವರನ್ನು ವಿಪಕ್ಷ ನಾಯಕರಾಗಿ ಇಟ್ಟುಕೊಂಡರೆ ಬಿಜೆಪಿ ತಲೆತಲಾಂತರವಾಗಿ ಸೂರ್ಯ ಚಂದ್ರ ಇರೋವರೆಗೂ ಬಿಜೆಪಿ ವಿಪಕ್ಷವಾಗಿಯೇ ಇರುತ್ತದೆ.

ಅಶೋಕ್ ಅವರು ಅಜ್ಞಾನದಿಂದ ಬೇಜವಾಬ್ದಾರಿಯಿಂದ ಮಾತಾಡಿದ್ದಾರೆ ಅಂತ ಕಿಡಿಕಾರಿದರು. ವಿಪಕ್ಷ ನಾಯಕ ಅಂದರೆ ಶ್ಯಾಡೋ ಸಿಎಂ ಅಂತಾರೆ. ಅಂತಹವರು 2019 ಸರ್ಕಾರದ ಬಗ್ಗೆ ಮಾತಾಡಿದ್ದನ್ನ ಈ ಸರ್ಕಾರಕ್ಕೆ ಅಂತ ಮಾತಾಡ್ತಾರೆ. ವಿಪಕ್ಷ ನಾಯಕರು ಚೆಕ್ ಮಾಡಿ ಮಾತಾಡಬೇಕು. ಮಾಹಿತಿ ಪಡೆಯದೇ ಮಾತಾಡಿ ಇಷ್ಟು ನಗೆ ಪಾಟಲಿಗೆ ಈಡಾಗಿದ್ದಾರೆ. ಬಿಜೆಪಿ ಅವರು ಎಷ್ಟು ಬೇಗ ವಿಪಕ್ಷ ನಾಯಕರನ್ನ ಬದಲಾವಣೆ ಮಾಡುತ್ತೀರೋ ಅಷ್ಟು ಒಳ್ಳೆಯದು.ಇಲ್ಲದೆ ಹೋದ್ರೆ, ಶಾಶ್ವತವಾಗಿ ವಿಪಕ್ಷವಾಗಿ ಉಳಿಯಬೇಕಾಗುತ್ತದೆ ಎಂದು ಭವಿಷ್ಯ ನುಡಿದರು.

## ಸಪ್ತಮಾತೃಕ ಅದಿಶಕ್ತಿ ದೇವಸ್ಥಾನ ಜೀರ್ಣೋದ್ಧಾರ ನೌಕರರ ಕ್ಷೇಮಾಭಿವೃದ್ಧಿ ಸಂಘ ಸಹಕಾರ


ಉದಯವಾಹಿನಿ ಚಿತ್ರ


• ಉದಯವಾಹಿನಿ, ಬೆಂಗಳೂರು

ಜಿಬಿಎ ಕೇಂದ್ರ ಕಛೇರಿ ಅವರಣದಲ್ಲಿರುವ ಬಹಳ ಶಕ್ತಿಶಾಲಿಯಾದ ಸಪ್ತಮಾತೃಕ ಅದಿಶಕ್ತಿ ದೇವಸ್ಥಾನ ಜೀರ್ಣೋದ್ಧಾರ ಕಾರ್ಯಕ್ರಮ ಸಂಪೂರ್ಣಗೊಂಡಿದ್ದು. ಜನವರಿ 2026ಕ್ಕೆ ಲೋಕರ್ಪಣೆಯಾಗಲಿದೆ. ದೇವಸ್ಥಾನದಲ್ಲಿ ಸಪ್ತಮಾತೃಕೆಯರು, ಗಣೇಶ, ನವಗ್ರಹಗಳು ಸುಸಜ್ಜಿತ ದೈವಸಾನಿಧ್ಯ ರೂಪಗೊಂಡಿದೆ.

ಇದೇ ಸಂದರ್ಭದಲ್ಲಿ ದೇವಸ್ಥಾನ ಜೀರ್ಣೋದ್ಧಾರದಲ್ಲಿ ಸಹಕಾರ ನೀಡಿದ ಎ.ಅಮೃತ್ ರಾಜ್‌ರವರು ಮಾಧ್ಯಮಗಳಿಗೆ ಮಾಹಿತಿ ನೀಡಿದರು. ಅಧಿಶಕ್ತಿ ದೇವಸ್ಥಾನ 400ವರ್ಷ ಹಳೆಯದಾದ ದೇವಸ್ಥಾನವಾಗಿದೆ ತುಂಬ ಹಳೆಯ ಕಟ್ಟಡ, ಎಣ್ಣೆ ದೀಪಗಳು ಬೆಳಗುವುದರಿಂದ ದೇವಸ್ಥಾನ ಶೀಥಿಲಾ ವ್ಯವಸ್ಥೆ ತಲುಪಿತು. ಬರುವ ಭಕ್ತರಿಗೆ ಸೂಕ್ತ ವ್ಯವಸ್ಥೆ ಇರಲ್ಲಿಲ. ದೇವಸ್ಥಾನ ಆಡಳಿತ ಮಂಡಳಿ, ಅರ್ಚಕರು ಜಿಬಿಎ ಪಾಲಿಕೆಗಳ ಅಧಿಕಾರಿ, ನೌಕರರ ಕ್ಷೇಮಾಭಿವೃದ್ಧಿ ಸಂಘದ ದೇವಸ್ಥಾನದ ನವೀಕರಣ ಮಾಡಲು ಸಹಕಾರಿಸಬೇಕು ಎಂದು ಮನವಿ ಸಲ್ಲಿಸಿದರು. ಅವರ ಮನವಿಗೆ ಸ್ಪಂದಿಸಿ ಅಧಿಕಾರಿ, ನೌಕರರ ವ್ಯಯಕ್ತಿಕ ದೇಣಿಗೆ, ನೌಕರರ ವೇತನದಲ್ಲಿ ಕಡಾವಣೆ ಮಾಡುವ ಮೂಲಕ ಸಂಗ್ರಹಿಸಿ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಬಳಸಲಾಯಿತು. ಇದೀಗ ದೇವಸ್ಥಾನ ಸಂಪೂರ್ಣ ನವೀಕರಣ ಸುಸಜ್ಜಿತ ದೈವಸ್ಥಳವಾಗಿದೆ. ಜನವರಿಯಲ್ಲಿ ದೇವಸ್ಥಾನ ಲೋಕರ್ಪಣೆಯನ್ನು ಉಪಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್, ಮುಖ್ಯ ಆಯುಕ್ತರು ನೇರವೆರಿಸುವರು.

# ನಾನು ಸತೀಶ್ ಜಾರಕಿಹೊಳಿ ಭೇಟಿಯಾಗಿ ಮಾತಾಡಿದ್ದು ನಿಜ: ಡಿಸಿಎಂ

• ಉದಯವಾಹಿನಿ ಬೆಂಗಳೂರು



ನಾನು ಸತೀಶ್ ಜಾರಕಿಹೊಳಿ ಭೇಟಿಯಾಗಿ ಮಾತಾಡಿದ್ದು ನಿಜ. ರಾಜಕಾರಣದಲ್ಲಿ ಬಾಂಧವ್ಯ, ನೆಂಟಸ್ತನ, ಸ್ನೇಹ ಎಲ್ಲಾ ಇದ್ದೇ ಇರುತ್ತದೆ ಅಂತ ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಸಚಿವ ಸತೀಶ್ ಜಾರಕಿಹೊಳಿ ಭೇಟಿ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ನಾನು ಸತೀಶ್ ಭೇಟಿ ಆಗಿದ್ದು ನಿಜ. ನಾವಿಬ್ಬರು ಕೊಲೀಗ್‌ಗಳು. ಕ್ಯಾಬಿನೆಟ್‌ನಲ್ಲಿ ಇರ್ತೀವಿ, ರಾತ್ರಿ ಊಟಕ್ಕೆ ಸೇರ್ತೀವಿ, ಬೆಳಗ್ಗೆ ತಿಂಡಿಗೆ ಸೇರ್ತೀವಿ ಇವೆಲ್ಲ ಇದ್ದೇ ಇರುತ್ತದೆ. ನಾನು ಎಂಬಿ ಪಾಟೀಲ್ ಒಂದು ಗಂಟೆ ರಾಜ್ಯಕ್ಕೆ ಹೇಗೆ ಇನ್ವೆಸ್ಟರ್ ಕರೆಯಬೇಕು ಅಂತ ಚರ್ಚೆ ಮಾಡಿದ್ದೇವೆ. ಆಂಧ್ರ ಪ್ರದೇಶದ ನಮಗೆ ಕಾಂಪಿಟೇಷನ್ ಬರ್ತಿದೆ. ತಮಿಳುನಾಡು, ತೆಲಂಗಾಣ ಕಾಂಪಿಂಟ್ ಮಾಡ್ತಿದೆ. ನಾವು ಹೇಗೆ ಕಾಂಪಿಟ್ ಮಾಡಬೇಕು ಅಂತ ಚರ್ಚೆ ಮಾಡಿದ್ದೇವೆ. ಅದೇ ರೀತಿ ಸತೀಶ್ ಜಾರಕಿಹೊಳಿ ಭೇಟಿಯಾಗಿ ಮಾತಾಡಿದ್ದೇನೆ ಎಂದರು. ನಾನು ಸತೀಶ್ ರಾತ್ರಿ ಸೇರಿದ್ದು ನಿಜ. ಯಾವುದೋ ಮದುವೆಯಲ್ಲಿ ಸೇರಿಕೊಂಡು ರಾಜ್ಯದ, ಪಕ್ಷದ ವಿಚಾರ ಮಾತಾಡಿಕೊಂಡಿದ್ದೇವೆ.

ನಾವೆಲ್ಲ ಕೊಲೀಗ್‌ಗಳು. ನಾವು ವೈರಿಗಳ ತರಹ ಲೆಕ್ಕ ಹಾಕ್ತಾ ಇದ್ದೀರಾ ನೀವು ಏನ್ ಕುತೂಹಲ ಇಲ್ಲ. ರಾಜಕಾರಣದಲ್ಲಿ ಬಾಂಧವ್ಯ, ನೆಂಟಸ್ತನ, ಸ್ನೇಹ ಎಲ್ಲಾ ಇದ್ದೇ ಇರುತ್ತದೆ ಅಂತ ಮಾರ್ಮಿಕವಾಗಿ ನುಡಿದರು. ಯಾವ ಸರ್ಕಾರದ ಕಮಿಷನ್ ಬಗ್ಗೆ ಉಪ ಲೋಕಾಯುಕ್ತರು ಮಾತಾಡಿದ್ದಾರೆ ಎಂಬುದನ್ನು ವಿಪಕ್ಷ ನಾಯಕ ಅಶೋಕ್ ಮೊದಲು ತಿಳಿದುಕೊಳ್ಳಲಿ. ಉಪ ಲೋಕಾಯುಕ್ತ ಮಾತಾಡಿದ್ದು ಯಾವ ಕಾಲದ್ದು ಅಂತ ಅಶೋಕ್‌ಗೆ ಗೊತ್ತಿಲ್ಲ. ಮೊದಲು ಅಶೋಕ್ ಯಾವ ಕಾಲದ್ದು ರಿಪೋರ್ಟ್ ಯಾವಾಗ ಕೊಟ್ಟಿದ್ದು ಅಂತ ಓದಿಕೊಳ್ಳಲಿ. ಆಮೇಲೆ ನಾನು ಮಾತಾಡ್ತೀನಿ ಅಂತ ತಿರುಗೇಟು ಕೊಟ್ಟರು.

ಕೇಂದ್ರ ಸಚಿವರು ಬ್ಯುಸಿ ಅಂತ ಹೇಳಿದ್ದಕ್ಕೆ 8ನೇ ತಾರೀಖಿನ ಸಭೆ ಮುಂದಕ್ಕೆ ಹಾಕಿದ್ದೇವೆ. ನಿರ್ಮಲಾ ಸೀತಾರಾಮನ್‌ಗೆ ಬಿಲ್ ಇದೆ ಅವತ್ತು. ಜೋಷಿ ಅವರು ಪಿಎಂ ರಿವ್ಯೂ ಇಟ್ಟುಕೊಂಡಿದ್ದಾರೆ ಅಂತೆ. ಸೋಮಣ್ಣ ಆಗಲ್ಲ ಅಂತ ಬರೆದಿದ್ದರು. ಇಬ್ಬರಿಗೂ ಅನುಕೂಲ ಆಗೋ ಇನ್ನೊಂದು ಡೇಟ್ ತಗೊಂಡು ಸಭೆ ಮಾಡ್ತೀವಿ ಅಂತ ತಿಳಿಸಿದರು.

## ಏಳು ದಿನಗಳ ರಾಷ್ಟ್ರೀಯ ಭಾರತೀಯ ಅನುಸಂಧಾನ ಪದ್ಧತಿ ಕುರಿತ ಕಾರ್ಯಾಗಾರ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯ, ವೇದವಿಜ್ಞಾನ ಶೋಧ ಸಂಸ್ಥಾನ ಹಾಗೂ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ನೆರವಿನೊಂದಿಗೆ ಭಾರತೀಯ ಅನುಸಂಧಾನ ಪದ್ಧತಿ ಎಂಬ ಏಳು ದಿನಗಳ ರಾಷ್ಟ್ರಮಟ್ಟದ ಕಾರ್ಯಾಗಾರ ಸಂಸ್ಕೃತ ವಿವಿ ಆವರಣದಲ್ಲಿ ಯಶಸ್ವಿಯಾಗಿ ನೆರವೇರಿತು.

ಸಂಸ್ಕೃತ ಶಾಸ್ತ್ರಗಳಲ್ಲಿ ಹಾಗೂ ಭಾರತೀಯ ವಾಙ್ಮಯದಲ್ಲಿ ಅನುಸಂಧಾನದ ಗುಣಮಟ್ಟ ವೃದ್ಧಿಸುವ ಹಿನ್ನೆಲೆಯಲ್ಲಿ ದೇಶದ ಅನೇಕ ಭಾಗಗಳಿಂದ ನಾನಾ ಶಾಸ್ತ್ರಗಳಲ್ಲಿ ಪರಿಣತರಾದ 70ಕ್ಕೂ ಅಧಿಕ ವಿದ್ವಾಂಸರು ವ್ಯಾಕರಣ, ವೇದಾಂತ, ನ್ಯಾಯ ಮತ್ತಿತರೆ ವಿಚಾರಗಳ ಬಗ್ಗೆ ಗಹನವಾಗಿ ಚರ್ಚಿಸಿದರು.

ಪುರಾತನ ಕಾಲದಿಂದಲೂ ಭಾರತೀಯ ಅನುಸಂಧಾನ ಮತ್ತು ಗ್ರಂಥಸಂರಚನಾ ಪದ್ಧತಿಯು ವಿಶಿಷ್ಟವಾಗಿದ್ದು, ಸ್ವಯಂ ಪೂರ್ಣವಾಗಿ ಬೆಳೆದುಬಂದಿದೆ. ಹಾಗಾಗಿ ಭಾರತೀಯ ಅನುಸಂಧಾನ ಪ್ರವಿಧಿಯು ತನ್ನ ಪರಂಪರೆ, ಶೋಧಸಾಮಗ್ರಿ, ತಂತ್ರ, ರೀತಿ, ಶೈಲಿಗಳು ವಿಭಿನ್ನತೆಯಿಂದ ಕೂಡಿದ್ದು, ಇವುಗಳ ಆಧಾರದ ಮೇಲೆ ವೈಜ್ಞಾನಿಕವಾದ, ಭಾರತೀಯತೆಯಿಂದ ಕೂಡಿದ ಅನುಸಂಧಾನ ಪ್ರವಿಧಿಯನ್ನು ರಚಿಸುವುದು ಕಾರ್ಯಾಗಾರದ ಉದ್ದೇಶವಾಗಿತ್ತು.

ಹಳೆಯ, ಪ್ರಕೃತವಾದ ಶಾಸ್ತ್ರಪದ್ಧತಿಗಳನ್ನು ಭಾರತೀಯತೆಯ ಸೊಗಡಿನೊಂದಿಗೆ ಇಂದಿನ ಶೋಧ ಸಂರಚನೆಗೆ ಅನುಕೂಲವಾಗುವ ಪ್ರವಿಧಿಗಳನ್ನು ಸಂಕಲಿಸುವುದು. ಅಗತ್ಯವಾದ ಮಾಹಿತಿಗಳನ್ನು ಚರ್ಚಿಸಿ ಸಂಯೋಜಿಸುವ, ಮೀಮಾಂಸೆ, ಶಿಕ್ಷಾಶಾಸ್ತ್ರ ಮತ್ತು ಸಾಹಿತ್ಯ ಮುಂತಾದ ಶಾಸ್ತ್ರಗಳಲ್ಲಿನ ಅನುಸಂಧಾನ ಪದ್ಧತಿಗಳನ್ನು ಗಮನಿಸಿ, ಸಂಗ್ರಹಿಸುವುದು. ಪದ್ಧತಿಗಳನ್ನು ವಿಚಾರ ಮಾಡುವ ನಿಟ್ಟಿನಲ್ಲಿ ಚರ್ಚಿಸಲಾಯಿತು.

ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಶ್ರೀನಿವಾಸ ವರಖೇಡಿ ಕಾರ್ಯಾಗಾರ ಉದ್ಘಾಟಿಸಿದರು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಅಹಲ್ಯಾ ಎಸ್. ಅಧ್ಯಕ್ಷತೆ ವಹಿಸಿದ್ದರು. ಪ್ರೊ. ರಾಮಚಂದ್ರ ಜಿ. ಭಟ್, ಪ್ರೊ.ವ್ರಜಭೂಷಣ ಓಜ್ಹಾ, ಕುಲಸಚಿವ ಪ್ರೊ. ವಿ ಗಿರೀಶ್ಚಂದ್ರ, ಪ್ರೊ. ಶಿವಾನಿ ವಿ, ಡಾ. ಭಾಸ್ಕರ ಭಟ್ ಜೋಶಿ ಮತ್ತಿತರರು ಭಾಗವಹಿಸಿದ್ದರು.

# ಸಿಎಂ ಬದಲಾವಣೆ ಅಸಾಧ್ಯ: 'ಹೈ' ಸಂದೇಶ

### ಮುಖ್ಯಮಂತ್ರಿ, ಉಪಮುಖ್ಯಮಂತ್ರಿಯವರ ನಡುವಿನ ಹಗ್ಗ-ಜಗ್ಗಾಟ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಕಾಂಗ್ರೆಸ್ ಪಕ್ಷದ ಭವಿಷ್ಯ, ಮುಂದಿನ ಐದು ರಾಜ್ಯಗಳ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಬದಲಾವಣೆ ಅಸಾಧ್ಯ ಎಂಬ ಸಂದೇಶವನ್ನು ಕಾಂಗ್ರೆಸ್ ಹೈಕಮಾಂಡ್ ರವಾನಿಸಿದ್ದು, ಅದನ್ನು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತಲುಪಿಸಿದ್ದಾರೆ.

ಅಧಿಕಾರ ಹಂಚಿಕೆ ಹಾಗೂ ಸಚಿವ ಸಂಪುಟ ಪುನರ್ ರಚನೆ ಸೇರಿದಂತೆ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹೇಳಿದಂತೆ ನಾನು, ಡಿ.ಕೆ. ಶಿವಕುಮಾರ್ ಕೇಳುತ್ತೇವೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದರು.

ಡಿ.ಕೆ.ಶಿವಕುಮಾರ್ ಕೂಡ ಅದನ್ನು ಅನುಮೋದಿಸಿದ್ದರು. ಎರಡು ಉಪಹಾರ ಕೂಟದ ಬಳಿಕ ಮುಖ್ಯಮಂತ್ರಿ, ಉಪಮುಖ್ಯಮಂತ್ರಿಯವರ ನಡುವಿನ ಹಗ್ಗ-ಜಗ್ಗಾಟ ತಗ್ಗಿದಂತಾಗಿದ್ದು, ಈಗ ತಿಳಿಯಾದ ವಾತಾವರಣ ನಿರ್ಮಾಣವಾಗಿದೆ. ಪಕ್ಷ ಸಂಘಟನೆ ಹಾಗೂ ಮುಂದಿನ ದಿನಗಳಲ್ಲಿ ನಡೆಯುವ ಸ್ಥಳೀಯ ಸಂಸ್ಥೆಗಳ ಚುನಾವಣೆಯತ್ತ ಎಲ್ಲಾ ನಾಯಕರು ದೃಷ್ಟಿ ನೆಟ್ಟಿದ್ದಾರೆ. ಈ ನಡುವೆ ಸಿದ್ದರಾಮಯ್ಯ ಅವರಲ್ಲಿದ್ದ ಗೊಂದಲಕ್ಕೆ ಹೈಕಮಾಂಡ್ ಸಮಾಧಾನ ಹೇಳಿದೆ.

ನಿಮ ಕೆಲಸ ನೀವು ಮುಂದುವರಿಸಿ, ಯಾವುದೇ ಚಿಂತೆ ಬೇಡ ಎಂಬ ಚುಟುಕು ಸಂದೇಶವನ್ನು ಮಂಗಳೂರಿಗೆ ಆಗಮಿಸಿದ್ದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು ಸಿದ್ದರಾಮಯ್ಯನವರಿಗೆ ಸೂಚ್ಯವಾಗಿ ರವಾನಿಸಿದ್ದಾರೆ ಎನ್ನಲಾಗಿದೆ. ಕರ್ನಾಟಕ, ತೆಲಂಗಾಣ ಮತ್ತು ಹಿಮಾಚಲ ಪ್ರದೇಶ ಸೇರಿ ಇಡೀ ದೇಶದಲ್ಲಿ ಮೂರು ರಾಜ್ಯಗಳಲ್ಲಿ ಮಾತ್ರ ಕಾಂಗ್ರೆಸ್ ಆಡಳಿತವಿದೆ. ಕರ್ನಾಟಕದಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಒತ್ತಡಕ್ಕೆ ಮಣಿದು ನಾಯಕತ್ವ ಬದಲಾವಣೆ ಮಾಡಿದರೆ ಅಹಿಂದ ವರ್ಗ ಕಾಂಗ್ರೆಸ್‌ನಿಂದ ದೂರವಾಗುವ ಹೆದರಿಕೆ ಕಾಂಗ್ರೆಸ್‌ನಲ್ಲಿದೆ ಎನ್ನಲಾಗಿದೆ.

**ಭಾರಿ ಪ್ರಮಾಣದ ನಷ್ಟ**

**ನಾಯಕತ್ವ ಬದಲಾವಣೆಯಿಂದಾಗಿ ಕರ್ನಾಟಕದಲ್ಲಿ ಅಧಿಕಾರ ಕಳೆದುಕೊಂಡರೆ ದೇಶದಲ್ಲೇ ಭಾರಿ ಪ್ರಮಾಣದ ನಷ್ಟ ಅನುಭವಿಸಬೇಕಾಗುತ್ತದೆ ಎಂಬ ಲೆಕ್ಕಚಾರ ಕಾಂಗ್ರೆಸ್ ಹೈಕಮಾಂಡ್‌ನಲ್ಲಿದೆ. ಸದ್ಯಕ್ಕೆ ಮೂರು ರಾಜ್ಯಗಳಲ್ಲೂ ಯಥಾಸ್ಥಿತಿ ಮುಂದುವರಿಸಲು ಹೈಕಮಾಂಡ್ ನಿರ್ಧರಿಸಿದೆ. ಈ ಮೊದಲು ರಾಜಸ್ಥಾನ, ಮಧ್ಯಪ್ರದೇಶ, ಪಂಜಾಬ್ ಸೇರಿದಂತೆ ಮತ್ತಿತರ ರಾಜ್ಯಗಳಲ್ಲಿ ಪರ್ಯಾಯ ನಾಯಕತ್ವಕ್ಕೆ ಮಣೆ ಹಾಕುವ ಪ್ರಯೋಗ ಮಾಡಿ ಕಾಂಗ್ರೆಸ್ ಕೈ ಸುಟ್ಟುಕೊಂಡಿದೆ. ಗೆಲ್ಲಬಹುದಾದ ರಾಜ್ಯಗಳನ್ನು ಕಳೆದು ಕೊಂಡಿದೆ.**

ಸಿದ್ದರಾಮಯ್ಯ ಅವರನ್ನು ಬದಲಾ ವಣೆ ಮಾಡಿದರೆ ರಾಜ್ಯದ ಆರ್ಥಿಕ ವ್ಯವಸ್ಥೆ ಕೂಡ ಏರುಪೇರಾಗುವ ಆತಂಕ ಇದೆ. ಇದು ಕಾಂಗ್ರೆಸ್ ಪಕ್ಷ ಚುನಾವಣೆಯಲ್ಲಿ ನೀಡಿದ್ದ ಭರವಸೆಗಳನ್ನು ಈಡೇರಿಸಲಾಗದ ಅಸಹಾಯಕ ಸ್ಥಿತಿ ನಿರ್ಮಿಸಬಹುದು. ಅದು ಮುಂದಿನ ಐದು ರಾಜ್ಯಗಳ ವಿಧಾನಸಭೆ ಚುನಾವಣೆಗಳ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇದೆ ಎನ್ನಲಾಗಿದೆ.ಅಸ್ಸಾಂ, ಕೇರಳ, ಪುದುಚೇರಿ, ತಮಿಳುನಾಡು ಮತ್ತು ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಗಳಿಗೆ 2026ರ ಮೇ, ಜೂನ್ ನಲ್ಲಿ ಚುನಾವಣೆ ನಡೆಯಬೇಕಿದೆ. ಒಟ್ಟು 824 ವಿಧಾನಸಭಾ ಕ್ಷೇತ್ರಗಳ ಈ ರಾಜ್ಯಗಳ ಚುನಾವಣೆ ಕಾಂಗ್ರೆಸ್ ಪಾಲಿಗೆ ಅಳಿವು ಉಳಿವಿನ ಪ್ರಶ್ನೆಯಾಗಿದೆ. ಕರ್ನಾಟಕದಲ್ಲಿ ಒಟ್ಟು 224, ಹಿಮಾಚಲ ಪ್ರದೇಶದಲ್ಲಿ 68, ತೆಲಂಗಾಣದಲ್ಲಿ 119 ವಿಧಾನಸಭಾ ಕ್ಷೇತ್ರಗಳಿದ್ದು, ಕರ್ನಾಟಕ ಹೊರತುಪಡಿಸಿದರೆ ಉಳಿದ ಎಲ್ಲಿಯೂ ದೊಡ್ಡ ರಾಜ್ಯವನ್ನು ಕಾಂಗ್ರೆಸ್ ಗೆದ್ದಿಲ್ಲ.

ಕರ್ನಾಟಕದಲ್ಲಿ ಸ್ಥಿರ ಮತ್ತು ಅಭಿವೃದ್ಧಿ ಪರ ಆಡಳಿತ ನೀಡಿ ಮುಂದಿನ ದಿನಗಳಲ್ಲಿ ಅಸ್ಸಾಂ, ಪುದುಚೇರಿಯನ್ನು ಮರಳಿ ಗೆಲ್ಲುವುದು, ತಮಿಳುನಾಡಿನಲ್ಲಿ ಮಿತ್ರ ಪಕ್ಷವನ್ನು ಅಧಿಕಾರಕ್ಕೆ ತಂದು ಸರ್ಕಾರದ ಪಾಲುದಾರಿಕೆ ಮುಂದುವರಿಸುವುದು, ಕೇರಳ, ಪಶ್ಚಿಮ ಬಂಗಾಳದಲ್ಲಿ ತನ್ನ ಅಸ್ತಿತ್ವ ಉಳಿಸಿಕೊಳ್ಳುವುದು ಕಾಂಗ್ರೆಸ್‌ಗೆ ಅನಿವಾರ್ಯವಾಗಿದೆ. ಈ ಕಾರಣಕ್ಕೆ ರಾಜ್ಯ ಕರ್ನಾಟಕದಲ್ಲಿ ನಾಯಕತ್ವ ಬದಲಾವಣೆಯಂತಹ ದುಸ್ಸಾಹ ಬೇಡ ಎಂದು ಹೈಕಮಾಂಡ್ ಮಟ್ಟದಲ್ಲಿ ಚರ್ಚೆಯಾಗಿದೆ ಎನ್ನಲಾಗಿದೆ.

ಈ ಸಂದೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತಲುಪಿಸಲಾಗಿದೆ. ಡಿ.ಕೆ.ಶಿವಕುಮಾರ್ ಅವರಿಗೂ ಮನವರಿಕೆ ಮಾಡಿಕೊಡುವ ಪ್ರಯತ್ನಗಳಾಗುತ್ತಿದೆ ಎನ್ನಲಾಗುತ್ತಿದೆ. ಆದರೆ ಶಿವಕುಮಾರ್ ಪಟ್ಟು ಬಿಡದೆ ರಾಹುಲ್ ಗಾಂಧಿಯವರನ್ನು ಭೇಟಿ ಮಾಡಿ ಸ್ಪಷ್ಟನೆ ಪಡೆದುಕೊಳ್ಳಲು ನಿರಂತರ ಪ್ರಯತ್ನ ಮಾಡುತ್ತಿದ್ದಾರೆ. ರಾಹುಲ್ ಗಾಂಧಿ ಭೇಟಿಗೆ ಸಮಯ ನೀಡದೆ ಸತಾಯಿಸುತ್ತಿರುವುದು, ಕೆ.ಸಿ.ವೇಣುಗೋಪಾಲ್ ಅವರ ಸಂದೇಶವನ್ನು ದೃಢೀಕರಿಸಿದೆ. ಜನವರಿ, ಮಾರ್ಚ್ ಎಂದು ಗಡುವುಗಳನ್ನು ನಿಗದಿ ಪಡಿಸಿಕೊಳ್ಳುವ ಮೂಲಕ ರಾಜ್ಯದಲ್ಲಿ ಗೊಂದಲ ಸೃಷ್ಟಿಸುವ ಪ್ರಯತ್ನ ಮಾಡಿದರೆ ಕಠಿಣ ಕ್ರಮ ಅನಿವಾರ್ಯ ಎಂಬ ಎಚ್ಚರಿಕೆಯನ್ನು ಹೈಕಮಾಂಡ್ ರವಾನಿಸಿದೆ. ಮಂಗಳೂರಿಗೆ ಕೆ.ಸಿ.ವೇಣುಗೋಪಾಲ್ ಆಗಮಿಸಿದಾಗ ಡಿಕೆ.. ಡಿಕೆ ಎಂದು ಘೋಷಣೆ ಕೂಗಿದ ಮಿಥುನ್ ರೈ ಮತ್ತು ಬೆಂಬಲಿಗರಿಗೆ ಕೆಪಿಸಿಸಿ ಬದಲಾಗಿ ನೇರವಾಗಿ ಎಐಸಿಸಿಯಿಂದಲೇ ನೋಟಿಸ್ ಜಾರಿ ಮಾಡುವ ಮೂಲಕ ಕಠಿಣ ಸಂದೇಶ ರವಾನಿಸಲಾಗಿದೆ. ಇತ್ತ ಸಿದ್ದರಾಮಯ್ಯ ಅವರ ಪರವಾಗಿ ಘೋಷಣೆ ಕೂಗಿದ ವಿಧಾನ ಪರಿಷತ್ ಸದಸ್ಯ ಐವಾನ್ ಡಿಸೋಜಾರಿಗೂ ನೋಟಿಸ್ ನೀಡಲಾಗಿದೆ. ಈ ಮೂಲಕ ಹೈಕಮಾಂಡ್ ಶಿಸ್ತು ಪಾಲನೆ ವಿಷಯದಲ್ಲಿ ಅಖಾಡ ಪ್ರವೇಶಿಸಿವ ಸುಳಿವು ನೀಡಿದೆ.

**ನಾಯಕರಿಲ್ಲದೆ ಇರುವುದು ದೊಡ್ಡ ಕೊರತೆ**

**ದೇಶದಲ್ಲೇ ಕಾಂಗ್ರೆಸ್‌ಗೆ ಪ್ರಬಲವಾದ ಅಹಿಂದ ನಾಯಕರಿಲ್ಲದೆ ಇರುವುದು ದೊಡ್ಡ ಕೊರತೆ ಆಗಿದೆ. ಸಿದ್ದರಾಮಯ್ಯ ಅವರು ಅಹಿಂದ ನಾಯಕರಾಗಿ ಪ್ರಬಲವಾಗಿಗುರುತಿಸಿಕೊಂಡಿದ್ದು ಅವರನ್ನು ರಾಷ್ಟ್ರಮಟ್ಟದಲ್ಲಿ ಪ್ರತಿಬಿಂಬಿಸುವ ಪ್ರಯತ್ನಗಳು ನಡೆದಿತ್ತು. ಈ ಸಂದರ್ಭದಲ್ಲಿ ಅವರನ್ನು ಬದಲಾವಣೆ ಮಾಡಿದರೆ ಕಾಂಗ್ರೆಸ್‌ಗೆ ಭಾರಿ ಪ್ರಮಾಣದ ಹಾನಿಯಾಗಬಹುದು ಎಂದು ಹೇಳಲಾಗುತ್ತಿದೆ. ಜೊತೆಗೆ ಸಿದ್ದರಾಮಯ್ಯ ಉತ್ತಮ ಆಡಳಿತಗಾರರು, ಆರ್ಥಿಕವಾಗಿ ವಿಚಾರಗಳಲ್ಲಿ ಅನುಭವಸ್ಥರು. ದೇಶದಲ್ಲೇ ಎಲ್ಲೂ ಇಲ್ಲದಂತ ಪಂಚಖಾತ್ರಿ ಯೋಜನೆಗಳನ್ನು ಸಮರ್ಥವಾಗಿ ಜಾರಿಗೊಳಿಸುವ ಮೂಲಕ ವಿಶ್ವ ದಾಖಲೆ ಬರೆದಿದ್ದಾರೆ.**

## ವೈಜ್ಞಾನಿಕತೆ ಹರಡಲಿ, ಅಂಧ ವಿಶ್ವಾಸಕ್ಕೆ ಅಂಕುಶವಿರಲಿ: ಹುಲಿಕಲ್ ನಟರಾಜ್

• ಉದಯವಾಹಿನಿ, ಬೆಂಗಳೂರು



ಕರ್ನಾಟಕ ರಾಜ್ಯವು ದೇಶದಲ್ಲೇ ಪ್ರಥಮ ಬಾರಿಗೆ ಮೂಢನಂಬಿಕೆಗಳ ಪ್ರತಿಬಂಧಕ ಕಾಯ್ದೆ ಜಾರಿಯಾಗಿ ದೇಶದಲ್ಲಿಯೇ ಅಂಧ ವಿಶ್ವಾಸ, ಜ್ಯೋತಿಷ್ಯ, ಮಾಟ ಮಂತ್ರಗಳ ವಿರುದ್ಧ ದಿಟ್ಟ ಕ್ರಮ ಕೈಗೊಂಡಿದೆ. ನಂಬಿಕೆ ಮತ್ತು ಮೂಢನಂಬಿಕೆಗಳ ತೆಳು ಗೆರೆಯಿಂದ ಅದರ ಸ್ಪಷ್ಟ ಚಿತ್ರಣ ಯಾರಿಗೂ ದಕ್ಕುತ್ತಿಲ್ಲ. ಆದರೂ ಈ ಪ್ರಯತ್ನ ದೇಶದ ಎಲ್ಲಾ ವೈಚಾರಿಕ ಪ್ರಜ್ಞೆಯುಳ್ಳವರ ಸಂತೋಷಕ್ಕೆ ಕಾರಣವಾಗಿತ್ತು. ಭಾರತೀಯ ಜಾಹೀರಾತು ಮಂಡಳಿಯು ಭವಿಷ್ಯ ಹೇಳುವವರು, ಜ್ಯೋತಿಷಿಗಳು, ಹಸ್ತ ಸಾಮುದ್ರಿಕೆ ಭವಿಷ್ಯ ನುಡಿಯುವವರು, ಅಂಧ ವಿಶ್ವಾಸ ಇತ್ಯಾದಿ ಕುರಿತಾದ ಜಾಹೀರಾತುಗಳನ್ನು ಪ್ರಸಾರ ಮಾಡುವಂತಿಲ್ಲ ಎಂದು ನಿಯಮ ಹೊಂದಿದೆ.

ಆದರೆ ದಿನೇ ದಿನೇ ಹೆಚ್ಚಾಗುತ್ತಿರುವ ಜ್ಯೋತಿಷ್ಯ, ಮಾಟ ಮಂತ್ರ, ತಂತ್ರ, ಸಂಖ್ಯಾ ಜ್ಯೋತಿಷ್ಯಗಳ ಜಾಹೀರಾತುಗಳು ಮಾಧ್ಯಮಗಳಲ್ಲಿ ಮುಖ್ಯವಾಗಿ ಸಾಮಾಜಿಕ ಮಾಧ್ಯಮಗಳಲ್ಲಿ ಅಡೆ ತಡೆಯಿಲ್ಲದೆ ಪ್ರಸಾರವಾಗುತ್ತಿರುವುದು ವಿಷಾದನೀಯ.

ದೇಶದ ಜಾಹೀರಾತು ನಿಯಮಗಳಲ್ಲಿಯೇ ಅಂಧ ವಿಶ್ವಾಸಗಳನ್ನು ಸಮೂಹ ಮಾಧ್ಯಮಗಳ ಪ್ರಚಾರದಿಂದ ನಿರ್ಬಂಧಿಸುವ ಪರಿಚ್ಛೇದವಿದೆ. ಆದರೆ ಅವುಗಳನ್ನು ಕಿಂಚಿತ್ತೂ ಲೆಕ್ಕಿಸದಂತೆ ಸಾಮಾಜಿಕ ಮಾಧ್ಯಮಗಳನ್ನು ಸಾಧನವಾಗಿಸಿಕೊಂಡು ಜ್ಯೋತಿಷ್ಯ, ಪೂಜೆ, ಪುನಸ್ಕಾರಗಳು, ಮಾಟ ಮಂತ್ರ, ಹಸ್ತ ಸಾಮುದ್ರಿಕೆ, ಸಂಖ್ಯಾ ಜ್ಯೋತಿಷ್ಯದ ಅಂಧ ವಿಶ್ವಾಸ ಹರಡುವ ಕಾರ್ಯಗಳನ್ನು ಪ್ರಚಾರ ಕೈಗೊಳ್ಳಲಾಗುತ್ತಿದೆ.

ಆದ್ದರಿಂದ ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತು ರಾಜ್ಯ ಸರ್ಕಾರವನ್ನು ಕಠಿಣವಾಗಿ ಕರ್ನಾಟಕ ರಾಜ್ಯ ಸರ್ಕಾರವನ್ನು ಮೂಢನಂಬಿಕೆಗಳ ನಿಷೇಧ ಕಾಯ್ದೆಯನ್ನು ಜಾರಿಗೊಳಿಸಿ ಸಾಮಾಜಿಕ ಮಾಧ್ಯಮಗಳಲ್ಲಿ ಜ್ಯೋತಿಷ್ಯ, ಸಂಖ್ಯಾ ಜ್ಯೋತಿಷ್ಯ ಇತ್ಯಾದಿ ಅಂಧ ವಿಶ್ವಾಸಗಳ ಪ್ರಚಾರವನ್ನು ನಿರ್ಬಂಧಿಸಲು ಒತ್ತಾಯಿಸುತ್ತದೆ. ಸ್ವತಃ ವೈಚಾರಿಕ ಪ್ರಜ್ಞೆಯನ್ನು ಅನುಸರಿಸುವ ಮುಖ್ಯಮಂತ್ರಿಗಳಲ್ಲೂ ಈ ಕುರಿತು ಕಾಳಜಿ ವಹಿಸಲು ಕೋರುತ್ತಿದೆ.

ಸಮೂಹ ಮಾಧ್ಯಮಗಳಲ್ಲಿನ ಜಾಹೀರಾತು ನಿರ್ಬಂಧವು ಸಾಮಾಜಿಕ ಮಾಧ್ಯಮಗಳಿಗೂ ಅನ್ವಯಿಸುತ್ತದೆ. ಆದರೆ ಅದರ ಕಟ್ಟುನಿಟ್ಟಿನ ಜಾರಿ ಇಲ್ಲವಾಗಿದೆ. ಸಾಮಾಜಿಕ ಮಾಧ್ಯಮಗಳಲ್ಲಿ ಅಂಧ ವಿಶ್ವಾಸ ಹರಡುವವರ ವಿರುದ್ಧ ತೀವ್ರ ಕ್ರಮಕ್ಕೆ ಸರ್ಕಾರ ಮುಂದಾಗಬೇಕಿದೆ.

**ಸಾಮಾಜಿಕ ಮಾಧ್ಯಮಗಳು ಅಂಧ ವಿಶ್ವಾಸವನ್ನು ಹರಡುವ ವಾಹಕಗಳಾಗಿವೆ. ಹಲವು ಬಗೆಯ ಪೂಜೆಗಳನ್ನು ಮಾಡಿಸಿದರೆ ದೋಷ ನಿವಾರಣೆಯಾಗುತ್ತದೆ ಎಂದು ಬಿತ್ತರಿಸಲಾಗುತ್ತದೆ. ಅವುಗಳಿಗೆ ಯಾವುದೇ ವೈಜ್ಞಾನಿಕ ಪುರಾವೆ ಇರುವುದಿಲ್ಲ. ಆದ್ದರಿಂದ ಜನರಲ್ಲಿ ವೈಜ್ಞಾನಿಕ ಅರಿವನ್ನು ಮೂಡಿಸುವ ನಿಟ್ಟಿನಲ್ಲಿ ಎಲ್ಲಾ ಸಾಮಾಜಿಕ ಮಾಧ್ಯಮಗಳಲ್ಲೂ ಈ ಬಗೆಯ ಜಾಹೀರಾತುಗಳಿಗೂ ಕಠಿಣ ನಿರ್ಬಂಧ ವಿಧಿಸಬೇಕೆಂದು ಕೋರುತ್ತೇನೆ.**

**-ಹುಲಿಕಲ್‌ನಟರಾಜ್**
**ಅಧ್ಯಕ್ಷರು ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ ದೊಡ್ಡಬಳ್ಳಾಪುರ**

## ಶಾಲಾ ವಿದ್ಯಾರ್ಥಿಗಳಿಗೆ ಭಗವದ್ಗೀತೆ ಬೋಧಿಸಿ

• ಉದಯವಾಹಿನಿ, ಬೆಂಗಳೂರು

ಶಾಲಾ ವಿದ್ಯಾರ್ಥಿಗಳಿಗೆ ಇನ್ಮುಂದೆ ಶಾಲೆಗಳಲ್ಲಿ ಭಗವದ್ಗೀತೆ ಬೋಧಿಸಬೇಕು ಅಂತ ಕೇಂದ್ರ ಸಚಿವ ಹೆಚ್‌ಡಿ ಕುಮಾರಸ್ವಾಮಿ ಪತ್ರ ಬರೆದು, ಮನವಿ ಮಾಡಿದ್ದಾರೆ. ಈ ಕುರಿತಂತೆ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವ್ರಿಗೆ ಪತ್ರ ಬರೆದಿರುವ ಹೆಚ್‌ಡಿ ಕುಮಾರಸ್ವಾಮಿ, ನಮ್ಮ ನೆಲದ ಪವಿತ್ರ ಗ್ರಂಥ ಭಗವದ್ಗೀತೆಯನ್ನು ವಿದ್ಯಾರ್ಥಿಗಳಿಗೆ ಪಠ್ಯದ ಮೂಲಕ ಬೋಧಿಸಬೇಕು. ಆ ನಿಟ್ಟಿನಲ್ಲಿ ಕ್ರಮ ವಹಿಸಬೇಕು ಎಂದು ಕೇಂದ್ರ ಸರ್ಕಾರದ ಗೌರವಾನ್ವಿತ ಶಿಕ್ಷಣ ಸಚಿವರಾದ ಧರ್ಮೇಂದ್ರ ಪ್ರಧಾನ್ ಅವರಿಗೆ ಪತ್ರ ಬರೆದು ವಿನಂತಿಸಿದ್ದೇನೆ ಅಂತ ಟ್ವೀಟ್ ಮಾಡಿದ್ದು, ಪತ್ರವನ್ನು ಶೇರ್ ಮಾಡಿದ್ದಾರೆ.

**ಧರ್ಮೇಂದ್ರ ಪ್ರಧಾನ್‌ಗೆ ಹೆಚ್‌ಡಿಕೆ ಪತ್ರ:** ಶಾಲಾ ಮಕ್ಕಳಿಗೆ ಪಠ್ಯದ ಮೂಲಕ ಭಗವದ್ಗೀತೆ ಬೋಧಿಸಬೇಕು ಅಂತ ಕೇಂದ್ರ ಸಚಿವ ಹೆಚ್‌ಡಿ ಕುಮಾರಸ್ವಾಮಿ ಪತ್ರ ಬರೆದಿದ್ದಾರೆ. ನಿಷ್ಕಾಮ ಕರ್ಮದ ಕಾಲಾತೀತ ಮೌಲ್ಯಗಳು, ಪ್ರಾಮಾಣಿಕತೆ, ನೈತಿಕ ಶಕ್ತಿಯು ರಾಷ್ಟ್ರೀಯ ಶಿಕ್ಷಣ ನೀತಿ ಅಡಿಯಲ್ಲಿ ಮೌಲ್ಯಾಧಾರಿತ ಶಿಕ್ಷಣವನ್ನು ಹೆಚ್ಚು ಉತ್ಕೃಷ್ಟಗೊಳಿಸುತ್ತದೆ ಮತ್ತು ನಮ್ಮ ಯುವಜನರು ವಿದ್ಯಾರ್ಥಿ ದೆಸೆಯಿಂದಲೇ ಉತ್ತಮ ಪ್ರಜೆಗಳಾಗಿ ರೂಪುಗೊಂಡು ಜಾಗತಿಕವಾಗಿ ಶ್ರೇಷ್ಠರಾಗಲು ಸ್ಫೂರ್ತಿ, ಪ್ರೇರಣೆ ನೀಡುತ್ತದೆ ಅಂತ ಪತ್ರದಲ್ಲಿ ಹೆಚ್‌ಡಿಕೆ ಹೇಳಿದ್ದಾರೆ.

## ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಮೂರು ಪರೀಕ್ಷೆ

• ಉದಯವಾಹಿನಿ, ಬೆಂಗಳೂರು

ಪ್ರಸಕ್ತ ವರ್ಷವೂ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಮೂರು ಪರೀಕ್ಷೆಗಳಿರುತ್ತವೆ ಎಂದು ಕರ್ನಾಟಕ ಶಾಲಾ ಪರೀಕ್ಷೆ, ಮೌಲ್ಯ ನಿರ್ಣಯ ಮಂಡಳಿ ಸ್ಪಷ್ಟಪಡಿಸಿದೆ. ಇತ್ತೀಚಿಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಒಂದು ಮತ್ತು ಎರಡನೇ ವೇಳಾಪಟ್ಟಿಯನ್ನು ಮಾತ್ರ ಪ್ರಕಟಿಸಲಾಗಿತ್ತು.ಇದರಿಂದಾಗಿ ಮೂರನೇ ಪರೀಕ್ಷೆ ಬಗ್ಗೆ ಗೊಂದಲಗಳಿದ್ದವು. ಸ್ಪಷ್ಟನೆ ನೀಡಿರುವ ಪರೀಕ್ಷಾ ಮಂಡಳಿ 2025-26ನೇ ಸಾಲಿಗೆ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯ ಒಂದು, ಎರಡನೇ ತಾತ್ಕಾಲಿಕ ಕಾರ್ಯ ಸೂಚಿಯನ್ನು ತಯಾರಿಸಿ, ವೇಳಾಪಟ್ಟಿಯನ್ನು ಪ್ರಕಟಿಸಲಾಗಿದೆ.ಸದರಿ ಪರೀಕ್ಷೆಗಳ ಫಲಿತಾಂಶ ಪ್ರಕಟಣೆಯ ಅವಧಿ ಆಧಾರದ ಮೇಲೆ ಪರೀಕ್ಷೆ ಮೂರರ ವೇಳಾಪಟ್ಟಿಯನ್ನು ಪ್ರಕಟಿಸುವುದಾಗಿ ತಿಳಿಸಿದೆ.

# ಐಟಿ ಅಧಿಕಾರಿಗಳ ಪ್ರಶ್ನೆಗೆ ದರ್ಶನ್ ಉತ್ತರ ಏನು?

### ದಾಸನಿಗೆ 82 ಲಕ್ಷ ಹಣದ ತಲೆಬಿಸಿ ಕೃಷಿ, ಪ್ರಾಣಿ ಮಾರಾಟದಿಂದಲೇ ಹಣ ಸಿಕ್ಕಿದ್ದು ಎಂದ ಚಾಲೆಂಜಿಂಗ್ ಸ್ಟಾರ್

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಪರಪ್ಪನ ಅಗ್ರಹಾರ ಜೈಲು ಸೇರಿರುವ ದರ್ಶನ್‌ಗೆ ಒಂದರ ಮೇಲೆ ಒಂದರಂತೆ ಸಂಕಷ್ಟಗಳು ಎದುರಾಗುತ್ತಲೇ ಇವೆ. ರೇಣುಕಾಸ್ವಾಮಿ ಕೊಲೆ ನಡೆದಾಗ ದರ್ಶನ್‌ಗೆ ಆದಾಯ ತೆರಿಗೆ ಅಧಿಕಾರಿಗಳು ಕೂಡ ಶಾಕ್ ನೀಡಿದ್ರು. ಈ ವೇಳೆ ದರ್ಶನ್ ಮನೆಯಲ್ಲಿ ಪತ್ತೆಯಾಗಿದ್ದ 82 ಲಕ್ಷ ರೂಪಾಯಿ ಹಣವನ್ನ ಸೀಜ್ ಮಾಡಿದ್ರು. ಬಳಿಕ ಹಣದ ಮೂಲ ಕೆದಕಿದ ಅಧಿಕಾರಿಗಳು ಎಲ್ಲಿಂದ ಬಂತು ಎಂಬ ಬಗ್ಗೆ ಬಳ್ಳಾರಿ ಜೈಲಿಗೂ ತೆರಳಿ ಮಾಹಿತಿ ಕಲೆಹಾಕಿದ್ರು. ಇದೀಗ ಮತ್ತೆ ಪರಪ್ಪನ ಅಗ್ರಹಾರ ಸೇರಿರುವ ದರ್ಶನ್ ಬಳಿ 82 ಲಕ್ಷ ಹಣದ ಮೂಲವನ್ನ ಐಟಿ ಕೆದಕಿದೆ. 82 ಲಕ್ಷ ರೂ. ಮೂಲ ಏನು? ಇಷ್ಟು ಹಣ ಯಾರು ಕೊಟ್ರು.. ಎಲ್ಲಿಂದ ಬಂತು..? ಎಂಬೆಲ್ಲಾ ಐಟಿ ಪ್ರಶ್ನೆ ಮಾಡಿದ್ದು, ದರ್ಶನ್ ಅದಕ್ಕೆ ಉತ್ತರ ಕೊಟ್ಟಿದ್ದಾರೆ.

**ಐಟಿ ಕೇಳಿದ್ದು ? ದರ್ಶನ್ ಹೇಳಿದ್ದು..**

**ಯಾರಿಗೂ ಸಾಲ ನೀಡಿಲ್ಲ**

1. ನೀವು ಕಳೆದ ಆರು ವರ್ಷಗಳಲ್ಲಿ ಯಾರಿಗಾದರೂ ಕೈ ಸಾಲ ಕೊಟ್ಟಿದ್ರಾ? ಹಾಗೇನಾದ್ರೂ ಕೈ ಸಾಲ ನೀಡಿದ್ರೆ, ಯಾವ ದಿನಾಂಕ ಸಮಯದ ಬಗ್ಗೆ ಸ್ಪಷ್ಟನೆ ನೀಡಬಹುದು..?

**ಉತ್ತರ :** ಹೌದು ನಾನು 40 ಲಕ್ಷ ಕೈ ಸಾಲವನ್ನು ನನ್ನ ಸ್ನೇಹಿತರಾದ ರಾಮ್ ಮೋಹನ್ ರಾಜ್‌ಗೆ ಫೆಬ್ರವರಿ 2024ರಲ್ಲಿ ನೀಡಿದ್ದೇನೆ. ಮೋಹನ್ ನನಗೆ 2024ರ ಮೇ ತಿಂಗಳಿನಲ್ಲಿ ಹಿಂದಿರುಗಿಸಿದ್ದಾರೆ. ಮೋಹನ್ ಮೂಲತಃ ಬೆಂಗಳೂರಿನವರೇ ತುಂಬಾ ಹಳೆಯ ಸ್ನೇಹಿತರು. ಅದನ್ನ ಬಿಟ್ಟರೆ 6 ವರ್ಷದಿಂದ ನಾನು ಯಾರಿಗೂ ಸಾಲ ನೀಡಿಲ್ಲ, ಪಡೆದಿಲ್ಲ.

**ಕೃಷಿಯಿಂದಲೇ 82 ಲಕ್ಷ ರೂ. ಸಿಕ್ಕಿದ್ದು**

**ನಾನು ಕೃಷಿ ಮಾಡಿದ್ದೆ, ಪ್ರಾಣಿಗಳ ಮಾರಾಟವನ್ನ ಮಾಡಿದ್ದೆ. ಅಲ್ಲದೇ ನನ್ನ ಅಭಿಮಾನಿಗಳು ಹುಟ್ಟುಹಬ್ಬದ ದಿನ ನನಗೆ ದುಡ್ಡು ಕೊಟ್ಟಿದ್ರು ಎಂದಿದ್ದಾರೆ. ನಾನು ಮಾಡಿದ ಕೃಷಿಯಿಂದಲೇ 82 ಲಕ್ಷ ರೂ. ಹಣ ಸಿಕ್ಕಿದ್ದು ಅಂತ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳ ದರ್ಶನ್ ಹೇಳಿಕೆ ನೀಡಿದ್ದಾರೆ. ದರ್ಶನ್ ಹೇಳಿಕೆ ಪ್ರತಿ ಲಭ್ಯವಾಗಿದೆ. ಹಾಗಾದ್ರೆ ಐಟಿ ಅಧಿಕಾರಿಗಳ ಪ್ರಶ್ನೆ ಏನಿತ್ತು? ಅದಕ್ಕೆ ದರ್ಶನ್ ಕೊಟ್ಟ ಉತ್ತರ ಏನು ಅನ್ನೋ ಸಮಗ್ರ ವಿವರ ನೋಡೊದಾದ್ರೆ.**

2. ಫೆಬ್ರವರಿ 2024ರಲ್ಲಿ ನೀವು ಮೋಹನ್ ರಾಜ್‌ಗೆ 40 ಲಕ್ಷ ಹಣ ನೀಡಿದ್ದೀರಿ.. ಅದಕ್ಕೆ ಸಂಬಂಧಿಸಿದಂತೆ ಹಣದ ಮೂಲ ಸ್ಪಷ್ಟಪಡಿಸಬಹುದಾ?

**ಉತ್ತರ:** ಮೋಹನ್ ರಾಜ್‌ಗೆ ನೀಡಿದ 40 ಲಕ್ಷ ಹಣದಲ್ಲಿ 25 ಲಕ್ಷ ಹಣವನ್ನು ನಾನು ಕೃಷಿಯಿಂದ ಬಂದ ಲಾಭದಲ್ಲಿ ಸಂಪಾದಿಸಿದ್ದೇನೆ. ಇನ್ನುಳಿದ 15 ಲಕ್ಷಕ್ಕೆ ಪ್ರಾಣಿಗಳ ಮಾರಾಟ ಮಾಡಿದ್ದೇನೆ. ಇನ್ನುಳಿದಂತೆ ನನ್ನ ಹುಟ್ಟುಹಬ್ಬದ ದಿನ ನನ್ನ ಅಭಿಮಾನಿಗಳು ನೀಡಿದ ಹಣ ಅದರಲ್ಲಿತ್ತು.

3. ತನಿಖೆಯ ಸಂದರ್ಭದಲ್ಲಿ ತನಿಖಾಧಿಕಾರಿ 19-06-2024ರಂದು ನಿಮ್ಮ ಮನೆಯಲ್ಲಿ 37 ಲಕ್ಷದ 50 ಸಾವಿರ ರೂಪಾಯಿ ಸೀಜ್ ಮಾಡಿದ್ದಾರೆ, ಅದು ಕೂಡ ಕೃಷಿ ಲಾಭದಿಂದಲೇ ಬಂದಿದ್ದಾ?

**ಉತ್ತರ:** ಹೌದು, ನಾನು ಈಗಾಗಲೇ ಹೇಳಿದ ಹಾಗೇ ನನಗೆ ಬಂದಿರೋ ಹಣವೆಲ್ಲಾ ಕೃಷಿ, ಪ್ರಾಣಿಗಳ ಮಾರಾಟ ಮತ್ತು ಅಭಿಮಾನಿಗಳು ನೀಡಿದ ಉಡುಗೊರೆ ಆಗಿದೆ ಅದನ್ನು ಬಿಟ್ಟು ಬೇರೆ ಏನು ಇಲ್ಲ.

4. ನಿಮ್ಮ ಮನೆಯಲ್ಲಿ ಸಿಕ್ಕ 37 ಲಕ್ಷ ಮತ್ತು ನಿಮ್ಮ ಪತ್ನಿಯ ಬಳಿ ಸಿಕ್ಕ 3 ಲಕ್ಷ ಹಣಕ್ಕೆ ಯಾವುದಾದರೂ ದಾಖಲೆಗಳು ಇದ್ಯಾ?

**ಉತ್ತರ:** ಇಲ್ಲ ನನ್ನ ಬಳಿ ಸಿಕ್ಕ ಹಣಕ್ಕೆ ಮತ್ತು ನನ್ನ ಪತ್ನಿಯ ಬಳಿ ಸಿಕ್ಕ ಹಣಕ್ಕೆ ಸಧ್ಯಕ್ಕೆ ಯಾವುದೇ ದಾಖಲೆಗಳು ಕೂಡ ಇಲ್ಲ. ನಾನು 2024-2025ರಲ್ಲಿ ಸಲ್ಲಿಕೆ ಮಾಡುವ ಆದಾಯ ತೆರಿಗೆ ಮಾಹಿತಿಯಲ್ಲಿ ಉಲ್ಲೇಖ ಮಾಡುತ್ತೇನೆ.

# ವಿಪಕ್ಷದವರಿಗೆ ಟೀಕೆ ಮಾಡುವುದೇ ಕಾಯಕ

## ಶಾಸಕ ಗಣೇಶ್ ಪ್ರಸಾದ್ ಲೇವಡಿ : 900 ಕೋಟಿ ಅನುದಾನದ ಮಾಹಿತಿ ಕೊಡುವಂತೆ ಮಗದೊಮ್ಮೆ ಸವಾಲು

• ಉದಯವಾಹಿನಿ, ಗುಂಡ್ಲುಪೇಟೆ

ಕ್ಷೇತ್ರದಲ್ಲಿ ದುರುದ್ದೇಶದ ರಾಜಕಾರಣ ಮಾಡುವ ಉದ್ದೇಶ ನನಗಿಲ್ಲ ವಿಪಕ್ಷದವರ ಆರೋಪಕ್ಕೆಲ್ಲಾ ಕೆಲಸದ ಮೂಲಕ ಉತ್ತರ ನೀಡಿದ್ದೇನೆ ಇನ್ನು ಮುಂದೆಯಾದರು ಆಧಾರ ರಹಿತ ಆರೋಪ ಮಾಡುವುದನ್ನ ನಿಲ್ಲಿಸಲಿ, ಇವರ ಟೀಕೆ ಟಿಪ್ಪಣಿಗಳಿಗೆ ತಲೆಕೆಡಿಸಿಕೊಳ್ಳುವ ಜಾಯಮಾನ ನಮ್ಮದಲ್ಲ, ಕೆರೆಗಳಿಗೆ ನೀರು ತುಂಬಿಸುವ ವಿಚಾರದಲ್ಲಿ ಆರೋಪದಲ್ಲಿ ತೊಡಗಿದ್ದ ಮಹಾಶಯರಿಗೆ ಇದರ ಅರಿವಾದರೆ ಸಾಕು ಎಂದು ಬಿಜೆಪಿಗರ ಕಾಲೆಳೆದರು. ಅಧಿಕಾರದಿಂದ ವಂಚಿತರಾದ ವಿಪಕ್ಷನಾಯಕರಿಗೆ ಒಳಕಿಲುಬು ಹೆಚ್ಚಾದ ಹಿನ್ನಲೆ ಸಹಿಸಲಾಗದ ಸ್ಥಿತಿ ತಲುಪಿರುವುದರಿಂದ ಟೀಕೆ ಟಿಪ್ಪಣಿ ಕಾಯಕಕ್ಕೆ ಮುಂದಾಗಿದ್ದಾರೆ ಎಂದು ಜರಿದರು.

ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ರೈತ ಸಂಘ ನಡೆಸಿದ ಅಹೋರಾತ್ರಿ ಧರಣಿಗೆ ಶಾಸಕನಾಗಿ ಸ್ಪಂದಿಸಿದ್ದೇನೆ, ಸಾಗುವಳಿ, ವನ್ಯಜೀವಿ ಮಾನವ ಸಂಘರ್ಷ ತಡೆಗೆ ಪೂರಕವಾಗುವ ಮಾನದಂಡಗಳ ಸಾಕಾರಕ್ಕೆ ಅಧಿಕಾರಿಗಳ ಜೊತೆಗೆ ಜಿಲ್ಲಾ ಉಸ್ತುವಾರಿ ಸಚಿವರು, ಅರಣ್ಯ ಸಚಿವರೊಟ್ಟಿಗೆ ಸಭೆ ನಡೆಸಿ ಸಲಹೆ ಸೂಚನೆಗಳನ್ನ ನೀಡಲಾಗಿದೆ ಎಂದು ತಿಳಿಸುತ್ತಾ ಕೆರೆಗೆಳಿಗೆ ನೀರು ತುಂಬಿಸುವ ವಿಚಾರಕ್ಕೆ ಸಂಬಂಧಿಸಿದಂತೆ ಯಂತ್ರಗಳು ದುರಸ್ಥಿಗೆ ಬಂದ ಹಿನ್ನೆಲೆ ನೀರು ಹರಿಸಲು ವಿಲಂಭವಾಯಿತೆ ವಿನಃ ಬೇರೇನೂ ದುರುದ್ದೇಶವಿಲ್ಲ, ರೈತರ ಮನವಿಗೆ ಓಗೊಟ್ಟು ಅಧಿಕಾರಿಗಳೊಟ್ಟಿಗೆ ನಿರಂತರ ಸಂಪರ್ಕ ಸಾಧಿಸಿ ಬೇಡಿಕೆ ಈಡೇರಿಸಲು ಹಾಗೂ ಕ್ಷೇತ್ರದ ಜನತೆಯ ನಿರೀಕ್ಷೆಯನ್ನ ನನಸು ಮಾಡಲು ಎರಡು ತಿಂಗಳುಗಳ ಕಾಲಾವಕಾಶ ಹಿಡಿಯಿತು ಎಂದರು.


ಉದಯವಾಹಿನಿ ಚಿತ್ರ

**ಅರಣ್ಯ ಸಚಿವರೊಟ್ಟಿಗೆ ಸಭೆ**

ಕ್ಷೇತ್ರದ ಜನತೆ ಅಧಿಕಾರ ನೀಡಿದ ಸಂದರ್ಭದಲ್ಲಿ ಜನಪರ ಕೆಲಸ ಮಾಡುವಲ್ಲಿ ವಿಫಲರಾದ ಬಿಜೆಪಿ ನಾಯಕರು ಸುಖಾಸುಮ್ಮನೆ ಇಲ್ಲಸಲ್ಲದ ಆರೋಪಿಗಳನ್ನ ಮಾಡುವುದರಲ್ಲಿ ತಲ್ಲೀಣರಾಗುವ ಜೊತೆಗೆ ಜನರ ದಿಕ್ಕುತಪ್ಪಿಸುವ ಕೆಲಸಕ್ಕೆ ಮುಂದಾಗಿದ್ದರು ಆದರೆ ಅದು ಸಫಲವಾಗಲಿಲ್ಲ ಎಂದು ವಾಗ್ದಾಳಿ ನಡೆಸಿದರು.

ಉತ್ತೂರು ಕೆರೆಯಿಂದ 4ನೇ ಹಂತದ ಕೆರೆಗಳಿಗೆ ನೀರು ತುಂಬಿಸಲು ನವೀಕರಿಸಿದ ಸುಸಜ್ಜಿತ ನೀರೆತ್ತುವ ಯಂತ್ರಕ್ಕೆ ಚಾಲನೆ ನೀಡಲಾಗಿದೆ ಹಾಗೂ ಎಲ್ಲಾ ಕೆರೆಗಳಿಗೂ ನೀರು ತುಂಬಿಸುವ ನಡುವೆ ಯಾವುದೇ ರೀತಿಯಾದ ಅಡಚಣೆ ಯಾಗದಂತೆ ಎಚ್ಚರವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ, ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಬದ್ಧನಾಗಿ ರಾಜಕೀಯಕ್ಕೆ ಪ್ರವೇಶಿಸಿದ್ದೇನೆ ಹೊರತು ವಿಲಾಸಿ ಜೀವನ ನಡೆಸುವುದಕ್ಕಲ್ಲ ಎಂದು ಪರೋಕ್ಷವಾಗಿ ವಿಪಕ್ಷದವರಿಗೆ ತಿರುಗೇಟು ನೀಡಿದರು.

ಚುನಾವಣೆಯಲ್ಲಿ ಅತ್ಯಧಿಕ ಮತನೀಡಿದ ಕ್ಷೇತ್ರದ ಜನರ ವಿಶ್ವಾಸಕ್ಕೆ ಚ್ಯುತಿ ಬಾರದಂತೆ ನಡೆದುಕೊಳ್ಳುವುದೇ ನನ್ನ ಧ್ಯೇಯ ವಾಕ್ಯ ಆದ್ಯತೆಯಾಗಿದೆ ಎಂದು ಅಭಿಪ್ರಾಯಪಟ್ಟರು. ಈ ವೇಳೆ ಕಾಡಾ ಮಾಜಿ ಅಧ್ಯಕ್ಷ ಎಚ್. ಎಸ್. ನಂಜಪ್ಪ, ಕಬ್ಬಹಳ್ಳಿ ಮಹೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಜಶೇಖರ್, ಎಪಿಎಂಸಿ ಅಧ್ಯಕ್ಷ ನಾಗರಾಜು, ಮಡಿವಾಳಪ್ಪ, ಮಂಚಹಳ್ಳಿ ಲೋಕೇಶ್, ಪ್ರಭುಸ್ವಾಮಿ, ಮಡಹಳ್ಳಿ ಮಣಿ, ಶ್ರೀನಿವಾಸ್ ಚಿರಕನಹಳ್ಳಿ, ಗುರುಪ್ರಸಾದ್ ವೀರನಪುರ , ಪ್ರದೀಪ್ ಉದ್ಯಮ್ ಭವನ್, ಮೋಹನ್ ಕಂದೇಗಾಲ , ಕುಂದಕೆರೆ ಗ್ರಾಮಸ್ಥರು ಹಾಜರಿದ್ದರು.

**900 ಕೋಟಿ ಕೆಲಸದ ಮಾಹಿತಿ ಬಹಿರಂಗಪಡಿಸಿ ಮಗದೊಮ್ಮೆ ಸವಾಲು**

**ಬಿಜೆಪಿ ಸರ್ಕಾರದ ಅವಧಿಯಲ್ಲಿ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನ ಮಾಡಲಾಗಿದೆ ಎಂದು ಬೊಬ್ಬೆಹೊಡೆಯುವ ಬಿಜೆಪಿಗರು ಆಗಿರುವಂತಹ ಕಾಮಗಾರಿಗಳ ಪ್ರಗತಿ ಹಾಗೂ ಅನುದಾನದ ಮಾಹಿತಿಯನ್ನ ಸಾರ್ವಜನಿಕವಾಗಿ ಬಹಿರಂಗಪಡಿಸಲಿ ಎಂದು ಮಗದೊಮ್ಮೆ ಸವಾಲು ಹಾಕಿದರು. ಜನರ ಸಂಕಷ್ಟದ ಕುರಿತು ಬಿಟ್ಟಿ ಸಲಹೆ ನೀಡುವ ತಾವು ಅಧಿಕಾರಾವಧಿಯಲ್ಲಿ ಸಿಕ್ಕ ಅವಕಾಶವನ್ನ ಕೈ ಚೆಲ್ಲಿದಲ್ಲದೆ ಜನರ ದಿಕ್ಕುತಪ್ಪಿಸಲು ವ್ಯರ್ಥ ಪ್ರಯತ್ನಕ್ಕೆ ಮುಂದಾಗಿರುವುದು ಶೋಚನೀಯವಾಗಿದೆ ಎಂದು ವ್ಯಂಗ್ಯವಾಡಿದರು.**


# ರೈತರ ಬಂಧನ, ಬಿಡುಗಡೆ: ಆಕ್ರೋಶ

• ಉದಯವಾಹಿನಿ, ಮಾಗಡಿ

ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಹಸಿರು ಸೇನೆ ರೈತ ಸಂಘದಿಂದ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿದ ರೈತರನ್ನು ಪೊಲೀಸರು ಬಂಧಿಸಿ ನಂತರ ಬಿಡುಗಡೆ ಮಾಡಿದರು. ರೈತ ಸಂಘದ ಅಧ್ಯಕ್ಷ ಹೊಸಪಾಳ್ಯ ಲೋಕೇಶ್, ತಹಶೀಲ್ದಾರರಿಗೆ 15 ದಿನಗಳ ಹಿಂದೆಯೇ ಬೇಡಿಕೆಗಳನ್ನು ಈಡೇರಿಸಲು ರೈತ ಸಂಘ ಮತ್ತು ಅಧಿಕಾರಿಗಳ ಸಭೆ ಕರೆಯುವಂತೆ ಮನವಿ ಮಾಡಲಾಗಿತ್ತು. ಆದರೆ, ತಹಶೀಲ್ದಾರರು ಅಧಿಕಾರಿಗಳನ್ನು ಕರೆಯಲೇ ಇಲ್ಲ. ಸಮಸ್ಯೆ ಹೇಳಿಕೊಳ್ಳಲು ಅಧಿಕಾರಿಗಳು ಸಭೆಗೆ ಬರುವುದಿಲ್ಲ. ರೈತ ಸಂಘದ ವಿರುದ್ಧ ಉದಾಸೀನತೆ ತೋರುವುದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೆಂಪೇಗೌಡ ಅಭಿವೃದ್ಧಿ ಸಮಿತಿ ಅಧ್ಯಕ್ಷ ಡಾ.ಎಚ್. ಎಂ.ಕೃಷ್ಣಮೂರ್ತಿ, ಅಧಿಕಾರ ಮತ್ತು ಸರ್ಕಾರ ಶಾಶ್ವತವಲ್ಲ. ರೈತ ಸಂಘದ ಬೇಡಿಕೆಗಳೊಂದಿಗೆ ಪ್ರತಿಭಟನೆ ಮಾಡಿದರೆ ಅಧಿಕಾರ ಮತ್ತು ಪೊಲೀಸರನ್ನು ಬಳಸಿಕೊಂಡು ರೈತರನ್ನು ಬಂಧಿಸುವ ಕೆಲಸವನ್ನು ಶಾಸಕರು ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

**ಸ್ಥಳಕ್ಕೆ ಬಾರದ ಅಧಿಕಾರಿಗಳು:** ಪ್ರತಿಭಟನಾ ಸ್ಥಳಕ್ಕೆ ತಹಶೀಲ್ದಾರ್, ಉಪ ತಹಶೀಲ್ದಾರ್ ಸೇರಿದಂತೆ ಯಾವ ಅಧಿಕಾರಿಯೂ ಬರದ ಕಾರಣ ರೈತರು ಅಸಮಾಧಾನ ವ್ಯಕ್ತಪಡಿಸಿದರು. ಸ್ಥಳಕ್ಕೆ ಭೇಟಿ ನೀಡಿದ ತಾಲ್ಲೂಕು ಕಚೇರಿ ಸಿಬ್ಬಂದಿ, ತಹಶೀಲ್ದಾರ್ ಮತ್ತು ಉಪ ತಹಶೀಲ್ದಾರ್ ನ್ಯಾಯಾಂಗ ನಿಂದನೆ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಹಾಜರಾಗಿದ್ದಾರೆ.


ಉದಯವಾಹಿನಿ ಚಿತ್ರ

ಎರಡು ದಿನಗಳೊಳಗೆ ಬೇಡಿಕೆಗಳನ್ನು ಬಗೆಹರಿಸಲು ತಾಲ್ಲೂಕು ಕಚೇರಿಯಲ್ಲಿ ಸಭೆ ಕರೆಯಲಾಗುವುದಾಗಿ ಮನವರಿಕೆ ಮಾಡಿದರು. ಇದಕ್ಕೆ ಒಪ್ಪಿದ ರೈತರು ಪ್ರತಿಭಟನೆ ಮುಂದುವರಿಸಿದರು. ದಲಿತ ಮುಖಂಡರಾದ ಮಾಡಬಾಳ್ ಜಯರಾಂ, ದೊಡ್ಡಿಗೋಪಿ, ರೈತ ಸಂಘ ಯುವ ಘಟಕದ ಜಿಲ್ಲಾ ಅಧ್ಯಕ್ಷ ರಂಗಪ್ಪ, ರೈತ ಮುಖಂಡರಾದ ಧನಂಜಯ್ಯ, ಶಿವರಾಮು, ಶಿವಲಿಂಗಯ್ಯ, ಕಾಂತರಾಜು, ಕುರುಪಾಳ್ಯ ಬುಡನಸಾಬ್, ಶಿವರುದ್ರಯ್ಯ, ನಾರಾಯಣ್, ಸಲೀಂಪಾಷಾ, ನಿಂಗರಾಜು, ಮುನಿರಾಜು, ಹನುಮಂತು, ಲೋಕೇಶ್, ಕರೇನಹಳ್ಳಿ ಕೃಷ್ಣಪ್ಪ, ವೆಂಕಟೇಶ್ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಜನರ ಹಿತ ಮರೆತ ಸರ್ಕಾರ: ಆರೋಪ

• ಉದಯವಾಹಿನಿ, ಶಿಡ್ಲಘಟ್ಟ

ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಸಿ.ಎಂ ಮತ್ತು ಡಿಸಿಎಂ ನಡುವೆ ಕುರ್ಚಿ ಕಿತ್ತಾಟದಿಂದ ರಾಜ್ಯದ ಜನತೆಯ ಹಿತ ಕಾಪಾಡುವಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ವಿಫಲವಾಗಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಸೀಕಲ್ ರಾಮಚಂದ್ರಗೌಡ ಆರೋಪಿಸಿದರು.

ರಾಜ್ಯ ಸರ್ಕಾರದ ರೈತ ವಿರೋಧಿ ನೀತಿ, ಆಡಳಿತ ವೈಫಲ್ಯ ಖಂಡಿಸಿ ಬಿಜೆಪಿಯ ರೈತ ಮೋರ್ಚಾ, ವಿವಿಧ ಘಟಕಗಳಿಂದ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಮಾತನಾಡಿದರು.

ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ನಡುವೆ ಅಧಿಕಾರಕ್ಕಾಗಿ ಕಿತ್ತಾಟ ನಡೆದಿದೆ. ಇದರಿಂದ ಅವರಿಬ್ಬರು ಕುರ್ಚಿ ಉಳಿಸಿಕೊಳ್ಳುವುದರಲ್ಲೇ ಮಗ್ನರಾಗಿದ್ದಾರೆ. ರಾಜ್ಯದ ರೈತರು, ಸಾಮಾನ್ಯ ಜನರ ಕಷ್ಟಕ್ಕೆ ಸ್ಪಂದಿಸಲು ಪುರುಸೊತ್ತೂ ಇಲ್ಲ ವ್ಯವಧಾನವೂ ಇಲ್ಲದಾಗಿದೆ ಎಂದು ದೂರಿದರು.

ಸಿ.ಎಂ ಮನೆಯಲ್ಲಿ ಡಿಕೆ ಶಿವಕುಮಾರ್ ತಿಂಡಿ. ಡಿ.ಕೆ ಮನೆಯಲ್ಲಿ ಸಿ.ಎಂ ಸಿದ್ದರಾಮಯ್ಯ ಅವರು ತಿನ್ನುವುದರಲ್ಲಿ ತಲ್ಲೀನರಾಗಿದ್ದು ರಾಜ್ಯದ ಜನಸಾಮಾನ್ಯರ ಹೊಟ್ಟೆ ಮೇಲೆ ಹೊಡೆಯುವಂತ ಇವರಿಗೆ ಮುಂದಿನ ದಿನಗಳಲ್ಲಿ ರಾಜ್ಯದ ಮತದಾರರು ತಕ್ಕ ಪಾಠ ಕಲಿಸಲಿದ್ದಾರೆ ಎಂದು ಎಚ್ಚರಿಸಿದರು.ರೈತರ ಹೆಸರಲ್ಲಿ ಅಧಿಕಾರಕ್ಕೆ ಬಂದ ರಾಜ್ಯ ಕಾಂಗ್ರೆಸ್ ಸರ್ಕಾರ ರೈತರನ್ನು ಮರೆತಿದೆ. ರೈತರ ಕಣ್ಣೀರಿಗೆ ಕಾರಣವಾಗಿದ್ದು ರೈತರ ಶಾಪ ತಟ್ಟಲಿದೆ ಎಂದು ಹೇಳಿದರು. ಕೇಂದ್ರ ಸರ್ಕಾರವು ಮೆಕ್ಕೆಜೋಳಕ್ಕೆ ಬೆಂಬಲ ಬೆಲೆ ಘೋಷಿಸಿದ್ದರೂ ರಾಜ್ಯ ಸರ್ಕಾರವು ಮೆಕ್ಕೆಜೋಳದ ಖರೀದಿ ಕೇಂದ್ರ ಆರಂಭಿಸಿಲ್ಲ. ರಾಜ್ಯದ ರೈತರು ಅನೇಕ ಸಮಸ್ಯೆ ಎದುರಿಸುತ್ತಿದ್ದು ಇದ್ಯಾವುದರ ಗೊಡವೆಯೂ ನಮಗೆ ಸಂಬಂಧಿಸಿದ್ದಲ್ಲ ಎನ್ನುವಂತೆ ಕಿವಿ ಕೇಳಿಸದ, ಮಾತನಾಡಲು ಬಾರದದಂತ ಸರ್ಕಾರವಾಗಿದೆ ಎಂದರು. ಜಂಗಮಕೋಟೆ ಹೋಬಳಿಯ ರೈತರ ಕೃಷಿ ಜಮಿನುಗಳನ್ನು ಕೆಐಡಿಬಿಗೆ ಹಸ್ತಾಂತರಿಸುವುದನ್ನು ಕೂಡಲೆ ಕೈ ಬಿಡಬೇಕು ಎಂದು ಆಗ್ರಹಿಸಿ ತಹಶೀಲ್ದಾರ್ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು. ತಹಶೀಲ್ದಾರ್ ಎನ್.ಗಗನ ಸಿಂಧು ಮನವಿ ಸ್ವೀಕರಿಸಿದರು.


ಉದಯವಾಹಿನಿ ಚಿತ್ರ

ನಗರದ ಬಿಜೆಪಿ ಸೇವಾಸೌಧ ಕಚೇರಿಯಿಂದ ತಾಲ್ಲೂಕು ಕಚೇರಿವರೆಗೆ ಎತ್ತಿನಬಂಡಿಯಲ್ಲಿ ಆಗಮಿಸಿದ ಬಿಜೆಪಿ ಪ್ರಮುಖರು, ಕಾರ್ಯಕರ್ತರು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಮಾಜಿ ಶಾಸಕ ಎಂ.ರಾಜಣ್ಣ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮುರಳೀಧರ, ಮಧು ಸೂರ್ಯನಾರಾಯಣ, ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಜಿ.ವಿ ರಾಜಶೇಖರ, ಜಿಲ್ಲಾ ಒಬಿಸಿ ಮೋರ್ಚಾ ಅಧ್ಯಕ್ಷ ಆಂಜನೇಯಗೌಡ, ಸೀಕಲ್ ಆನಂದ ಗೌಡ, ಕಂಬದಹಳ್ಳಿ ಸುರೇಂದ್ರಗೌಡ ಭಾಗವಹಿಸಿದ್ದರು.

# ಪರಿಹಾರ ದರಕ್ಕೆ ಜಿಬಿಡಿಎ ಒಪ್ಪಿಗೆ

• ಉದಯವಾಹಿನಿ, ರಾಮನಗರ

ತಾಲ್ಲೂಕಿನ ಬಿಡದಿ ಹೋಬಳಿಯಲ್ಲಿ ತಲೆ ಎತ್ತಲಿರುವ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಜಿಬಿಐಟಿ ಯೋಜನೆಗಾಗಿ ಸ್ವಾಧೀನಪಡಿಸಿಕೊಳ್ಳಲಿರುವ ಭೂಮಿಗೆ ಬೆಂಗಳೂರು ದಕ್ಷಿಣ ಜಿಲ್ಲಾಧಿಕಾರಿ ನಿಗದಿಪಡಿಸಿರುವ ಪರಿಹಾರ ದರಕ್ಕೆ ಒಪ್ಪಿಗೆ ಸೂಚಿಸಿರುವ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಜಿಬಿಡಿಎ) ಸಾಮಾನ್ಯ ಸಭೆಯು, ಯೋಜನೆಯ ಮಾಸ್ಟರ್ ಪ್ಲ್ಯಾನ್ ತಯಾರಿಸಲು ಅನುಮೋದನೆ ನೀಡಿದೆ.ಬೆಂಗಳೂರಿನಲ್ಲಿರುವ ಬಿಎಂಆರ್ ಡಿಎ ಕಚೇರಿ ಸಂಕೀರ್ಣದಲ್ಲಿರುವ ಜಿಬಿಡಿಎ ಸಭಾಂಗಣದಲ್ಲಿ ಜಿಬಿಡಿಎ ಅಧ್ಯಕ್ಷ ಜಿ.ಎನ್. ನಟರಾಜ್ ಗಾಣಕಲ್ ಅಧ್ಯಕ್ಷತೆಯಲ್ಲಿ ನಡೆದ 8ನೇ ಸಾಮಾನ್ಯ ಸಭೆಯು, ಪರಿಹಾರ ದರಕ್ಕೆ ಸಮ್ಮತಿ ಸೂಚಿಸುವ ಜೊತೆಗೆ ಅದಕ್ಕೆ ಅನುಮೋದನೆ ಕೋರಿ ಸರ್ಕಾರಕ್ಕೆ ವರದಿ ಸಲ್ಲಿಸಲು ನಿರ್ಣಯ ಕೈಗೊಂಡಿತು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ನಟರಾಜ್, ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್ ಅವರು ನಿಗದಿಪಡಿಸಿರುವ ಪರಿಹಾರ ದರವನ್ನು ಭೂ ಮಾಲೀಕರಿಗೆ ಪಾವತಿಸಲು ಸರ್ಕಾರದ ಅನುಮೋದನೆ ಪಡೆಯಬೇಕಿದೆ. ಹಾಗಾಗಿ, ತಮ್ಮೆಲ್ಲರ ಸಮ್ಮತಿ ಮತ್ತು ಅಭಿಪ್ರಾಯ ಆಧರಿಸಿ ಸರ್ಕಾರಕ್ಕೆ ಕಳಿಸಲಾಗುವುದು ಎಂದು ಹೇಳಿದರು.

ಸಭೆಯಲ್ಲಿದ್ದ ಯೋಜನಾ ಪ್ರದೇಶದ ಮಾಗಡಿ ಶಾಸಕ ಬಾಲಕೃಷ್ಣ, ಜಿಬಿಡಿಎ ನಿರ್ದೇಶಕ ಡಿ.ಕೆ. ಸುರೇಶ್ ಸೇರಿದಂತೆ ಇತರ ನಿರ್ದೇಶಕರು ಪರಿಹಾರ ದರಕ್ಕೆ ಒಪ್ಪಿಗೆ ಸೂಚಿಸಿದರು. ಗರಿಷ್ಠ ಪರಿಹಾರ ನಿಗದಿಗೆ ಶ್ರಮಿಸಿರುವ ಜಿಲ್ಲಾಧಿಕಾರಿ ಶ್ರಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ, 'ಸರ್ಕಾರದಿಂದ ತುರ್ತಾಗಿ ಅನುಮೋದನೆ ಪಡೆದು ಮುಂದಿನ ಜನವರಿ ತಿಂಗಳ ಅಂತ್ಯದೊಳಗೆ ಪರಿಹಾರ ವಿತರಣೆಗೆ ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸಲಹೆ ನೀಡಿದರು.

**ಮಾಸ್ಟರ್ ಪ್ಲಾನ್‌ಗೆ ಅನುಮೋದನೆ:** ಭೈರಮಂಗಲ ಮತ್ತು ಕಂಚುಗಾರನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಿರ್ಮಾಣವಾಗಲಿರುವ ಉಪನಗರ ಮತ್ತು ಎ.ಐ ಸಿಟಿ ಯೋಜನೆಗೆ ಸಂಬಂಧಿಸಿದಂತೆ ಪ್ರಾಧಿಕಾರವು ಮಾಸ್ಟರ್ ಪ್ಲಾನ್ ತಯಾರಿಸಲು ಸಭೆಯು ಒಪ್ಪಿಗೆ ನೀಡಿತು.

ಜಿಬಿಐಟಿ–ಎಐಸಿಟಿ ನಿರ್ಮಾಣಕ್ಕೆ ಮೂಲ ಯೋಜನೆ ಸಿದ್ಧಪಡಿಸಬೇಕಿದೆ. ಉದ್ಯಮ, ವಸತಿ, ವಾಣಿಜ್ಯ ಪ್ರದೇಶ, ರಸ್ತೆ, ಉದ್ಯಾನ ಸೇರಿದಂತೆ ಹೊಸ ನಗರದ ರೂಪುರೇಷೆ ನಿರ್ಮಾಣದ ಬಗ್ಗೆ ಪ್ರಾಧಿಕಾರ ಸಮಗ್ರ ಯೋಜನೆಯನ್ನು ಸಿದ್ಧಪಡಿಸಲಿದೆ' ಎಂದು ನಟರಾಜ್ ಸಭೆ ಗಮನಕ್ಕೆ ತಂದರು. ಅದಕ್ಕೆ ಎಲ್ಲರೂ ಸಹಮತ ವ್ಯಕ್ತಪಡಿಸಿದರು.

**ಕೌಶಲ ಕೇಂದ್ರಕ್ಕೆ ಒಪ್ಪಿಗೆ:** ಉಪನಗರ ಯೋಜನಾ ಪ್ರದೇಶದಲ್ಲಿ ನಿರದ್ಯೋಗಿಗಳಿಗೆ ಹಾಗೂ ಯುವಜನರಿಗೆ ಸ್ವಯಂ ಉದ್ಯೋಗ ಸೇರಿದಂತೆ ವಿವಿಧ ಉದ್ಯೋಗಳಿಗೆ ಅನುಕೂಲವಾಗುವಂತೆ ಗ್ರೇಟರ್ ಬೆಂಗಳೂರು ಇಂಟಿಗ್ರೇಟೆಡ್ ಕೌಶಲ ಮತ್ತು ಉದ್ಯೋಗ ತರಬೇತಿ ಕೇಂದ್ರ ಸ್ಥಾಪಿಸಲು ಸಭೆಯಲ್ಲಿ ತಾತ್ವಿಕ ಅನುಮೋದನೆ ನೀಡಲಾಯಿತು. ತರಬೇತಿ ಕೇಂದ್ರದಲ್ಲಿ ಯೋಜನಾ ನಿರಾಶ್ರಿತರ ಕುಟುಂಬಗಳ ವಿದ್ಯಾವಂತ ಯುವಕ ಯುವತಿಯರಿಗೆ ಅವರ ಶೈಕ್ಷಣಿಕ ಅರ್ಹತೆಗೆ ಅನುಗುಣವಾಗಿ ತರಬೇತಿ ನೀಡಿ, ಮುಂದೆ ಉಪನಗರದಲ್ಲಿ ಸ್ಥಾಪನೆಯಾಗಲಿರುವ ಉದ್ಯಮಗಳಲ್ಲಿ ಉದ್ಯೋಗ ನೀಡಲು ಈಗಿನಿಂದಲೇ ಅವರನ್ನು ಅಣಿಗೊಳಿಸಬೇಕು ಎಂದು ಸಭೆಯಲ್ಲಿ ತೀರ್ಮಾನವಾಯಿತು.


ಉದಯವಾಹಿನಿ ಚಿತ್ರ

**ಜಿಬಿಐಟಿ ಟೌನ್‌ಶಿಪ್ ಯೋಜನೆ**

**ಜನವರಿ ತಿಂಗಳಾಂತ್ಯದಿಂದ ಪರಿಹಾರಕ್ಕೆ ಕ್ರಮ**

**ಬೆಂಗಳೂರು ಹೊರವಲಯದಲ್ಲಿ ಅತ್ಯಾಧುನಿಕ ಉಪನಗರ ನಿರ್ಮಾಣಕ್ಕೆ ದಿಟ್ಟ ಹೆಜ್ಜೆ ಇಟ್ಟಿರುವ ರಾಜ್ಯ ಸರ್ಕಾರ ಮೊದಲಿಗೆ ಬಿಡದಿ ಹೋಬಳಿಯಲ್ಲಿ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಇಲ್ಲಿನ ಭೂ ಸ್ವಾಧೀನಕ್ಕೆ ನಿಗದಿಪಡಿಸಿರುವ ಪರಿಹಾರ ದರವು ದೇಶದಲ್ಲೇ ಅತಿ ಹೆಚ್ಚಿನದ್ದು. ಅದಕ್ಕೆ ಪ್ರಾಧಿಕಾರದ ಸಾಮಾನ್ಯ ಸಭೆ ಒಪ್ಪಿಗೆ ಸೂಚಿಸಿದ್ದು ಸರ್ಕಾರದ ಅನುಮೋದನೆಗೆ ಕಳಿಸಲು ತೀರ್ಮಾನಿಸಲಾಗಿದೆ. ಅಲ್ಲಿ ಬೇಗನೆ ಅನುಮೋದನೆ ಸಿಗುವ ವಿಶ್ವಾಸವಿದ್ದು ಜನವರಿ ತಿಂಗಳಾಂತ್ಯದಿಂದ ಪರಿಹಾರ ವಿತರಿಸಲಾಗುವುದು. ಈ ನಿಟ್ಟಿನಲ್ಲಿ ಎಲ್ಲಾ ಸಿದ್ಧತೆ ಮಾಡಿ ಕೊಳ್ಳಲಾಗುತ್ತಿದೆ' ಎಂದು ಜಿಬಿಡಿಎ ಅಧ್ಯಕ್ಷ ಜಿ.ಎನ್. ನಟರಾಜ್ ಗಾಣಕಲ್ ತಿಳಿಸಿದರು.**

# ಕೈಗಾರಿಕೀಕರಣದ ಹೆಸರಿನಲ್ಲಿ ಜಲಮೂಲ, ನದಿಪಾತ್ರ ಬರಿದು

• ಉದಯವಾಹಿನಿ, ತುಮಕೂರು

ನಗರೀಕರಣ, ಕೈಗಾರಿಕೀಕರಣದ ಹೆಸರಿನಲ್ಲಿ ಜಲಮೂಲ, ನದಿಪಾತ್ರ ಬರಿದು ಮಾಡಿದರೆ ಮನುಕುಲ ಸೇರಿದಂತೆ ಇಡೀ ಜೀವ ಸಂಕುಲವೇ ಅಪಾಯಕ್ಕೆ ಸಿಲುಕಲಿದೆ ಎಂದು ಜಲಸಂಪನ್ಮೂಲ ಇಲಾಖೆ ನಿವೃತ್ತ ಕಾರ್ಯದರ್ಶಿ ಕೆ.ಜೈಪ್ರಕಾಶ್ ಎಚ್ಚರಿಸಿದರು. ನಗರದ ಸಿದ್ದಗಂಗಾ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಈಚೆಗೆ ಇಂಜಿನಿಯರುಗಳ ಸಂಸ್ಥೆ (ಐಇಐ) ಸಹಯೋಗದಲ್ಲಿ ಉತ್ತಮ ಜಗತ್ತು ರೂಪಿಸಲು ಸ್ಮಾರ್ಟ್ ಇಂಜಿನಿಯರಿಂಗ್ ಹಾಗೂ ರಾಜ್ಯದ ನೀರಿನ ಪರಿಸ್ಥಿತಿ ಕುರಿತು ಮಾತನಾಡಿದರು.

ಜನಸಂಖ್ಯೆ ಬೆಳೆಯುತ್ತಲೇ ಸಾಗಿದ್ದು, ನೀರಿಗೆ ಬೇಡಿಕೆ ಹೆಚ್ಚುತ್ತಿದೆ. ಇರುವ ಜಲಮೂಲವನ್ನು ಮಾಲಿನ್ಯ ರಹಿತವಾಗಿ ಸಂರಕ್ಷಿಸಿ ಸದ್ಬಳಕೆ ಮಾಡಿಕೊಳ್ಳಬೇಕು.

ಈ ದಿಸೆಯಲ್ಲಿ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುವ ಇಂಜಿನಿಯರುಗಳ ಪಾತ್ರ ಪ್ರಮುಖವಾಗಿದೆ. ನೀರಿನ ಸಂರಕ್ಷಣೆ ವಿಚಾರದಲ್ಲಿ ಎಚ್ಚರಿಕೆಯಿಂದ ಯೋಜನೆ ರೂಪಿಸಿ ಕಾಯಃ ರೂಪಕ್ಕೆ ತರಬೇಕು ಎಂದರು.


ಉದಯವಾಹಿನಿ ಚಿತ್ರ

# ಬುದ್ಧಿಮಾಂದ್ಯರನ್ನು ಬುದ್ಧಿವಂತರು ಎನ್ನಬೇಕು

• ಉದಯವಾಹಿನಿ, ಕೋಲಾರ

ಬುದ್ಧಿಮಾಂದ್ಯರು ಸೇರಿದಂತೆ ಅಂಗವಿಕಲರು ಎಲ್ಲಾ ಕ್ಷೇತ್ರಗಳಲ್ಲಿ ಯಾರಿಗೂ ಕಡಿಮೆ ಇಲ್ಲದಂತೆ ಸಾಧನೆ ಮಾಡುತ್ತಿದ್ದಾರೆ. ಹೀಗಾಗಿ, ಅವರನ್ನು ಬುದ್ಧಿಮಾಂದ್ಯರು ಎನ್ನುವ ಬದಲು ಬುದ್ಧಿವಂತರೆಂದು ಕರೆಯಬೇಕು ಎಂದು ಶಾಸಕ ಕೊತ್ತೂರು ಜಿ.ಮಂಜುನಾಥ್ ಅಭಿಪ್ರಾಯಪಟ್ಟರು.

ನಗರದ ಟಿ.ಚನ್ನಯ್ಯ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಅಂಕವಿಕಲರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳ ಆಶ್ರಯದಲ್ಲಿ ನಡೆದ ವಿಶ್ವ ಅಂಗವಿಕಲರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಜಿಲ್ಲೆಯಲ್ಲಿ ಕೆಲಸ ಮಾಡುತ್ತಿರುವ ಸ್ವಯಂ ಸೇವಾ ಸಂಸ್ಥೆಗಳು ಉತ್ತಮ ಸೇವೆ ಸಲ್ಲಿಸುತ್ತಿವೆ. ನೃತ್ಯ ಮತ್ತು ವಿದ್ಯಾಭ್ಯಾಸ ಕಲಿಸುವುದು ಅಷ್ಟು ಸುಲಭವಲ್ಲ, ಆ ಕೆಲಸವನ್ನು ಸಂಸ್ಥೆಗಳು ಮಾಡುತ್ತಿವೆ. ಅಂಗವಿಕಲರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಕೆಲಸವನ್ನು ನಾವೆಲ್ಲರೂ ಮಾಡಬೇಕು ಎಂದರು. ವಿಧಾನ ಪರಿಷತ್ ಸದಸ್ಯ ಎಂ.ಎಲ್. ಅನಿಲ್ ಕುಮಾರ್, ಅಂಗವಿಕರಲ್ಲಿ ವಿಶೇಷ ಪ್ರತಿಭೆಗಳು ಇರುವುದನ್ನು ಗುರುತಿಸಿ ಬೆಳಕಿಗೆ ತರಬೇಕು. ಪ್ರತಿಭೆಗೆ ಪ್ರೋತ್ಸಾಹಿಸಿ ಸಮಾಜಮುಖಿಗಳನ್ನಾಗಿ ರೂಪಿಸಬೇಕು' ಎಂದು ಸಲಹೆ ನೀಡಿದರು. ಜಿಲ್ಲಾ ಪಂಚಾಯಿತಿ ಸಿಇಒ ಪ್ರವೀಣ್ ಪಿ.ಬಾಗೇವಾಡಿ ಮಾತನಾಡಿ, 'ಹಿಂದೆ ಅಂಗವಿಕಲರು ಎಂದು ಕರೆಯುತ್ತಿದ್ದೆವು. ಪ್ರಸ್ತುತ ಅವರನ್ನು ವಿಶೇಷ ಚೇತನರು ಎನ್ನುತ್ತೇವೆ. ಅನೇಕ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಿರುವುದನ್ನು ಗಮನಿಸಬಹುದಾಗಿದೆ' ಎಂದರು. ಅಂತರಗಂಗಾ ವಿದ್ಯಾಸಂಸ್ಥೆಯಲ್ಲಿ ಅನೇಕ ವಿಶೇಷ ಚೇತನ ಮಕ್ಕಳಿಗೆ ಉತ್ತಮ ಶಿಕ್ಷಣ ಹಾಗೂ ತರಬೇತಿ ನೀಡಲಾಗುತ್ತಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಮಾಲೂರು ತಾಲ್ಲೂಕು ನಂದಿದೀಪ ವಿಕಲ ಚೇತನರ ಸಂಸ್ಥೆಯಿಂದ ಕಾಂತರ ಚಿತ್ರದ ಹಾಡಿಗೆ ನೃತ್ಯ ಕೋಲಾರ ಅಂತರಗಂಗೆ ಸಂಸ್ಥೆ ಮಕ್ಕಳಿಂದ ಜೋಗಯ್ಯ ಚಿತ್ರದ ಹಾಡಿನ ನೃತ್ಯ, ಮುಳಬಾಗಿಲು ತಾಲ್ಲೂಕಿನ ವಿಕಲಚೇತನರ ಸಂಸ್ಥೆಯಿಂದ ನಾಗರಹೊಳೆಯ ಬುಡಕಟ್ಟು ಜನರ ಹಾಡಿನ ನೃತ್ಯ, ಶತಶೃಂಗ ವಿಕಲಚೇತನ ಸಂಸ್ಥೆ ಮಕ್ಕಳು ನೀಡಿದ ಮನರಂಜನೆ ಕಾರ್ಯಕ್ರಮಗಳು ಗಮನ ಸೆಳೆದವು. ಗ್ರಾಮೀಣಾಭಿವೃದ್ಧಿ ಯೋಜನೆ ಅಡಿಯಲ್ಲಿ ವಿಶೇಷ ಚೇತನರಿಗೆ ಪುನರ್ವಸತಿ ಕಾರ್ಯಕರ್ತರಾಗಿ ಉತ್ತಮ ಕೆಲಸ ಮಾಡುತ್ತಿರುವವರನ್ನು ಸನ್ಮಾನಿಸಲಾಯಿತು.


ಉದಯವಾಹಿನಿ ಚಿತ್ರ

# ಇಂದಿನಿಂದ ಪೌರ ನೌಕರರ ಅನಿರ್ದಿಷ್ಟಾವಧಿ ಮುಷ್ಕರ

## ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹ: ಕರ್ತವ್ಯಕ್ಕೆ ನೌಕರರ ಗೈರು ಹಾಜರಿ: ಸ್ವಚ್ಛತೆ, ಕಚೇರಿ ಕೆಲಸ ಸೇರಿ ಎಲ್ಲಾ ಕಾರ್ಯಗಳು ಸ್ಥಗಿತ

• ಉದಯವಾಹಿನಿ, ರಾಮನಗರ


ತಮ್ಮನ್ನು ಸರ್ಕಾರಿ ನೌಕರರು ಎಂದು ಪರಿಗಣಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ 6 ತಿಂಗಳ ಹಿಂದೆ ಅನಿರ್ದಿಷ್ಟಾವಧಿ ಮುಷ್ಕರ ನಡೆಸಿದ್ದ ಕರ್ನಾಟಕ ರಾಜ್ಯ ಪೌರ ನೌಕರರ ಸಂಘ, ಸರ್ಕಾರ ಕೊಟ್ಟ ಮಾತಿನಂತೆ ತಮ್ಮ ಬೇಡಿಕೆಗೆ ಸ್ಪಂದಿಸದ ಹಿನ್ನೆಲೆಯಲ್ಲಿ ಶುಕ್ರವಾರದಿಂದ ಮತ್ತೆ ರಾಜ್ಯದಾದ್ಯಂತ ಮುಷ್ಕರ ಆರಂಭಿಸಿದೆ.

ಈ ಕುರಿತು ನಗರಸಭೆಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ರಾಜ್ಯ ಉಪಾಧ್ಯಕ್ಷ ಆರ್. ನಾಗರಾಜು, ವಿವಿಧ ಬೇಡಿಕೆ ಈಡೇರಿಕೆಗಾಗಿ ಸಂಘವು ಮೇ ತಿಂಗಳಲ್ಲಿ ಮುಷ್ಕರ ನಡೆಸಿತ್ತು. ಆಗ ಸರ್ಕಾರ ಸಂಘದ ಜೊತೆ ಸಭೆ ನಡೆಸಿ, ಒಂದು ತಿಂಗಳೊಳಗೆ ಬೇಡಿಕೆ ಈಡೇರಿಸುವ ಭರವಸೆ ನೀಡಿ ಮರೆಯಿತು. ಅನಿವಾರ್ಯವಾಗಿ ನಾವು ಮತ್ತೆ ಮುಷ್ಕರದ ಹಾದಿ ಹಿಡಿಯಬೇಕಾಗಿದೆ' ಎಂದರು.

**ಸಭೆ ನಡೆಸಿದ್ದ ಸಚಿವ:** ಹಿಂದೆ ಮುಷ್ಕರ ನಡೆಸಿದ್ದಾಗ ಪೌರಾಡಳಿತ ಸಚಿವ ರಹೀಂ ಖಾನ್ ನೇತೃತ್ವದಲ್ಲಿ ಮುಖ್ಯಮಂತ್ರಿಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್, ಆರ್ಥಿಕ ಇಲಾಖೆ ಕಾರ್ಯದರ್ಶಿ ಪಿ.ಸಿ. ಜಾಫರ್ ಹಾಗೂ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ದೀಪಾ ಚೋಳನ್ ಹಾಗೂ ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕ ಪ್ರಭುಲಿಂಗ ಕವಳಿಕಟ್ಟಿ ಅವರು ಸಂಘದ ರಾಜ್ಯಾಧ್ಯಕ್ಷ ಕೆ. ಪ್ರಭಾಕರ್ ಹಾಗೂ ಪದಾಧಿಕಾರಿಗಳ ಜೊತೆ ಸಭೆ ನಡೆಸಿದ್ದರು ಎಂದು ಹೇಳಿದರು.

ನೌಕರರ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಬದ್ಧವಾಗಿದೆ ಎಂದಿದ್ದ ಸಚಿವರು, ಕೆಲ ಬೇಡಿಕೆಗಳ ಈಡೇರಿಕೆಗಾಗಿ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರಬೇಕಾಗಿದೆ. ಹಾಗಾಗಿ ಹಾಗೂ 3 ತಿಂಗಳು ಕಾಲಾವಕಾಶ ಬೇಕಾಗುತ್ತದೆ. ಎಂದು ಅಭಿಪ್ರಾಯಪಟ್ಟಿದ್ದರು.

ದೀರ್ಘ ಕಾಲಾವಧಿಗೆ ಆಕ್ಷೇಪ ವ್ಯಕ್ತಪಡಿಸಿದಾಗ ಒಂದು ತಿಂಗಳು ಕಾಲಾವಕಾಶ ಕೇಳಿದ್ದರು. ಅದಾಗಿ 6 ತಿಂಗಳಾದರೂ ಬೇಡಿಕೆಗಳು ಮಾತ್ರ ಈಡೇರಿಲ್ಲ ಎಂದರು. ಮುಷ್ಕರಿಂದ ಜನರಿಗೆ ತೊಂದರೆಯಾದರೂ, ನ್ಯಾಯಯುತ ಬೇಡಿಕೆಗಳಿಗಾಗಿ ನಾವು ಕರ್ತವ್ಯಕ್ಕೆ ಮುಷ್ಕರ ನಡೆಸದೆ ಬೇರೆ ಮಾರ್ಗವಿಲ್ಲ. ಡಿ. 8ರಿಂದ ಆರಂಭವಾಗಲಿರುವ ಚಳಿಗಾಲದ ಅಧಿವೇಶನದಲ್ಲಿ ನಮ್ಮ ಪರವಾಗಿ ದನಿ ಎತ್ತಿ ನ್ಯಾಯ ಒದಗಿಸುವಂತೆ, ಈಗಾಗಲೇ ವಿರೋಧ ಪಕ್ಷದ ನಾಯಕರು ಹಾಗೂ ಎಲ್ಲಾ ಸ್ಥಳೀಯ ಶಾಸಕರಿಗೂ ಸಂಘದಿಂದ ಮನವಿ ಸಲ್ಲಿಸಲಾಗಿದೆ. ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ' ಎಂದರು. ಸುದ್ದಿಗೋಷ್ಠಿಯಲ್ಲಿ ಸಂಘದ ಜಿಲ್ಲಾಧ್ಯಕ್ಷ ವಿ. ವೆಂಕಟೇಶ್, ರಾಮನಗರ ಶಾಖೆ ಅಧ್ಯಕ್ಷ ದೇವೇಂದ್ರ, ಪ್ರಧಾನ ಕಾರ್ಯದರ್ಶಿ ಕೊಲ್ಲಾಪುರಿ, ಗೌರವಾಧ್ಯಕ್ಷ ನಟರಾಜಿಗೌಡ, ಮುಖಂಡರಾದ ರಾಮಣ್ಣ, ಪಿ. ನರಸಿಂಹ, ರಾಮಸಂಜೀವಯ್ಯ ಹಾಗೂ ಕೆ.ಎಸ್. ನಾಗರಾಜ್, ಮುತ್ತಣ್ಣ, ಧನಲಕ್ಷ್ಮಿ ಹಾಗೂ ಇತರರು ಇದ್ದರು.


ಉದಯವಾಹಿನಿ ಚಿತ್ರ

**ಎ.ಸಿ ಕೊಠಡಿಯಲ್ಲಿ ಕುಳಿತು ಕೆಲಸ ಮಾಡುವವರಿಗೆ ಸರ್ಕಾರ ನಗದು ರಹಿತ ಚಿಕಿತ್ಸೆ ಸೌಲಭ್ಯ ಕೊಡುತ್ತದೆ. ಆದರೆ ಮಳೆ ಗಾಳಿ ಬಿಸಿಲು ಸಾಂಕ್ರಾಮಿಕ ರೋಗಗಳನ್ನು ಲೆಕ್ಕಿಸದೆ ಕೆಲಸ ಮಾಡುವವರಿಗೆ ಕೊಡಲು ಮೀನಮೇಷ ಎಣಿಸುತ್ತಿದೆ**

**-ಆರ್. ನಾಗರಾಜು ರಾಜ್ಯ ಉಪಾಧ್ಯಕ್ಷ ಕರ್ನಾಟಕ ರಾಜ್ಯ ಪೌರ ನೌಕರರ ಸಂಘ**

**ಮುಷ್ಕರದ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳು. ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ನೌಕರರು ಕರ್ತವ್ಯಕ್ಕೆ ಗೈರಾಗಲಿದ್ದಾರೆ. ಹಾಗಾಗಿ ತ್ಯಾಜ್ಯ ಸಂಗ್ರಹಣೆ, ಕಸ ತೆರವು, ಒಳ ಚರಂಡಿ ಸ್ವಚ್ಛತೆ ಮತ್ತು ನಿರ್ವಹಣೆ. ಯುಜಿಡಿ ಕೆಲಸ ಹಾಗೂ ಕಚೇರಿ ಕಾರ್ಯಗಳು ಸ್ಥಗಿತಗೊಳ್ಳಲಿವೆ. ಕಚೇರಿಗಳ ಮುಂದೆ ನೌಕರರು ಅನಿರ್ದಿಷ್ಟಾವಧಿ ಧರಣಿ ಕೂರಲಿದ್ದಾರೆ ಎಂದು ತಿಳಿಸಿದರು.**

## ಮಿನಿ ನ್ಯೂಸ್

### ಮಹಿಳಾ ಕೌಶಲ ತರಬೇತಿ

• ಉದಯವಾಹಿನಿ, ಮಾಗಡಿ

ರೋಟರಿ ಮಾಗಡಿ ಸೆಂಟ್ರಲ್ ಮತ್ತು ವಿದ್ಯಾಸರಸ್ವತಿ ಚಾರಿಟೆಬಲ್ ಟ್ರಸ್ಟ್ ಆಯೋಜಿಸಿದ್ದ ಉಚಿತ ಟೈಲರಿಂಗ್, ಬ್ಯೂಟಿ ಪಾರ್ಲರ್, ಜರಿ ಮತ್ತು ಆರಿ ವರ್ಕ್ ತರಬೇತಿ ಕಾರ್ಯಕ್ರಮದ ಸಮಾರೋಪ ಸಮಾರಂಭ ನಡೆಯಿತು.ರೋಟರಿ ಮಾಗಡಿ ಸೆಂಟ್ರಲ್ ಅಧ್ಯಕ್ಷ ಡಾ.ಮಂಜುನಾಥ್ ಬೆಟಗೇರಿ, ಮಹಿಳೆಯರು ಈ ತರಬೇತಿ ಮೂಲಕ ಸ್ವಯಂ ಉದ್ಯೋಗಿ ಆಗಿ ಆರ್ಥಿಕ ಸ್ವಾತಂತ್ರ್ಯ ಗಳಿಸಬೇಕು ಎಂದರು.

ರೋಟರಿ ಪ್ರಭಾಕರ್, ಕಾರ್ಯದರ್ಶಿ ಶಂಕರಮೂರ್ತಿ, ಈ ಕೌಶಲ ತರಬೇತಿಯು ಮಹಿಳಾ ಸಬಲೀಕರಣ ಮತ್ತು ಆರ್ಥಿಕ ಸ್ವಾವಲಂಬನೆಗೆ ನೆರವಾಗುತ್ತದೆ ಎಂದು ತಿಳಿಸಿದರು. ತಾಲೂಕಿನ 70ಕ್ಕೂ ಹೆಚ್ಚು ಮಹಿಳೆಯರು ಒಂದು ತಿಂಗಳ ಉಚಿತ ತರಬೇತಿಯಲ್ಲಿ ಭಾಗವಹಿಸಿದ್ದರು. ತರಬೇತಿ ಪೂರ್ಣಗೊಂಡವರಿಗೆ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು. ರೋಟರಿ ಜಿಲ್ಲಾ ಹಾಗೂ ಸ್ಥಳೀಯ ಅಧಿಕಾರಿಗಳು, ಟ್ರಸ್ಟ್ ಪ್ರತಿನಿಧಿಗಳು ಮತ್ತು ಸದಸ್ಯರು ಹಾಜರಿದ್ದರು.

### ಕಾಂಗ್ರೆಸ್‌ನಲ್ಲಿ ಭಿನ್ನಾಭಿಪ್ರಾಯವಿಲ್ಲ: ಸಚಿವ ದಿನೇಶ್ ಗುಂಡೂರಾವ್

• ಉದಯವಾಹಿನಿ, ಮೈಸೂರು

ಕಾಂಗ್ರೆಸ್‌ನಲ್ಲಿ ಯಾವುದೇ ಭಿನ್ನಾಭಿಪ್ರಾಯವಾಗಲಿ ಅಥವಾ ಗೊಂದಲವಾಗಲಿ ಇಲ್ಲ ಹೈಕಮಾಂಡ್ ನಿರ್ಧಾರಕ್ಕೆ ಬದ್ಧ ಎಂದು ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು. ಇಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಹಾಗೂ ನಾಯಕತ್ವ ಬದಲಾವಣೆ ಸಂಬಂಧಿಸಿದಂತೆ ಹೈಕಮಾಂಡ್ ತೀರ್ಮಾನವೇ ಅಂತಿಮ ಎಂದರು. ಮುಖ್ಯಮಂತ್ರಿ ಆಗಬೇಕು ಎಂದು ಎಲ್ಲರಿಗೂ ಆಸೆ ಇರುತ್ತದೆ. ಯಾರು ಆ ಸ್ಥಾನದಲ್ಲಿ ಕೂರಬೇಕು ಎಂಬುದನ್ನು ನಮ್ಮ ಹೈಕಮಾಂಡ್ ನಿರ್ಧರಿಸುತ್ತದೆ. ನನಗೂ ಸಿಎಂ ಆಗಬೇಕೆಂಬ ಆಸೆ ಇದೆ. ಆದರೆ, ಸಮಯ ಬಂದಾಗ ಎಲ್ಲವನ್ನೂ ವರಿಷ್ಠರು ತೀರ್ಮಾನಿಸುತ್ತಾರೆ. ಹೈಕಮಾಂಡ್ ಏನು ನಿರ್ಧಾರ ಮಾಡುತ್ತದೆಯೋ ನೋಡೋಣ' ಎಂದು ಹೇಳಿದರು. ವಿರೋಧ ಪಕ್ಷ ಬಿಜೆಪಿ ಸಂಪೂರ್ಣ ನಿಷ್ಕ್ರಿಯವಾಗಿದೆ. ಆ ಪಕ್ಷದ ಬಿ.ವೈ. ವಿಜಯೇಂದ್ರ, ಆರ್. ಅಶೋಕ್, ಪ್ರಲ್ಹಾದ ಜೋಶಿ ಮೊದಲಾದವರು ಕೇವಲ ಭಾಷಣ ಬಿಗಿಯುವುದರಲ್ಲೇ ನಿರತರಾಗಿದ್ದಾರೆ. ರಾಜ್ಯದ ರೈತರ ಸಮಸ್ಯೆಗಳನ್ನು ಕೇಂದ್ರ ಸರ್ಕಾರಕ್ಕೆ ತಲುಪಿಸುತ್ತಿಲ್ಲ. ರಾಜ್ಯಕ್ಕೆ ಅನ್ಯಾಯ ಆಗುತ್ತಿರುವ ಬಗ್ಗೆ ಬಿಜೆಪಿ ಸಂಸದರು ಧ್ವನಿ ಎತ್ತುತ್ತಿಲ್ಲ. ಅವರಿಗೆ ಜವಾಬ್ದಾರಿ ಇಲ್ಲವೇ' ಎಂದು ಕೇಳಿದರು.

### 12 ಮಂದಿ ವಿರುದ್ಧ ಅಟ್ರಾಸಿಟಿ ಪ್ರಕರಣ ದಾಖಲು



ಉದಯವಾಹಿನಿ ಚಿತ್ರ

• ಉದಯವಾಹಿನಿ, ಗುಂಡ್ಲುಪೇಟೆ

ತಾಲ್ಲೂಕಿನ ಬೆಳವಾಡಿ ಗ್ರಾಮದ ಬಸವ ಭವನ ನಿರ್ಮಾಣ ಸಂಬಂಧ ಜಟಾಪಟಿ ಏರ್ಪಟ್ಟು 12 ಮಂದಿ ವಿರುದ್ಧ ಅಟ್ರಾಸಿಟಿ(ಪರಿಶಿಷ್ಟ ಜಾತಿ ದೌರ್ಜನ್ಯ ಪ್ರತಿಬಂಧಕ ಕಾಯ್ದೆ) ಅಡಿಯಲ್ಲಿ ಗುಂಡ್ಲುಪೇಟೆ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಳವಾಡಿ ಗ್ರಾಮದ ಶಿವಬಸಪ್ಪ, ನಂಜಪ್ಪ, ಗವಿಯಪ್ಪ, ಶಂಕರಪ್ಪ, ಗವಿಸ್ವಾಮಿ, ಗವಿಸ್ವಾಮಿ,ಗವಿ ದರ್ಶನ್, ಮಲ್ಲಿಕಾರ್ಜುನ್, ಶಂಕರಪ್ಪ, ಮಾದಪ್ಪ ಶಿವಮಲ್ಲಪ್ಪ, ಮಹದೇವಸ್ವಾಮಿ ಸೇರಿ ಒಟ್ಟು 12 ಮಂದಿ ವಿರುದ್ಧ ದೇಶಯ್ಯ ಎಂಬುವವರು ಕೊಟ್ಟ ದೂರಿನ ಅನ್ವಯ ಗುಂಡ್ಲುಪೇಟೆ ಠಾಣೆಯಲ್ಲಿ ಅಟ್ರಾಸಿಟಿ ಕೇಸ್ ದಾಖಲಾಗಿದೆ. ಗ್ರಾಮದ ಎಲ್ಲಾ ಸಮುದಾಯಗಳಿಗೆ ಸೇರಿದ ಗವಿರುದ್ರೇಶ್ವರ ದೇವಾಲಯ ಜಾಗದಲ್ಲಿ ಬಸವ ಭವನ ನಿರ್ಮಾಣ ಮಾಡುತ್ತಿರುವುದು ಸರಿಯಲ್ಲ ಎಂದು ಕೇಳಿದ್ದಕ್ಕೆ ಕೊಲೆ ಬೆದರಿಕೆ ಹಾಕಿ, ಜಾತಿನಿಂದನೆ ಮಾಡಿದ್ದಾರೆಂದು ದೂರು ಕೊಡಲಾಗಿದೆ. ಡಿ.4ರ ಗುರುವಾರವಷ್ಟೇ ಬಸವ ಭವನ ನಿರ್ಮಾಣ ಮಾಡಲು ಶಾಸಕ ಗಣೇಶಪ್ರಸಾದ್ ಗುದ್ದಲಿ ಪೂಜೆ ನೆರವೇರಿಸಿದ್ದರು. ಗುದ್ದಲಿ ಪೂಜೆ ಮಾಡಿರುವ ಜಾಗದಲ್ಲಿ ಬಸವ ಭವನ ನಿರ್ಮಾಣ ಮಾಡಬಾರದೆಂದು ದೇಶಯ್ಯ ದೂರು ಕೊಟ್ಟು ಒತ್ತಾಯಿಸಿದ್ದಾರೆ.

### ದಾಖಲೆ ಜಾಲಾಡಿದ ಲೋಕಾಯುಕ್ತರು


ಉದಯವಾಹಿನಿ ಚಿತ್ರ

• ಉದಯವಾಹಿನಿ, ತುರುವೇಕೆರೆ

ತಾಲ್ಲೂಕಿನ ಹಲವೆಡೆ ಕೋಟ್ಯಂತರ ರೂಪಾಯಿ ಸರ್ಕಾರಿ ಜಮೀನನ್ನು ಸುಳ್ಳು ದಾಖಲೆ ಸೃಷ್ಟಿಸಿ ಪರಭಾರೆ ಮಾಡಿರುವ ಸಂಬಂಧ ಬಂದಿರುವ ದೂರಿನ ಮೇರೆಗೆ ಜಿಲ್ಲಾ ಲೋಕಾಯುಕ್ತ ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ. ಬೆಳಗ್ಗೆಯೇ ತಾಲ್ಲೂಕು ಕಚೇರಿಗೆ ಬಂದಿಳಿದ ಲೋಕಾಯುಕ್ತ ಪೊಲೀಸರು ಸುಳ್ಳು ದಾಖಲೆ ಸೃಷ್ಟಿಸಿರುವ ಕುರಿತು ತಾಲ್ಲೂಕು ಕಚೇರಿ ಸಿಬ್ಬಂದಿಯನ್ನು ಸ್ಥಳಕ್ಕೆ ಕರೆಸಿ ಸಂಬಂಧಿಸಿದ ಭೂಮಿಗಳ ದಾಖಲೆ ಪರಿಶೀಲಿಸಿದರು.

ತಾಲ್ಲೂಕಿನ ನರಿಗೇಹಳ್ಳಿ, ಲೆಂಕನಹಳ್ಳಿ, ದೇವನಾಯಕನಹಳ್ಳಿ ಸೇರಿದಂತೆ ವಿವಿಧ ಗ್ರಾಮಗಳಲ್ಲಿದ್ದ ಸರ್ಕಾರಿ ಭೂಮಿಯನ್ನು ಕೆಲವು ಅಧಿಕಾರಿಗಳು, ಮಧ್ಯವರ್ತಿಗಳು ಸೇರಿದಂತೆ ಹಲವರು ಲಕ್ಷಾಂತರ ಹಣ ಪಡೆದು ಬೇರೆಯವರಿಗೆ ಪರಭಾರೆ ಮಾಡಿದ್ದಾರೆ ಎಂದು ದೂರು ದಾಖಲಾಗಿತ್ತು. ಈ ನಕಲಿ ದಾಖಲೆಗಳನ್ನು 2018-19ರಲ್ಲಿ ಸೃಷ್ಟಿಸಲಾಗಿದೆ. 1995ರಲ್ಲೇ ಈ ಭೂಮಿಯನ್ನು ಮಂಜೂರು ಮಾಡಲಾಗಿದೆ ಎಂದು ನಕಲಿ ಪತ್ರವನ್ನೂ ಸಹ ಸೃಷ್ಟಿಸಿ ಪರಭಾರೆ ಮಾಡಲಾಗಿದೆ ಎಂದು ಹೇಳಲಾಗಿದೆ. ಈ ಬಗ್ಗೆ ಹಲವರು ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದರು. ಈಗಾಗಲೇ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಹಿಂದಿನ ತಹಶೀಲ್ದಾರ್ ಆಗಿದ್ದ ನಾಗರಾಜ್, ಸಿಬ್ಬಂದಿ ಕಲ್ಲೇಶ್ ಮತ್ತು ತಿಪಟೂರು ಉಪವಿಭಾಗಾಧಿಕಾರಿ ಕಚೇರಿಯ ಕೆಲ ಸಿಬ್ಬಂದಿ ಮತ್ತು ತುರುವೇಕೆರೆ ಕೆಲವು ಸಿಬ್ಬಂದಿಯನ್ನು ತನಿಖೆಗೆ ಒಳಪಡಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಅಂತರಾಳದಿಂದ...
EDITORIAL

# ರಾಜ್ಯ ಬಿಜೆಪಿ ನಾಯಕರ ಉಪಾಹಾರ ಸಭೆ ಎಂದು

ರಾಜ್ಯ ಕಾಂಗ್ರೆಸ್ ನೊಳಗಿನ ಭಿನ್ನಮತದ ಕಾರಣದಿಂದ ಸರಕಾರ ಬೀಳಬಹುದೋ ಎಂದು ಕಣ್ಣಿಗೆ ಎಣ್ಣೆ ಬಿಟ್ಟು ಕಾಯುತ್ತಿದ್ದ ಬಿಜೆಪಿ ನಾಯಕರಿಗೆ ನಿರಾಸೆಯಾಗಿದೆ. ಇದೀಗ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿಯವರು ಜೊತೆಯಾಗಿ ಉಪಾಹಾರ ಮಾಡಿದ ತಟ್ಟೆಯಲ್ಲಿ ಉಳಿದ ಆಹಾರಗಳ ರುಚಿ ನೋಡಿ ಅದರಲ್ಲಿ ತಪ್ಪು ಹುಡುಕಲು ಹೊರಟಿದ್ದಾರೆ. ಉಪಾಹಾರದ ಸಂದರ್ಭದಲ್ಲಿ ಮಾಂಸಾಹಾರ ಯಾಕೆ ತಿಂದಿರಿ ಹನುಮಜಯಂತಿಯ ದಿನ ಕೋಳಿ ತಿಂದದ್ದು ಯಾಕೆ ಎಂಬಿತ್ಯಾದಿ ಪ್ರಶ್ನೆಗಳನ್ನು ಕೇಳುತ್ತಾ ಸ್ವತಃ ಬಿಜೆಪಿ ನಾಯಕರೇ ಹಾಸ್ಯಾಸ್ಪದರಾಗುತ್ತಿದ್ದಾರೆ. ಸರಕಾರವನ್ನು ಟೀಕಿಸುವುದಕ್ಕೆ ಬಿಜೆಪಿ ನಾಯಕರ ಬಳಿ ವಿಷಯಗಳೇ ಇಲ್ಲವೇ ಎಂದು ಜನಸಾಮಾನ್ಯರು ಪ್ರಶ್ನಿಸುವಂತಾಗಿದೆ. ಇದೇ ಸಂದರ್ಭದಲ್ಲಿ ಬಿಜೆಪಿಯ ತಳಸ್ತರದ ಕಾರ್ಯಕರ್ತರು ರಾಜ್ಯ ಬಿಜೆಪಿ ನಾಯಕರಿಗೆ ''ನಿಮ್ಮ ನಡುವಿನ ಉಪಾಹಾರ ಕಾರ್ಯಕ್ರಮ ಯಾವಾಗ ಎಂದು ಕೇಳುತ್ತಿದ್ದಾರೆ. ಉಪಾಹಾರದಲ್ಲಿ ಏನನ್ನಾದರೂ ತಿನ್ನಿ. ಆದರೆ ದಯವಿಟ್ಟು ಜೊತೆ ಕೂತು ಮಾತುಕತೆ ನಡೆಸಿ ರಾಜ್ಯ ಬಿಜೆಪಿಯೊಳಗಿನ ಭಿನ್ನಾಭಿಪ್ರಾಯಕ್ಕೆ ಈಗಲಾದರೂ ಪರಿಹಾರವನ್ನು ಹುಡುಕಿ ಎಂದು ಅವರು ಮನವಿ ಮಾಡುತ್ತಿದ್ದಾರೆ. ಕಾಂಗ್ರೆಸ್ ನೊಳಗಿನ ಭಿನ್ನಾಭಿಪ್ರಾಯಗಳಿಗೆ ತೆರೆಬಿದ್ದ ಬೆನ್ನಿಗೇ, ಇತ್ತ ರಾಜ್ಯ ಬಿಜೆಪಿಯ ಒಂದು ಗುಂಪು ದಿಲ್ಲಿಗೆ ಪ್ರಯಾಣ ಬೆಳೆಸಿದೆ. ರಾಜ್ಯಾಧ್ಯಕ್ಷರ ಬದಲಾವಣೆಯಾಗಬೇಕು ಎನ್ನುವ ಕೂಗು ಬಿಜೆಪಿಯೊಳಗೆ ಮತ್ತೆ ಎದ್ದಿದೆ. ರಮೇಶ್ ಜಾರಕಿಹೊಳಿ ನೇತೃತ್ವದಲ್ಲಿ ಕುಮಾರ ಬಂಗಾರಪ್ಪ, ಬಿ.ವಿ. ನಾಯಕ್, ಬಿ. ಪಿ. ಹರೀಶ್ ಸೇರಿದಂತೆ ಹಲವರು ದಿಲ್ಲಿಗೆ ತೆರಳಿದ್ದಾರೆ ಎಂದು ವರದಿಗಳು ಹೇಳುತ್ತಿವೆ. ರಾಜ್ಯಾಧ್ಯಕ್ಷ ಸ್ಥಾನದಿಂದ ವಿಜಯೇಂದ್ರ ಅವರನ್ನು ಕೆಳಗಿಳಿಸುವ ಪ್ರಯತ್ನ ಸಂಪೂರ್ಣ ವಿಫಲವಾಗಿ ಯತ್ನಾಳ್ ಸೇರಿದಂತೆ ಹಲವರ ವಿರುದ್ಧ ಬಿಜೆಪಿ ವರಿಷ್ಠರು ಶಿಸ್ತು ಕ್ರಮ ತೆಗೆದುಕೊಂಡ ಬಳಿಕ ಭಿನ್ನಮತೀಯರು ತಣ್ಣಗಾಗಿದ್ದರು. ರಾಜ್ಯಾಧ್ಯಕ್ಷರ ಆಯ್ಕೆಗೆ ಚುನಾವಣೆ ನಡೆಸುವ ಇಂಗಿತವನ್ನು ವರಿಷ್ಠರು ವ್ಯಕ್ತಪಡಿಸಿದ್ದರಾದರೂ, ವಿಜಯೇಂದ್ರ ಪರವಾಗಿ ಚುನಾವಣೆಗೆ ನಿಲ್ಲುವ ಧೈರ್ಯವನ್ನು ಯಾವ ಭಿನ್ನಮತೀಯರೂ ಪ್ರದರ್ಶಿಸಲಿಲ್ಲ. ಸ್ವತಃ ಯತ್ನಾಳ್ ಕೂಡ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಘೋಷಿಸಿ ಬಿಟ್ಟರು. ವಿಜಯೇಂದ್ರ ಅವರನ್ನು ಬದಲಿಸಲು ಕೇಶವ ಕೃಪಾದಲ್ಲಿ ಸಂಚುಗಳು ರೂಪುಗೊಳ್ಳುತ್ತಿದ್ದವಾದರೂ, ಬಹಿರಂಗವಾಗಿ ಅವರ ವಿರುದ್ಧ ಮಾತನಾಡುವ ಧೈರ್ಯವನ್ನು ಈವರೆಗೆ ಪ್ರದರ್ಶಿಸಿಲ್ಲ. ಬಿಜೆಪಿಯೊಳಗಿರುವ ಕೆಲವು ಶೂದ್ರ, ಲಿಂಗಾಯತ, ಒಕ್ಕಲಿಗ ನಾಯಕರನ್ನು ಯಡಿಯೂರಪ್ಪ ಮತ್ತು ವಿಜಯೇಂದ್ರ ವಿರುದ್ಧ ಆರೆಸ್ಸೆಸ್ ನಾಯಕರು ಬಳಸುತ್ತಾ ಬಂದಿದ್ದಾರೆ.

ಸಿ. ಟಿ. ರವಿ, ಅಶೋಕ್, ಶೆಟ್ಟರ್ ಸೇರಿದಂತೆ ಹಿರಿಯ ನಾಯಕರಿಗೆ ವಿಜಯೇಂದ್ರ ನಾಯಕತ್ವ ಅಪಥ್ಯವಾಗಿದೆಯಾದರೂ ಅದನ್ನು ಬಹಿರಂಗವಾಗಿ ಪ್ರಕಟಿಸಲು ಸಾಧ್ಯವಾಗದೆ ಈಗಾಗಲೇ ಮುನ್ನೆಲೆಯಲ್ಲಿರುವ ಭಿನ್ನಮತೀಯರನ್ನು ಒಳಗೊಳಗೆ ಬೆಂಬಲಿಸುತ್ತಾ ಬರುತ್ತಿದ್ದಾರೆ.

**ವಿಜಯೇಂದ್ರ ಅವರನ್ನು ಬದಲಾಯಿಸುವ ಒಲವು ವರಿಷ್ಠರಿಗೆ ಇದೆಯಾದರೂ, ರಾಜ್ಯ ಬಿಜೆಪಿಯೊಳಗೆ ಅದು ಉಂಟು ಮಾಡಬಹುದಾದ ಅನಾಹುತಗಳಿಗೆ ಹೆದರಿ ಅವರು ಮೌನವಾಗಿದ್ದಾರೆ. ವಿಜಯೇಂದ್ರ ಅವರಿಗೆ ಜಾತಿ ಬಲ, ಹಣ ಬಲ ಎರಡೂ ಇದೆ. ಎಲ್ಲಾಕ್ಕಿಂತ ಮುಖ್ಯವಾಗಿ ಯಡಿಯೂರಪ್ಪ ಅವರ ಆಶೀರ್ವಾದ ಅವರಿಗಿದೆ. ಆದರೆ ಬಿಜೆಪಿಯೊಳಗಿರುವ ಹಿರಿಯರಿಗೆ ಹೋಲಿಸಿದರೆ ರಾಜಕೀಯ ಅನುಭವ ತೀರಾ ಕಡಿಮೆ. ವಿಜಯೇಂದ್ರ ಅವರ ಸೂಚನೆಗಳನ್ನು ಆದೇಶಗಳನ್ನು ಪಾಲಿಸಲು ಬಿಜೆಪಿಯ ಬಹುತೇಕ ಹಿರಿಯರು ಮಾನಸಿಕವಾಗಿ ಸಿದ್ಧರಿಲ್ಲ. ಆದುದರಿಂದಲೇ ಪಕ್ಷ ಸಂಘಟನೆಯ ಕುರಿತಂತೆ ವಿಜಯೇಂದ್ರ ಸಲಹೆ ಸೂಚನೆಗಳನ್ನು ನೀಡುವುದನ್ನು ಇತ್ತೀಚೆಗೆ ಸಂಪೂರ್ಣ ಕೈ ಬಿಟ್ಟಿದ್ದಾರೆ.**

ಇವೆಲ್ಲವೂ ಯಡಿಯೂರಪ್ಪ ಮತ್ತು ಅವರ ಪುತ್ರ ವಿಜಯೇಂದ್ರ ಅವರಿಗೆ ತಿಳಿಯದ ವಿಷಯವೇನೂ ಅಲ್ಲ. ಲಿಂಗಾಯತ ಜಾತಿ ಬಲವನ್ನು ಮುಂದಿಟ್ಟುಕೊಂಡು ವಿಜಯೇಂದ್ರ ಅವರು ಎಲ್ಲ ಸಂಚುಗಳನ್ನು ವಿಫಲಗೊಳಿಸುತ್ತಾ ಬಂದಿದ್ದಾರೆ. ಯತ್ನಾಳ್ ಅವರಂತೂ ವಿಜಯೇಂದ್ರ ವಿರುದ್ಧ ಏಕವಚನದಲ್ಲಿ ಹೇಳಿಕೆಗಳನ್ನು ನೀಡುತ್ತಾ ಬಂದಿದ್ದಾರೆ. ಬಿಜೆಪಿಯೊಳಗಿರುವ ಹಿರಿಯರೇ ವಿಜಯೇಂದ್ರ ಅವರಿಗೆ ಅತಿ ದೊಡ್ಡ ತಲೆನೋವಾಗಿದ್ದಾರೆ. ಈ ಹಿರಿಯರನ್ನು ಕೈ ಬಿಟ್ಟು ಪಕ್ಷವನ್ನು ಮುಂದಕ್ಕೆ ಒಯ್ಯುವಂತೆಯೂ ಇಲ್ಲ. ಪರಿಣಾಮವಾಗಿ ಒಂದು ವಿರೋಧ ಪಕ್ಷವಾಗಿ ಬಿಜೆಪಿಯು ರಾಜ್ಯದಲ್ಲಿ ಸಂಪೂರ್ಣ ವಿಫಲವಾಗಿದೆ. ಇದರ ಲಾಭವನ್ನು ಸಿದ್ದರಾಮಯ್ಯ ನೇತೃತ್ವದ ಸರಕಾರ ತನ್ನದಾಗಿಸುತ್ತಾ ಬರುತ್ತಿದೆ. ಬಿಜೆಪಿಯ ಈ ಅಸಹಾಯಕ ಸ್ಥಿತಿಯ ಕಾರಣದಿಂದಲೇ ಕಾಂಗ್ರೆಸ್‌ನೊಳಗಿರುವ ಭಿನ್ನಮತ ರಾಜ್ಯದ ಜನತೆಗೆ ವಿಶೇಷವೆಂದು ಅನ್ನಿಸುತ್ತಿಲ್ಲ.

ಅದೆಷ್ಟೇ ಭಿನ್ನಮತವಿದ್ದರೂ ಕಾಂಗ್ರೆಸ್ ನಾಯಕರು ಮಾಧ್ಯಮಗಳಲ್ಲಿ ಬಹಿರಂಗ ಹೇಳಿಕೆಯನ್ನು ಈವರೆಗೆ ನೀಡಿಲ್ಲ. ಅಸಮಾಧಾನಗಳನ್ನು ವರಿಷ್ಠರ ಮುಂದೆ ತೋಡಿಕೊಂಡಿದ್ದಾರಾದರೂ ಡಿ. ಕೆ. ಶಿವಕುಮಾರ್ ಅವರು ಮಾಧ್ಯಮಗಳ ಮುಂದೆ ಸದಾ ಒಗ್ಗಟ್ಟಿನ ಮಾತುಗಳನ್ನು ಆಡುತ್ತಾ ಬಂದಿದ್ದಾರೆ. ಸದ್ಯ ಅಧಿಕಾರದಲ್ಲಿರುವುದು ಕಾಂಗ್ರೆಸ್. ಆದರೂ ಭೀಕರ ಕಚ್ಚಾಟ ನಡೆಯುತ್ತಿರುವುದು ಬಿಜೆಪಿಯೊಳಗೆ, ಕಾಂಗ್ರೆಸ್ ಅಧಿಕಾರಕ್ಕೆ ಬಂದ ದಿನದಿಂದಲೇ ಚಾಲ್ತಿಯಲ್ಲಿರುವ ಈ ಕಚ್ಚಾಟಕ್ಕೆ ಔಷಧಿ ಹುಡುಕುವಲ್ಲಿ ಬಿಜೆಪಿ ನಾಯಕರು ಸಂಪೂರ್ಣ ವಿಫಲರಾಗಿದ್ದಾರೆ.

ರಾಜ್ಯಾಧ್ಯಕ್ಷರ ವಿರುದ್ಧ ಯತ್ನಾಳ್ ಪದೇ ಪದೇ ಅವಾಚ್ಯ ಹೇಳಿಕೆಗಳನ್ನು ನೀಡುತ್ತಿರುವಾಗಲೂ ಬಿಜೆಪಿ ವರಿಷ್ಠರು ಮೌನ ಪಾಲಿಸಿದ್ದರು. ಇನ್ನು ಸಹಿಸಲಾಗುವುದಿಲ್ಲ ಎಂಬ ಎಚ್ಚರಿಕೆಯನ್ನು ಯಡಿಯೂರಪ್ಪ ಮತ್ತು ವಿಜಯೇಂದ್ರ ವರಿಷ್ಠರಿಗೆ ಪ್ರತಿಯಾಗಿ ರವಾನಿಸಿದಾಗ ಅನಿವಾರ್ಯವಾಗಿ ಯತ್ನಾಳ್ ಮತ್ತು ಅವರ ಸಂಗಡಿಗರ ವಿರುದ್ಧ ಶಿಸ್ತುಕ್ರಮ ತೆಗೆದುಕೊಂಡವರಂತೆ ನಟಿಸಿದ್ದಾರೆ. ಒಂದು ವೇಳೆ ಅಂದೇ ಕಠಿಣ ಕ್ರಮ ತೆಗೆದುಕೊಂಡಿದ್ದರೆ ಇಂದು ಮತ್ತೆ ಭಿನ್ನಮತೀಯರು ವಿಜಯೇಂದ್ರ ವಿರುದ್ಧ ದಿಲ್ಲಿಗೆ ದೂರು ಹಿಡಿದುಕೊಂಡು ಹೋಗುತ್ತಿರಲಿಲ್ಲ.



ಕಲಾ ಸಾಹಿತ್ಯ
ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ, ವಿಮರ್ಶಕರು



• ಉದಯವಾಹಿನಿ, ವಿಶೇಷ

# ಡಾ:ಬಾಬಾ ಸಾಹೇಬ್ ಅಂಬೇಡ್ಕರ್ ರವರ 69ನೇ ವರ್ಷದ ಪುಣ್ಯಸ್ಮರಣೆ

ಡಾ:ಬಿಆರ್ ಅಂಬೇಡ್ಕರ್ ರವರು 1891 ಏಪ್ರಿಲ್ 14 ರಂದು ಮಧ್ಯಪ್ರದೇಶದ ಮೋಹಿ ಎಂಬಲ್ಲಿ ಜನಿಸಿದರು. ತಂದೆ ರಾಮ್ಜೀ ಸತ್ಪಾಲ್ ತಾಯಿ ಭೀಮಾಬಾಯಿ.

ಅಂಬೇಡ್ಕರ್ ರವರು 06ನೇ ವಯಸ್ಸಿನಲ್ಲಿದ್ದಾಗ ಅವರ ತಾಯಿಯನ್ನು ಮತ್ತು 21ನೇ ವಯಸ್ಸಿನಲ್ಲಿ ತನ್ನ ತಂದೆಯನ್ನು ಕಳೆದುಕೊಂಡರು. ನಂತರ ತನ್ನ ತಂದೆಯ ತಂಗಿ ಸೋದರತ್ತೆಯಾದ ಮೀರಾಬಾಯಿರವರ ಆಶ್ರಯದಲ್ಲಿ ಬೆಳೆದರು. ಬಾಲ್ಯದಲ್ಲಿ ಸಂಸ್ಕಾರ, ಸದ್ಬುದ್ಧಿ, ಸನ್ಮಾರ್ಗ , ಶಿಸ್ತನ್ನು ಮೈಗೂಡಿಸಿಕೊಂಡು, ಅಸ್ಪೃಶ್ಯ ನೋವನ್ನು ಮರೆತು ತನ್ನ ಪ್ರತಿಭೆಯಿಂದ ಗುಣಮಟ್ಟದ ಶಿಕ್ಷಣವನ್ನು ಪಡೆದು,ಹೆಚ್ಚಿನ ವ್ಯಾಸಂಗವನ್ನು ವಿದೇಶದಲ್ಲಿ ಮುಂದುವರಿಸಲು ಕೆಲವು ಉದಾರದಾನಿಗಳು ನೆರವಾದರು. ಅವರ ಕಠಿಣ ಶ್ರಮಕ್ಕೆ ತಕ್ಕಂತೆ ಒಳ್ಳೆಯ ಸೌಕರ್ಯಗಳು ದೊರೆತು ಪ್ರತಿಭಾವಂತ ವಿದ್ಯಾರ್ಥಿಯಾಗಿ ಕಾನೂನು ಪದವೀಧರರಾಗಿ ಹಾಗೂ ಅನೇಕ ಡಾಕ್ಟರೇಟ್ ಪದವಿಗಳನ್ನು ಗಳಿಸಿರುವ ಪೈಕಿ ಒಬ್ಬರಾಗಿರುತ್ತಾರೆ. ಶತ-ಶತಮಾನಗಳಿಂದ ಸಾಮಾಜಿಕ ಅನ್ಯಾಯಗಳಿಂದ ನಲುಗಿ ಹೋಗಿದ್ದ ದಲಿತರನ್ನು ಜಾಗೃತಗೊಳಿಸಿ ಅವರಿಗೆ ನ್ಯಾಯವಾಗಿ ಲಭಿಸಬೇಕಾಗಿದ್ದ ನಾಗರೀಕ ಹಕ್ಕುಗಳು,ಸೌಲಭ್ಯಗಳು, ಮತ್ತು ರಾಜಕೀಯ ಪ್ರಾತಿನಿಧ್ಯಗಳನ್ನು ದೊರಕಿಸಿಕೊಳ್ಳಲು ಅವರನ್ನು ಹೋರಾಟಕ್ಕೆ ಸಜ್ಜುಗೊಳಿಸಿದರು. ಭಾರತೀಯ ಸಮಾಜದಿಂದ ಅಸ್ಪೃಶ್ಯ ಎಂಬ ಕಳಂಕವನ್ನು ತೊಡೆದುಹಾಕುವುದು ಅವರ ಬಾಳಿನ ಮುಖ್ಯ ಗುರಿ ಮತ್ತು ಉದ್ದೇಶವಾಗಿತ್ತು. ದಲಿತರನ್ನು ಸೈನ್ಯಕ್ಕೆ ಸೇರಿಸಿಕೊಳ್ಳದಿರುವುದರ ಬಗ್ಗೆ ಬ್ರಿಟೀಷ್ ಸರ್ಕಾರವನ್ನು ಹಾಗೂ ಮೇಲ್ಜಾತಿಯವರಿಂದ ಆಗುವ ಶೋಷಣೆಗೂ ಕೂಡ ಬಹಳವಾಗಿ ಖಂಡಿಸಿದರು.

1935 ರಲ್ಲಿ ಅಂಬೇಡ್ಕರ್ ರವರಿಗೆ 44 ವರ್ಷ ವಯಸ್ಸಿದ್ದಾಗ ಅವರ ಪ್ರೀತಿಯ ಧರ್ಮಪತ್ನಿ ರಮಾಬಾಯಿರವರು ತೀರಿಕೊಂಡರು.

ತಮ್ಮ ಜನಾಂಗ ವಿದ್ಯಾವಂತರಾಗಬೇಕು ಎಂದು ತಿಳಿಸಿ,ಆ ಮೂಲಕ ಉನ್ನತವರ್ಗದವರ ಆಶ್ರಯಕ್ಕೆ ಕೈಚಾಚದೇ ಸ್ವಾಭಿಮಾನದಿಂದ ಬಾಳುವುದನ್ನು ಕಲಿಯಬೇಕೆಂದು ತಿಳಿಸಿದರು. ಅಷ್ಟೇ ಅಲ್ಲದೇ ಯಾವ ಧರ್ಮದಲ್ಲಿ ನಮಗೆ ಪ್ರೀತಿ ಆದರ ಸಮಾನತೆಗಳು ದೊರೆಯಲಿಲ್ಲವೋ ಅಂತಹ ಧರ್ಮವನ್ನು ಬಿಟ್ಟು ಸಮತಾ ಭಾವನೆಯಿಂದ ಕಾಣುವ ಧರ್ಮವನ್ನು ಸೇರಬೇಕೆಂದು ಸಲಹೆ ಮಾಡಿದರು. ಅಂಬೇಡ್ಕರ್ ಅವರ ಈ ಸಲಹೆ ಇಡೀ ರಾಷ್ಟ್ರವನ್ನು ದಿಗ್ಭ್ರಮೆಗೊಳಿಸಿತು. ಸ್ವತಂತ್ರ ಭಾರತದ ಪ್ರಧಾನಿ ನೆಹರುರವರ ಮಂತ್ರಿಮಂಡಲದಲ್ಲಿ ಕಾನೂನು ಸಚಿವರಾದರು.ಅಂಬೇಡ್ಕರ್ ಅವರ ಪಾಲಿಗೆ ಮತ್ತೊಂದು ಗುರುತರವಾದ ಹೊಣೆಗಾರಿಕೆ ಬಂದಿತ್ತು. ಸ್ವತಂತ್ರ ಭಾರತದ ಸಂವಿಧಾನ ರಚಿಸಲು ಕರಡು ಸಮಿತಿ ಅಧ್ಯಕ್ಷರಾಗಿ ಅಂಬೇಡ್ಕರ್ ರವರು ಆಯ್ಕೆಗೊಂಡರು. ಅಂಬೇಡ್ಕರ್ ಅವರು ಹಲವಾರು ದೇಶಗಳ ಸಂವಿಧಾನವನ್ನು ಅಧ್ಯಯನ ಮಾಡಿ ವೈವಿಧ್ಯಮಯವಾದ ಭಾರತಕ್ಕೆ ಹೊಂದುವಂತಹ ರಾಜಕೀಯ, ಹಾಗೂ ಸಾಮಾಜಿಕ-ಆರ್ಥಿಕ ಅಸಮಾನತೆಗಳನ್ನು ಹೋಗಲಾಡಿಸುವಂತ ಶಾಸನಗಳನ್ನು ಜಾರಿಗೊಳಿಸಿ,ಸರ್ವ ಸಮಾನತೆಯ ಸಮಾಜವನ್ನು ರಚಿಸಲು ಸಾಧ್ಯವಾಗುವಂಥ ಭಾರತ ಸಂವಿಧಾನವನ್ನು ರೂಪಿಸಿ ಕೊಟ್ಟು ಸಂವಿಧಾನ ಶಿಲ್ಪಿ ಎಂಬ ಬಿರುದಿಗೆ ಪಾತ್ರರಾದರು.

**ಅಷ್ಟೇ ಅಲ್ಲದೇ ಯಾವ ಧರ್ಮದಲ್ಲಿ ನಮಗೆ ಪ್ರೀತಿ ಆದರ ಸಮಾನತೆ**

ಸ್ವಾತಂತ್ರ್ಯ ಹೋರಾಟದ ಚಳುವಳಿಯಲ್ಲಿ ಭಾಗವಹಿಸಿದ್ದರೂ ಸಹ ಇವರಿಗೆ ಸೆರೆಮನೆ ವಾಸಕ್ಕೆ ಕಳುಹಿಸಲು ಬ್ರಿಟಿಷ್ ಸರ್ಕಾರಕ್ಕೆ ಅರ್ಹತೆ ಇರಲಿಲ್ಲ. ಕಾರಣ ಜಗತ್ತಿನ ಎಲ್ಲಾ ದೇಶಗಳ ಸಂವಿಧಾನದ ಬಗ್ಗೆ ಸಂಪೂರ್ಣವಾಗಿ ಅಧ್ಯಯನ ಮಾಡಿರುವವರು ಹಾಗೂ ಇಂಗ್ಲೆಂಡಿನಲ್ಲಿ ಕಾನೂನು ಶಿಕ್ಷಣದಲ್ಲಿ ಡಾಕ್ಟರೇಟ್ ಪಡೆದವರು ಮಾತ್ರ ಬ್ರಿಟಿಷ್ ಆಫೀಸರ್ಸ್ ಕ್ಲಬ್‌ನಲ್ಲಿ ಸಜೀವ ಸದಸ್ಯರಾಗಿ ಆಯ್ಕೆಯಾಗಿದ್ದರು. ಆದ್ದರಿಂದ ಅಲ್ಲಿಂದ ಅನುಮತಿ ಇಲ್ಲದೇ ಅವರಿಗೆ ಮುಟ್ಟುವ ಅಧಿಕಾರ ಬ್ರಿಟಿಷ್ ಸರ್ಕಾರಕ್ಕೆ ಇರಲಿಲ್ಲ. ಇವರು ಒಬ್ಬ ಏಕೈಕ ಭಾರತೀಯ ಸದಸ್ಯರು ಹೌದು.

1956 ಮೇ 27 ರಂದು ಬುದ್ಧ ಜಯಂತಿಯಂದು ಡಾ:ಅಂಬೇಡ್ಕರ್ ಅವರು ಬೌದ್ಧಧರ್ಮಕ್ಕೆ ಸೇರಿಕೊಳ್ಳುವ ಮೂಲಕ ಅವರೊಡನೆ ಸುಮಾರು 03 ಲಕ್ಷ ಅನುಯಾಯಿಗಳು ಸ್ವಇಚ್ಛೆಯಿಂದ ಬೌದ್ಧಧರ್ಮಕ್ಕೆ ಸೇರಿಕೊಂಡರು. 1956 ಡಿಸೆಂಬರ್ 06 ರಂದು ಡಾ:ಬಿಆರ್ ಅಂಬೇಡ್ಕರ್ ಅವರು ತನ್ನ 65 ನೇ ವಯಸ್ಸಿನಲ್ಲಿ ರಾತ್ರಿ ನಿದ್ರಾವಸ್ಥೆಯಲ್ಲಿದ್ದಾಗ ಹಾಗೆಯೇ ಇಹ ಲೋಕವನ್ನು ತ್ಯಜಿಸಿದರು. ಭಾರತದ ಸಂವಿಧಾನ ಶಿಲ್ಪಿ, ಸಮಾಜ ಸುಧಾರಕ, ಅಸ್ಪೃಶ್ಯ ಜನಾಂಗದ ನಾಯಕ,ಮಾನವ ಹಕ್ಕುಗಳನ್ನು ಕಾಪಾಡಲು ಶ್ರಮಿಸಿದ ಅಪ್ರತಿಮ ಹೋರಾಟಗಾರ ಬಾಬಾ ಸಾಹೇಬ್ ಅಂಬೇಡ್ಕರ್ ರವರ ಸಾವಿಗಾಗಿ ಇಡೀ ದೇಶ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಿತು. 1990 ರಲ್ಲಿ ಡಾ:ಬಿಆರ್ ಅಂಬೇಡ್ಕರ್ ರವರ ಮರಣೋತ್ತರವಾಗಿ ಭಾರತ ಸರ್ಕಾರ ಈ ಮಹಾನ್ ನಾಯಕರಿಗೆ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಿತು. ಇಂತಹ ಮಹಾನ್ ಮಾನವತಾವಾದಿ ಎಲ್ಲಾ ಧರ್ಮವೂ ಒಂದೇ ಎಂಬ ಘೋಷ ವಾಕ್ಯದಲ್ಲಿ ತಿಳಿಸಿರುವ,ಕಾಲ ದೇಶ, ಜಾತಿ, ಧರ್ಮ, ಪಕ್ಷ ಮೀರಿ ಬಾಳಿ ಬದುಕಿ ಮನುಕುಲಕ್ಕೆ ಮಿಗಿಲಾಗಿ ದೀನದಲಿತರ ಬಾಳಿಗೆ ಆಶಾಕಿರಣ ಹಿರಿಯ ಚೇತನ ಅವರೇ ಜ್ಞಾನ ಸಂದೇಶ ಅಜರಾಮರ ಹಾಗೂ ಸತ್ಯ ಸಂದೇಶ ಸಂಜೀವಿನಿ. ಭಾರತೀಯರಾದ ನಮ್ಮೆಲ್ಲರ ಜವಾಬ್ದಾರಿ, ಹೊಣೆಗಾರಿಕೆ ಮತ್ತು ಕರ್ತವ್ಯ ಎಂದು ತಿಳಿದು ಡಾ:ಬಿಆರ್ ಅಂಬೇಡ್ಕರ್ ಅವರ 69 ನೇ ವರ್ಷದ ಪುಣ್ಯಸ್ಮರಣೆ ದಿನವಾದ ಇಂದು ಅವರನ್ನು ಸ್ಮರಿಸಿ ನೆನೆಯುತ್ತಾ ಅವರ ಆದರ್ಶಗಳನ್ನ ಹಾಗೂ ಅವರ ದೂರದೃಷ್ಟಿ ಭವಿಷ್ಯದ ಚಿಂತನೆಗಳನ್ನು ಸಾರ್ವಜನಿಕ ಆಡಳಿತದಲ್ಲಿ, ಪ್ರತಿಯೊಬ್ಬರ ಜೀವನದ ಬದುಕಿನಲ್ಲಿ ಅಳವಡಿಸಿಕೊಂಡರೆ ಅದುವೇ ಅವರಿಗೆ ಕೊಡಬೇಕಾದ ಗೌರವ.

# ಡ್ರೈ ಸ್ಕಿನ್ ಸಮಸ್ಯೆಗೆ ಈ ಎಣ್ಣೆ ಹಚ್ಚಿ

ಸಾಸಿವೆ ಎಣ್ಣೆ ಚರ್ಮಕ್ಕೆ ಪ್ರಯೋಜನಕಾರಿ. ಇದು ಪ್ರಬಲವಾದ ನೈಸರ್ಗಿಕ ಘಟಕಾಂಶವಾಗಿದ್ದು ಅದು ಸುಕ್ಕುಗಳನ್ನು ತಡೆಯಲು ಸಹಾಯ ಮಾಡುತ್ತದೆ, ಮೊಡವೆ ಮತ್ತು ಕಪ್ಪು ಕಲೆಗಳನ್ನು ಕಡಿಮೆ ಮಾಡುತ್ತದೆ ಮತ್ತು ಶುದ್ಧೀಕರಣ ಮತ್ತು ಆರ್ದ್ರಕ ಗುಣಗಳನ್ನು ಹೊಂದಿದೆ. ಚಳಿಗಾಲದಲ್ಲಿ ನಿಮ್ಮ ಚರ್ಮ ಒಣಗುತ್ತದೆಯೇ ಸ್ನಾನದ ನಂತರ, ನಿಮ್ಮ ಪಾದಗಳಲ್ಲಿ ಬಿಳಿ, ಪುಡಿಯಂತಹ ಶುಷ್ಕತೆ, ನಿಮ್ಮ ಕೈಗಳಲ್ಲಿ ಒರಟುತನ ಮತ್ತು ನಿಮ್ಮ ದೇಹದಾದ್ಯಂತ ಬಿಗಿಯಾದ ಭಾವನೆಯನ್ನು ನೀವು ಗಮನಿಸಬಹುದು. ಇವೆಲ್ಲವೂ ಶೀತ ಗಾಳಿಯಿಂದ ಉಂಟಾಗುವ ಸಾಮಾನ್ಯ ಆದರೆ ನಿರಾಶಾದಾಯಕ ಸಮಸ್ಯೆಗಳಾಗಿವೆ. ದುಬಾರಿ ಲೋಷನ್‌ಗಳು ಮತ್ತು ಕ್ರೀಮ್‌ಗಳನ್ನು ಹಚ್ಚಿದ ನಂತರವೂ, ಕೆಲವೇ ಗಂಟೆಗಳಲ್ಲಿ ನಿಮ್ಮ ಚರ್ಮವು ಮತ್ತೆ ಬಿಗಿಯಾಗಲು ಪ್ರಾರಂಭಿಸುತ್ತದೆ. ಈ ಸಮಸ್ಯೆಗೆ ಅದ್ಭುತವಾದ ಮನೆಮದ್ದು ನಮ್ಮ ಮನೆಗಳಲ್ಲಿಯೇ ಇದೆ.

**ಸಾಸಿವೆ ಎಣ್ಣೆ** ಹೌದು, ನಾವು ಶುದ್ಧ ಸಾಸಿವೆ ಎಣ್ಣೆಯ ಬಗ್ಗೆ ಮಾತನಾಡುತ್ತಿದ್ದೇವೆ. ಶತಮಾನಗಳಿಂದ ಬಳಸಲಾಗುವ ಈ ಎಣ್ಣೆ ನೈಸರ್ಗಿಕ ಮಾಯಿಶ್ಚರೈಸರ್, ಚರ್ಮದ ರಕ್ಷಕವಾಗಿದೆ. ಸ್ನಾನ ಮಾಡುವ ಸ್ವಲ್ಪ ಮೊದಲು ಇದನ್ನು ಹಚ್ಚುವುದು ತುಂಬಾ ಪ್ರಯೋಜನಕಾರಿಯಾಗಿದೆ. ಇದರಲ್ಲಿ ಕಂಡುಬರುವ ವಿಟಮಿನ್ ಇ, ಒಮೆಗಾ ಕೊಬ್ಬಿನಾಮ್ಲಗಳು ಮತ್ತು ಉತ್ಕರ್ಷಣ ನಿರೋಧಕಗಳು ತೇವಾಂಶವನ್ನು ಲಾಕ್ ಮಾಡುತ್ತದೆ, ನಿಮ್ಮ ಚರ್ಮವನ್ನು ದೃಢವಾಗಿ, ಸ್ಥಿತಿಸ್ಥಾಪಕ ಮತ್ತು ಒಳಗಿನಿಂದ ಪೂರಕವಾಗಿಸುತ್ತದೆ. ಇದು ಚರ್ಮದ ಹೊಳಪನ್ನು ಹೆಚ್ಚಿಸುತ್ತದೆ ಮತ್ತು ಅಕಾಲಿಕ ಸುಕ್ಕುಗಳು ಮತ್ತು ಸೂಕ್ಷ್ಮ ರೇಖೆಗಳನ್ನು ಕಡಿಮೆ ಮಾಡುತ್ತದೆ. ಇದು ಚರ್ಮದ ಮೇಲ್ಮೈಯಲ್ಲಿ ರಕ್ಷಣಾತ್ಮಕ ಪದರವನ್ನು ರೂಪಿಸುತ್ತದೆ, ಶೀತ ಗಾಳಿ, ಶುಷ್ಕ ಹವಾಮಾನ ಮತ್ತು ತೇವಾಂಶದ ಕೊರತೆಯಿಂದ ಉಂಟಾಗುವ ಹಾನಿಯಿಂದ ರಕ್ಷಿಸುತ್ತದೆ.



# ಮೊಳಕೆಯೊಡೆದ ಹೆಸರು ಕಾಳು ಲಾಭಗಳು ಅಷ್ಟಿಷ್ಟಲ್ಲ




ಹೆಸರು ಕಾಳು ಅತ್ಯಂತ ಪೋಷಕಾಂಶಗಳನ್ನು ಹೊಂದಿರುವ ಧಾನ್ಯವಾಗಿದೆ. ಇದನ್ನು ಮೊಳಕೆಯೊಡೆಸಿ ತಿನ್ನೋದ್ರಿಂದ ಆರೋಗ್ಯಕ್ಕೆ ಇನ್ನಷ್ಟು ಪ್ರಯೋಜನಗಳನ್ನು ನೀಡಲಿದೆ. ಮೊಳಕೆಯೊಡೆದ ಹೆಸರುಕಾಳು ತಿನ್ನುವುದು ಆರೋಗ್ಯಕ್ಕೆ ಅತ್ಯಂತ ಪ್ರಯೋಜನಕಾರಿ ಎಂದು ಪರಿಗಣಿಸಲಾಗುತ್ತದೆ. ಆದರೆ ನಾವು ಅವುಗಳನ್ನು ಮೊಳಕೆಯೊಡೆಸಿ ಅಥವಾ ನೆನೆಸಿ ಸೇವಿಸಿದಾಗ ಅವುಗಳ ಆರೋಗ್ಯ ಪ್ರಯೋಜನಗಳು ದುಪ್ಪಟ್ಟಾಗುತ್ತದೆ ಎನ್ನಲಾಗುತ್ತದೆ. ಪೋಷಕಾಂಶಗಳಿಂದ ಸಮೃದ್ಧವಾಗಿರುವ ಹೆಸರುಕಾಳು ಅನೇಕ ಅತ್ಯುತ್ತಮ ಆರೋಗ್ಯ ಪ್ರಯೋಜನಗಳನ್ನು ನೀಡುತ್ತದೆ. ನಿಮ್ಮ ಆಹಾರದಲ್ಲಿ ಮೊಳಕೆಯೊಡೆದ ಹೆಸರುಕಾಳನ್ನು ಸೇರಿಸುವುದರ ಪ್ರಯೋಜನಗಳ ಬಗ್ಗೆ ನಾವಿಲ್ಲಿ ತಿಳಿಯೋಣ.

**ಜೀರ್ಣಕ್ರಿಯೆಗೆ ಸಹಾಯ ಮಾಡುತ್ತದೆ:** ಮೊಳಕೆಯೊಡೆದ ಹೆಸರುಕಾಳು ಸೇವಿಸುವುದು ಜೀರ್ಣಕ್ರಿಯೆಗೆ ಸಹಾಯ ಮಾಡುತ್ತದೆ. ಮೊಳಕೆಯೊಡೆಯುವ ಪ್ರಕ್ರಿಯೆಯು ಸಂಕೀರ್ಣ ಕಾರ್ಬೋಹೈಡ್ರೇಟ್‌ಗಳು ಮತ್ತು ಪ್ರೋಟೀನ್‌ಗಳನ್ನು ಒಡೆಯುತ್ತದೆ, ಇದು ದೇಹವು ಜೀರ್ಣಿಸಿಕೊಳ್ಳಲು ಸುಲಭಗೊಳಿಸುತ್ತದೆ. ಹೊಟ್ಟೆ ಉಬ್ಬುವುದು ಮತ್ತು ಅನಿಲವನ್ನು ಕಡಿಮೆ ಮಾಡುವುದಲ್ಲದೆ ಉತ್ತಮ ಪೋಷಕಾಂಶ ಹೀರಿಕೊಳ್ಳುವಿಕೆಯನ್ನು ಉತ್ತೇಜಿಸುತ್ತದೆ.

**ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ:** ಮೊಳಕೆಯೊಡೆದ ಹೆಸರುಕಾಳುಗಳನ್ನು ಪ್ರತಿದಿನ ತಿನ್ನುವುದರಿಂದ ರೋಗನಿರೋಧಕ ಶಕ್ತಿ ಹೆಚ್ಚಾಗುತ್ತದೆ. ಅವು ಜೀವಸತ್ವಗಳು, ಖನಿಜಗಳು ಮತ್ತು ಉತ್ಕರ್ಷಣ ನಿರೋಧಕಗಳಲ್ಲಿ ಸಮೃದ್ಧವಾಗಿವೆ. ಅವು ವಿಶೇಷವಾಗಿ ವಿಟಮಿನ್ ಸಿ ಮತ್ತು ವಿಟಮಿನ್ ಎ ಯಲ್ಲಿ ಸಮೃದ್ಧವಾಗಿವೆ. ಇವೆರಡೂ ರೋಗನಿರೋಧಕ ಪ್ರತಿಕ್ರಿಯೆಯನ್ನು ಬಲಪಡಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

**ಚರ್ಮದ ಆರೋಗ್ಯವನ್ನು ಸುಧಾರಿಸುತ್ತದೆ:** ಆರೋಗ್ಯಕರ ಚರ್ಮವನ್ನು ಕಾಪಾಡಿಕೊಳ್ಳಲು ಉತ್ಕರ್ಷಣ ನಿರೋಧಕಗಳು ಮತ್ತು ವಿಟಮಿನ್‌ಗಳಲ್ಲಿ ಸಮೃದ್ಧವಾಗಿರುವ ಆಹಾರವು ಅತ್ಯಗತ್ಯ. ಮೊಳಕೆಯೊಡೆದ ಹೆಸರುಕಾಳುಗಳು ಫ್ಲೇವನಾಯ್ಡ್‌ಗಳು ಮತ್ತು ಪಾಲಿಫಿನಾಲ್‌ಗಳನ್ನು ಒಳಗೊಂಡಂತೆ ಉತ್ಕರ್ಷಣ ನಿರೋಧಕಗಳ ಸಮೃದ್ಧ ಮೂಲವಾಗಿದೆ, ಇದು ಚರ್ಮವನ್ನು ಫ್ರೀ ರಾಡಿಕಲ್ ಹಾನಿಯಿಂದ ರಕ್ಷಿಸುತ್ತದೆ. ಮೊಳಕೆಯೊಡೆದ ಹೆಸರುಕಾಳುಗಳಲ್ಲಿ ಕಂಡುಬರುವ ವಿಟಮಿನ್ ಇ ಚರ್ಮವನ್ನು ಪೋಷಿಸಲು ಸಹಾಯ ಮಾಡುತ್ತದೆ.

**ತೂಕ ನಷ್ಟಕ್ಕೆ ಸಹಾಯ ಮಾಡುತ್ತದೆ:** ಮೊಳಕೆಯೊಡೆದ ಮುಂಗ್ ಬೀನ್ಸ್ ತೂಕ ಇಳಿಸಿಕೊಳ್ಳಲು ಪ್ರಯತ್ನಿಸುತ್ತಿರುವವರಿಗೆ ಅತ್ಯುತ್ತಮವಾಗಿದೆ. ಮುಂಗ್ ಬೀನ್ಸ್‌ನಲ್ಲಿರುವ ಫೈಬರ್ ಜೀರ್ಣಕ್ರಿಯೆಗೆ ಸಹಾಯ ಮಾಡುವುದಲ್ಲದೆ ಪೂರ್ಣತೆಯ ಭಾವನೆಗೆ ಕೊಡುಗೆ ನೀಡುತ್ತದೆ. ಇದು ಒಟ್ಟಾರೆ ಕ್ಯಾಲೋರಿ ಸೇವನೆಯನ್ನು ಕಡಿಮೆ ಮಾಡುತ್ತದೆ. ಹೆಚ್ಚಿನ ಫೈಬರ್ ಆಹಾರವು ಅತ್ಯಾಧಿಕತೆಯನ್ನು ಹೆಚ್ಚಿಸುವ ಮತ್ತು ಹಸಿವನ್ನು ಕಡಿಮೆ ಮಾಡುವ ಮೂಲಕ ತೂಕ ನಷ್ಟ ಮತ್ತು ನಿರ್ವಹಣೆಗೆ ಗಮನಾರ್ಹವಾಗಿ ಸಹಾಯ ಮಾಡುತ್ತದೆ.



**ಹೃದಯದ ಆರೋಗ್ಯವನ್ನು ಸುಧಾರಿಸುತ್ತದೆ:** ಮೊಳಕೆಯೊಡೆದ ಹೆಸರುಕಾಳು ಉತ್ಕರ್ಷಣ ನಿರೋಧಕಗಳು, ಪೊಟ್ಯಾಸಿಯಮ್ ಮತ್ತು ಮೆಗ್ನೀಸಿಯಮ್‌ನಂತಹ ಪೋಷಕಾಂಶಗಳನ್ನು ಹೊಂದಿರುತ್ತದೆ. ಈ ಪೋಷಕಾಂಶಗಳು ರಕ್ತದೊತ್ತಡವನ್ನು ನಿಯಂತ್ರಿಸಲು, ಕೊಲೆಸ್ಟ್ರಾಲ್ ಮಟ್ಟವನ್ನು ಕಡಿಮೆ ಮಾಡಲು ಮತ್ತು ಹೃದಯ ಕಾಯಿಲೆಯ ಅಪಾಯವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಹೆಸರು ಕಾಳುಗಳು ಹೆಚ್ಚಿನ ಉತ್ಕರ್ಷಣ ನಿರೋಧಕ ಚಟುವಟಿಕೆಯನ್ನು ಹೊಂದಿದ್ದು, ಫ್ರೀ ರಾಡಿಕಲ್‌ಗಳನ್ನು ತಟಸ್ಥಗೊಳಿಸಲು ಸಹಾಯ ಮಾಡುತ್ತದೆ.



# ರಾಮಾಯಣ

ಶ್ರೀ ರಾಮನು ಜಟಾಯುವಿಗೆ ಅಗ್ನಿ ಸಂಸ್ಕಾರಾದಿಗಳನ್ನು ಮಾಡಿದ್ದು

• ಹಿಂದಿನ ಸಂಚಿಕೆಯಿಂದ 120 ನೆಯ ಅಧ್ಯಾಯ

ಈ ಪ್ರಕಾರದಲ್ಲಿ ಮೊದಲೇ ರಾವಣನ ಆಯುಧದಿಂದ ಗಾಯಪಡೆದು ಬಿದ್ದಿರುವ ನನ್ನನ್ನು ನೀನೂ ಹೊಡೆಯಬೇಡ ಎಂದು ನುಡಿದನು. ಶ್ರೀರಾಮನು ಸೀತಾದೇವಿಯ ವೃತ್ತಾಂತವನ್ನು ಕೇಳಿ ಬಿಲ್ಲನ್ನು ಕೆಳಗೆ ಬಿಟ್ಟು ಜಟಾಯುವನ್ನು ತಬ್ಬಿಕೊಂಡು ಲಕ್ಷ್ಮಣಸಮೇತನಾಗಿ ರೋದಿಸಿದನು. ಅನಂತರ ಒಂಟಿಯಾಗಿ ರಾವಣನೊಡನೆ ಯುದ್ಧ ಮಾಡಿ ಗಾಯಪಡೆದು ನಿಟ್ಟುಸಿರುಬಿಡುತ್ತಿದ್ದ ಜಟಾಯುವನ್ನು ಕಂಡು ಅತ್ಯಂತ ದುಃಖಾಕ್ರಾಂತನಾಗಿ ಲಕ್ಷ್ಮಣನನ್ನು ಕುರಿತು ಲಕ್ಷ್ಮಣ. ಇದುವರೆಗೂ ರಾಜ್ಯಭ್ರಷ್ಟನಾಗಿ ಬಂದ ದುಃಖವೂ ಸೀತಾದೇವಿಯ ವಿಯೋಗ ದುಃಖವೂ ಇದ್ದವು. ಈಗ ಅವುಗಳ ಜೊತೆಯಲ್ಲಿ ನಮ್ಮ ಪಿತೃಸಖನಾದ ಜಟಾಯುವಿನ ಮರಣಾವಸ್ಥೆಯೆಂಬ ದುಃಖವೊಂದುಂಟಾಗಿ ಭಾಗ್ಯಹೀನನಾದ ನನ್ನ ದೇಹವನ್ನು ಸುಡುತ್ತಿದೆ. ನನ್ನ ದುರ್ಭಾಗ್ಯವೆಷ್ಟೆಂದರೆ, ನಾನು ಮುಟ್ಟಿದರೆ ಸಮುದ್ರವೂ ಒಣಗಿ ಹೋಗುವುದು. ಲೋಕದಲ್ಲಿ ನನ್ನಂಥ ಭಾಗ್ಯಹೀನರಿಲ್ಲ. ನಮ್ಮ ಪಿತೃಸಖನಾಗಿ ವೃದ್ಧನಾದ ಜಟಾಯುವು ನನ್ನ ಭಾಗ್ಯಹೀನತೆಯಿಂದ ಗಾಯಪಡೆದು ಬಿದ್ದಿದ್ದಾನೆ ಎಂದು ನುಡಿದು ತನ್ನ ತಂದೆಯಾದ ದಶರಥರಾಯನನ್ನು ಕಂಡಂತೆ ಭಾವಿಸಿ ವೇದನೆಯಿಂದ ನಿಟ್ಟುಸಿರುಬಿಡುತ್ತಿದ್ದ ಜಟಾಯುವನ್ನು ಅಪ್ಪಿಕೊಂಡನು. ಆಮೇಲೆ ಎಲೈ ಜಟಾಯು, ನನ್ನ ಪ್ರಾಣಕಾಂತೆಯಾದ ಸೀತಾದೇವಿಯ ವೃತ್ತಾಂತವನ್ನು ವಿಸ್ತಾರವಾಗಿ ಹೇಳು ಎಂದು ನುಡಿಯುತ್ತ ಮೂರ್ಛಿತ ನಾಗಿ ಬಿದ್ದನು.

**ಶ್ರೀ ರಾಮನು ಜಟಾಯುವಿಗೆ ಅಗ್ನಿ ಸಂಸ್ಕಾರಾದಿಗಳನ್ನು ಮಾಡಿದ್ದು**

ಆಮೇಲೆ ಶ್ರೀರಾಮನು ಘೋರಸ್ವರೂಪನಾದ ರಾವಣನಿಂದ ಗಾಯಪಡೆದು ಬಿದ್ದ ಜಟಾಯುವನ್ನು ನೋಡಿ ಮಂತ್ರಾಲೋಚನೆಯಲ್ಲಿ ಚತುರನಾದ ಲಕ್ಷ್ಮಣನನ್ನು ಕುರಿತು ಎಲೈ ಲಕ್ಷ್ಮಣ, ಜಟಾಯುವು ನಮ್ಮ ಕಾರ್ಯನಿಮಿತ್ತವಾಗಿ ರಾವಣನೊಡನೆ ಯುದ್ಧವನ್ನು ಮಾಡಿ ಆತನ ಅಸ್ತ್ರದಿಂದ ಗಾಯಪಟ್ಟು ಪ್ರಾಣಗಳನ್ನು ಬಿಡುತ್ತಿದ್ದಾನೆ. ಕಂಗೆಟ್ಟು ಸ್ವರಹೀನನಾಗಿ ನನ್ನನ್ನು ನೋಡುತ್ತಿದ್ದಾನೆ ಎಂದನು. ಅನಂತರ ಜಟಾಯು ನಿನಗೆ ಮಾತನಾಡುವುದಕ್ಕೆ ಶಕ್ತಿಯಿದ್ದ ಪಕ್ಷದಲ್ಲಿ ಸೀತಾದೇವಿಯ ವೃತ್ತಾಂತವನ್ನು ವಿಸ್ತಾರವಾಗಿ ಹೇಳು.

ರಾವಣನು ಸೀತಾದೇವಿಯನ್ನು ಯಾವಕಾರಣ ಅಪಹರಿಸಿಕೊಂಡು ಹೋದನು ಆತನಿಗೆ ನಾನು ಮಾಡಿದ ಅಪರಾಧವೇನು ಆತನು ಸೀತಾದೇವಿಯನ್ನು ಒಯ್ಯುವಾಗ ಕಳಂಕವಿಲ್ಲದ ಚಂದ್ರಮಂಡಲವಂತೆ ಒಪ್ಪುತ್ತಿರುವ ಜಾನಕಿಯ ಮುಖವು ಹೇಗಿತ್ತು ಆ ದೇವಿಯು ಏನು ಹೇಳಿದಳು ರಾವಣನ ಪರಾಕ್ರಮವೆಂಥದು ಅವನ ಸ್ವರೂಪವೇನು ಅವನಿರುವ ಸ್ಥಳವಾವುದು ಎಂದು ಕೇಳಿದನು. ಧರ್ಮಾತ್ಮನಾದ ಜಟಾಯುವು ಮೆಲ್ಲಗೆ ಮಾತಾಡುತ್ತ ಆತನನ್ನು ಕುರಿತು ಶ್ರೀರಾಮ ರಾವಣನು ನನ್ನ ಗರಿಗಳನ್ನು ಕತ್ತರಿಸಿ ಗಾಯಮಾಡಿ ಸೀತಾದೇವಿಯನ್ನೆತ್ತಿಕೊಂಡು ತೆಂಕಣದಿಕ್ಕಿಗೆ ಹೋದನು.

**ಮುಂದುವರಿಯುವುದು...**

# ಶಿವಾಜಿ ಮಹಾರಾಜರ ಕಾಲದ ಐತಿಹಾಸಿಕ ಶಸ್ತ್ರಾಸ್ತ್ರಗಳ ಭವ್ಯ ಪ್ರದರ್ಶನ

ನವದೆಹಲಿಯ ಪ್ರತಿಷ್ಠಿತ ಭಾರತ ಮಂಡಪಮ್ (ಇಂದ್ರಪ್ರಸ್ಥ) ನಲ್ಲಿ ಡಿಸೆಂಬರ್ 13 ರಿಂದ 15 ವರೆಗೆ ಆಯೋಜಿಸಲಾಗಿರುವ ಸನಾತನ ರಾಷ್ಟ್ರ ಶಂಖನಾದ ಮಹೋತ್ಸವದಲ್ಲಿ, ಛತ್ರಪತಿ ಶಿವಾಜಿ ಮಹಾರಾಜರ ಕಾಲದ ಸುಮಾರು 250 ಕ್ಕೂ ಹೆಚ್ಚು ಅಪರೂಪದ ಮತ್ತು ಐತಿಹಾಸಿಕ ಶಸ್ತ್ರಾಸ್ತ್ರಗಳನ್ನು ದೆಹಲಿಯಲ್ಲಿ ಪ್ರದರ್ಶಿಸಲಾಗುತ್ತಿದೆ. ಈ ಎಲ್ಲಾ ಶಸ್ತ್ರಾಸ್ತ್ರಗಳನ್ನು ವಿಶೇಷ ಭದ್ರತಾ ವ್ಯವಸ್ಥೆಯೊಂದಿಗೆ ಮಹಾರಾಷ್ಟ್ರದಿಂದ ದೆಹಲಿಗೆ ತರಲಾಗುತ್ತಿದ್ದು,

ರಾಜಧಾನಿಯಲ್ಲಿ ಇಂತಹ ಐತಿಹಾಸಿಕ ಶಸ್ತ್ರಾಸ್ತ್ರ ಪ್ರದರ್ಶನವನ್ನು ನೋಡಬಹುದಾಗಿದೆ. ಸೇವ್ ಕಲ್ಚರ್, ಸೇವ್ ಭಾರತ್ ಫೌಂಡೇಶನ್ ಪ್ರಸ್ತುತ ಮತ್ತು ಸನಾತನ ಸಂಸ್ಥೆ ಆಯೋಜಿತ ಈ ಮಹೋತ್ಸವದಲ್ಲಿ, ಛತ್ರಪತಿ ಶಿವಾಜಿ ಮಹಾರಾಜರ ಕಾಲದ ಶಸ್ತ್ರಾಸ್ತ್ರಗಳ ಪ್ರದರ್ಶನದ ಮೂಲಕ ಶೌರ್ಯದ ಶಂಖನಾದ ನಡೆಯಲಿದೆ ಎಂದು ಸನಾತನ ಸಂಸ್ಥೆಯ ರಾಷ್ಟ್ರೀಯ ವಕ್ತಾರರಾದ ಶ್ರೀ ಅಭಯ್ ವರ್ತಕ್ ಅವರು ಮಾಹಿತಿ ನೀಡಿದ್ದಾರೆ.

ಸನಾತನ ಸಂಸ್ಥೆಯ ರಜತ ಮಹೋತ್ಸವದ ಅಂಗವಾಗಿ ದೇಶದ ರಾಜಧಾನಿಯಲ್ಲಿ ನಡೆಯಲಿರುವ ಈ ಉತ್ಸವದಲ್ಲಿ, ಡಿಸೆಂಬರ್ 13 ರಿಂದ 15 ರವರೆಗೆ ಮೂರು ದಿನಗಳ ಕಾಲ 'ಸ್ವರಾಜ್ಯದ ಶೌರ್ಯನಾದ' ಎಂಬ ಹೆಸರಿನ ಭವ್ಯ ಪ್ರದರ್ಶನವನ್ನು ಏರ್ಪಡಿಸಲಾಗುವುದು. ಈ ಪ್ರದರ್ಶನವು ಹಾಲ್ ನಂ 12 ರಲ್ಲಿ ಎಲ್ಲರಿಗಾಗಿ ತೆರೆದಿರಲಿದೆ. ಈ ಪ್ರದರ್ಶನದಲ್ಲಿ ಛತ್ರಪತಿ ಶಿವಾಜಿ ಮಹಾರಾಜರು ಬಳಸಿದ ಅನೇಕ ಶಸ್ತ್ರಾಸ್ತ್ರಗಳ ಪ್ರತ್ಯಕ್ಷ ದರ್ಶನವನ್ನು ಸಹ ಪಡೆಯಬಹುದು. ಇದರೊಂದಿಗೆ ಇತರ ಮರಾಠಾ ಸಾಮ್ರಾಜ್ಯದ ಸೇನಾಪತಿಗಳು ಬಳಸಿದ ಶಸ್ತ್ರಾಸ್ತ್ರಗಳು ಸಹ ಇರಲಿವೆ. ಅದರಲ್ಲಿ ಸರಸೇನಾಪತಿ ಹಂಬೀರಾವ್ ಮೋಹಿತೆ ಅವರ ಭಾಲೆ ಮುಂತಾದ ವಿವಿಧ ಶಸ್ತ್ರಾಸ್ತ್ರಗಳು ಇರಲಿವೆ. ಮಹಾರಾಣಾ ಪ್ರತಾಪರ ಕಾಲದ ಶಸ್ತ್ರಾಸ್ತ್ರಗಳು, ಕರ್ನಾಟಕದ ವಿಜಯನಗರ ಸಾಮ್ರಾಜ್ಯದ ಕಾಲದ ಕತ್ತಿಗಳು. ಶಿವಾಜಿ ಮಹಾರಾಜರ ಕಾಲದ ಯುದ್ಧ ಪರಂಪರೆ ಮತ್ತು ಲೋಹಶಾಸ್ತ್ರ. ಕಬ್ಬಿಣದಿಂದ ಶಸ್ತ್ರ' ಎಂಬ ಪರಿಕಲ್ಪನೆಯ ಮೇಲೆ ಆಧಾರಿತವಾದ ಮರಾಠಾ ಶಸ್ತ್ರಾಸ್ತ್ರ ತಯಾರಿಕಾ ಪ್ರಕ್ರಿಯೆ ಮತ್ತು ಮರಾಠಾ ಯುದ್ಧತಂತ್ರದ ಬುದ್ಧಿಮತ್ತೆಯ ದರ್ಶನ ಹಿಂದೂ ಮಹಿಳೆಯರು ಆತ್ಮರಕ್ಷಣೆಗಾಗಿ ಬಳಸಿದ ಶಸ್ತ್ರಾಸ್ತ್ರಗಳ ಪ್ರದರ್ಶನ ಆ ಕಾಲದ ಮಹಿಳೆಯರ ರಣಶಕ್ತಿ ಮತ್ತು ಯುದ್ಧದಲ್ಲಿನ ಪಾತ್ರವನ್ನು ಎತ್ತಿ ತೋರಿಸುವುದು. ಇದು ಕೇವಲ ಪ್ರದರ್ಶನವಲ್ಲ, ಹಿಂದವೀ ಸ್ವರಾಜ್ಯದ ತೇಜಸ್ಸಿನಿಂದ ಸನಾತನ ರಾಷ್ಟ್ರಕ್ಕೆ ಹೊಸ ಪ್ರೇರಣೆ ನೀಡುವ ಆಧ್ಯಾತ್ಮಿಕ ಮತ್ತು ಐತಿಹಾಸಿಕ ಅನುಭವವಾಗಲಿದೆ.


ಈ ಮಹೋತ್ಸವದಲ್ಲಿ ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ನ್ಯಾಸದ ಕೋಶಾಧ್ಯಕ್ಷರಾದ ಪ. ಪೂ. ಸ್ವಾಮಿ ಗೋವಿಂದ ದೇವಗಿರಿ ಮಹಾರಾಜರು ಸೇರಿದಂತೆ ಅನೇಕ ಸಂತ-ಮಹಂತರು ಉಪಸ್ಥಿತರಿರಲಿದ್ದು ಮಾರ್ಗದರ್ಶನ ನೀಡಲಿದ್ದಾರೆ. ಅಲ್ಲದೆ, ಕೇಂದ್ರ ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಸಚಿವರಾದ ಶ್ರೀ ಗಜೇಂದ್ರ ಸಿಂಗ್ ಶೇಖಾವತ್, ಕೇಂದ್ರ ರಕ್ಷಣಾ ರಾಜ್ಯ ಸಚಿವರಾದ ಶ್ರೀ ಸಂಜಯ್ ಸೇಠ್, ದೆಹಲಿಯ ಸಾಂಸ್ಕೃತಿಕ ಸಚಿವರಾದ ಶ್ರೀ. ಕಪಿಲ್ ಮಿಶ್ರಾ, ಛತ್ರಪತಿ ಸಂಸದರಾದ ಶ್ರೀಮಂತ ಉದಯನರಾಜೆ ಭೋಸಲೆ, ನ್ಯಾಯವಾದಿ ವಿಷ್ಣು ಜೈನ್ , ಕರ್ನಾಟಕದಿಂದ ಶ್ರೀ. ಪ್ರಮೋದ್ ಮುತಾಲಿಕ್, ಮೈಸೂರಿನ ರಾಜವಂಶಸ್ಥ ಯದುವೀರ್ ಒಡೆಯರ್ , ಸಂಸದ ಡಾ. ಸಿ. ಎನ್ ಮಂಜುನಾಥ್, ವಾಗ್ಮಿ ಚಕ್ರವರ್ತಿ ಸೂಲಿಬೆಲೆ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿರಲಿದ್ದಾರೆ. 'ಸನಾತನ ರಾಷ್ಟ್ರ ಶಂಖನಾದ ಮಹೋತ್ಸವ' ಕೇವಲ ಒಂದು ಕಾರ್ಯಕ್ರಮವಲ್ಲ, ಇದು ರಾಷ್ಟ್ರ ರಕ್ಷಣೆ, ಸಂಸ್ಕೃತಿ, ಶೌರ್ಯ ಮತ್ತು ಹಿಂದವೀ ಸ್ವರಾಜ್ಯದ ತೇಜಸ್ಸಿನ ಪುನರುಜ್ಜೀವನವಾಗಿದೆ. ಇಂದಿನ ಕಾಲದ ವಿವಿಧ ಭದ್ರತಾ ಸವಾಲುಗಳ ಹಿನ್ನೆಲೆಯಲ್ಲಿ, ಶಿವಾಜಿ ಕಾಲದ ಶಸ್ತ್ರಾಸ್ತ್ರಗಳು ಯುದ್ಧ ಕಲೆ ಮತ್ತು ರಾಷ್ಟ್ರಧರ್ಮದ ನೆನಪು ಯುವಕರಿಗೆ ಹೊಸ ಚೈತನ್ಯವನ್ನು ನೀಡಲಿದೆ. ಎಲ್ಲಾ ಹಿಂದೂಗಳಿಗೆ ಈ ಉತ್ಸವವು ವಿಶೇಷ ಹೆಮ್ಮೆಯ ಕ್ಷಣವಾಗಿದೆ.



• ಉದಯವಾಹಿನಿ, ವಿಶೇಷ

# ಉದ್ದನೆಯ ದಪ್ಪ ಕೂದಲಿಗೆ ಬಾಳೆಹಣ್ಣಿನ ಹೇರ್ ಮಾಸ್ಕ್

ಜಾಸ್ತಿ ಹಣ್ಣಾಗಿರುವ ಬಾಳೆಹಣ್ಣು ಇದ್ದರೆ, ನಾವೆಲ್ಲಾರು ಅದು ಕೊಳೆತು ಹೋಗಿರಬಹುದು ಎಂದುಕೊಂಡು ಹೊರಗಡೆ ಬಿಸಾಡುತ್ತೇವೆ. ಆದರೆ ಹಾಗೆ ಮಾಡುವ ಬದಲು, ಬಾಲಿವುಡ್ ನಟಿ ಮಾಧುರಿ ದೀಕ್ಷಿತ್ ಸೂಚಿಸಿದಂತೆ ಅದರಿಂದ ಹೇರ್ ಮಾಸ್ಕ್ ತಯಾರಿಸಲು ಪ್ರಯತ್ನಿಸಿ. ಇದು ನಿಮ್ಮ ಕೂದಲನ್ನು ಮೃದು ಮತ್ತು ಹೊಳೆಯುವಂತೆ ಮಾಡುತ್ತದೆ. ಇತ್ತೀಚಿನ ದಿನಗಳಲ್ಲಿ ಬಹುತೇಕ ಜನರಿಗೆ ತಲೆಕೂದಲು ಬಹಳ ಬೇಗನೆ ಉದುರಿಹೋಗುತ್ತದೆ ಅಥವಾ ಕೂದಲಿನ ಸಂಬಂಧಪಟ್ಟ ಸಮಸ್ಯೆಗಳು ಬಹಳ ಸಣ್ಣವಯಸ್ಸಿನಲ್ಲಿಯೇ ಕಾಣಿಸಿ ಕೊಳ್ಳುತ್ತದೆ.



ಇದಕ್ಕೆಲ್ಲಾ ಪ್ರಮುಖ ಕಾರಣ ಜನರು ಅನುಸರಿಸುತ್ತಿರುವ ಆಹಾರಪದ್ಧತಿ ಹಾಗೂ ಜೀವನ ಶೈಲಿಯೇ ಇದಕ್ಕೆಲ್ಲಾ ಪ್ರಮುಖ ಕಾರಣ ಎನ್ನಬಹುದು. ಸಾಮಾನ್ಯವಾಗಿ ಇದರ ನೇರ ಪರಿಣಾಮ ಆರೋಗ್ಯದ ಮೇಲೆ ಮಾತ್ರವಲ್ಲ ಚರ್ಮದ ಮೇಲೆ ಮತ್ತು ತಲೆಕೂದಲಿನ ಮೇಲೆ ಕೂಡ ಉಂಟಾಗಿ ಸಾಕಷ್ಟು ಸಮಸ್ಯೆಗಳು ಉದ್ಭವವಾಗುತ್ತವೆ.

**ತಲೆಕೂದಲಿನ ಸಮಸ್ಯೆಗೆ ಕಾರಣಗಳೇನು:** ತಲೆಕೂದಲು ತುಂಬಾ ಉದ್ದ ಹಾಗೂ ಕಪ್ಪಾಗಿ ಸೊಂಪಾಗಿ ಇದ್ದರೆ ಆಗ ಹೆಣ್ಣಿನ ಸೌಂದರ್ಯವು ಕೂಡ ವೃದ್ಧಿಸುವುದು ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಕೆಲವೊಮ್ಮೆ ಹವಾಮಾನದಲ್ಲಿ ಉಂಟಾಗುವ ಬದಲಾವಣೆಗಳಿಂದಲೂ ಕೂಡ, ಕೂದಲಿನ ಆರೋಗ್ಯಕ್ಕೆ ಸಂಬಂಧಪಟ್ಟ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಕೆಲವೊಮ್ಮೆ ಮಳೆಯಿಂದಾಗಿ ಕೂದಲು ಸಿಕ್ಕು ಬೀಳುತ್ತದೆ, ಅದೇ ರೀತಿ ಬಿಸಿಲು ಜಾಸ್ತಿ ಒದ್ದಾಗ ಕೂದಲು ಡ್ರೈ ಆಗಿ ಬಿಡುತ್ತದೆ, ಇದನ್ನು ಚಳಿಗಾಲದಲ್ಲಿ ಕೂದಲು ತನ್ನ ಹೊಳಪನ್ನು ಕಳೆದುಕೊಳ್ಳುತ್ತದೆ. ಕೂದಲಿನ ಆರೋಗ್ಯವನ್ನು ಕಾಪಾಡಿಕೊಳ್ಳಲು ನಾವು ರಾಸಾಯನಿಕ ಅಂಶಗಳು ಹೆಚ್ಚಿರುವ ಶಾಂಪೂ, ಕಂಡೀಷನರ್ ಮುಂತಾದ ಹಲವಾರು ಸೌಂದರ್ಯವರ್ಧಕ ಉತ್ಪನ್ನಗಳನ್ನು ಬಳಕೆ ಮಾಡುತ್ತೇವೆ. ಆದರೆ ಇವುಗಳ ಅಡ್ಡಪರಿಣಾಮಗಳಿಂದಾಗಿ ದೀರ್ಘಾವಧಿಯಲ್ಲಿ ಕೂದಲಿನ ಬೇರುಗಳನ್ನು ದುರ್ಬಲಗೊಳಿಸುತ್ತವೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 09:00 ರಿಂದ 10:30 |
| ಗುಳಿಕ ಕಾಲ | ಬೆಳಿಗ್ಗೆ | 06:00 ರಿಂದ 07:00 |
| ಯಮಗಂಡ ಕಾಲ | ಮಧ್ಯಾಹ್ನ | 01:30 ರಿಂದ 03:00 |

**ಮೇಷ** ನಿಮ್ಮ ಶೀಘ್ರ ಕ್ರಮ ನಿಮ್ಮ ಸುದೀರ್ಘವಾದ ಸಮಸ್ಯೆಯನ್ನು ಪರಿಹರಿಸುತ್ತದೆ. ಇಂದು ನೀವು ನಿಮ್ಮ ಮನೆಯ ಹಿರಿಯ ಜನರಿಂದ ಹಣವನ್ನು ಉಳಿಸುವ ಬಗ್ಗೆ ಯಾವುದೇ ಸಲಹೆಯನ್ನು ತೆಗೆದುಕೊಳ್ಳಬಹುದು.

**ವೃಷಭ** ನಿಮ್ಮ ದೈಹಿಕ ಬಲವನ್ನು ನಿರ್ವಹಿಸಲು ನೀವು ಕ್ರೀಡೆಯಲ್ಲಿ ಸಮಯ ಕಳೆಯುವ ಸಾಧ್ಯತೆಗಳಿವೆ. ನಿಮಗೆ ತಿಳಿದ ಜನರ ಮೂಲಕ ಆದಾಯದ ಹೊಸ ಮೂಲಗಳು ಕಂಡುಬರುತ್ತವೆ.

**ಮಿಥುನ** ಸಂತೃಪ್ತಿಯ ಜೀವನಕ್ಕಾಗಿ ನಿಮ್ಮ ಮಾನಸಿಕ ದೃಢತೆಯನ್ನು ಸುಧಾರಿಸಿ. ಯಾವುದೇ ಅನುಭವದ ವ್ಯಕ್ತಿಯ ಸಲಹೆ ಇಲ್ಲದೆ, ನಿಮಗೆ ಆರ್ಥಿಕ ನಷ್ಟವಾಗುವ ಯಾವುದೇ ಕೆಲಸವನ್ನು ಮಾಡಬೇಡಿ.

**ಕರ್ಕಾಟಕ** ಸಾಮಾಜಿಕ ಸಮಾರಂಭಗಳು ಪ್ರಭಾವಿ ಮತ್ತು ಪ್ರಮುಖ ಜನರೊಡನೆ ನಿಮ್ಮ ಬಾಂಧವ್ಯವನ್ನು ಸುಧಾರಿಸಲು ಒಂದು ಪರಿಪೂರ್ಣ ಅವಕಾಶವಾಗಿರುತ್ತದೆ. ಅನಿರೀಕ್ಷಿತ ಪ್ರಣಯ ಭಾವ.

**ಸಿಂಹ** ನಿಮ್ಮ ನಗು ಖಿನ್ನತೆಯ ವಿರುದ್ಧ ಕೆಲಸ ಮಾಡುತ್ತದೆ. ಮೌಲ್ಯ ಹೆಚ್ಚಾಗುವ ವಸ್ತುಗಳನ್ನು ಖರೀದಿಸಲು ಪರಿಪೂರ್ಣ ದಿನ. ನಿಮ್ಮ ಮನೆಯ ಪರಿಸ್ಥಿತಿ ಸ್ವಲ್ಪ ಅನಿರೀಕ್ಷಿತವಾಗಿರುತ್ತದೆ.

**ಕನ್ಯಾ** ಒಟ್ಟಾರೆ ಆರೋಗ್ಯ ಉತ್ತಮವಾಗಿದ್ದರೂ ಪ್ರಯಾಣ ಒತ್ತಡಮಯವೂ ಮತ್ತು ಕಷ್ಟಕರವೂ ಆಗಿರುತ್ತದೆ. ಇಂದು ಸಾಲಗಾರನು ನಿಮಗೆ ಹೇಳದೆ ನಿಮ್ಮ ಖಾತೆಗೆ ಹಣವನ್ನು ಸೇರಿಸಬಹುದು.

**ತುಲಾ** ನಿಮ್ಮ ಜೀವನ ಸಂಗಾತಿಯೊಂದಿಗೆ ಹಣದ ಯಾವುದೇ ವಿಷಯದ ಬಗ್ಗೆ ಇಂದು ನಿಮ್ಮ ಜಗಳವಾಗಬಹುದು. ಆದಾಗ್ಯೂ ನೀವು ನಿಮ್ಮ ಶಾಂತ ಸ್ವಭಾವದಿಂದ ಎಲ್ಲವನ್ನು ಸರಿಗೊಳಿಸಬಹುದು.

**ವೃಶ್ಚಿಕ** ಧ್ಯಾನ ಮತ್ತು ಯೋಗ ಆಧ್ಯಾತ್ಮಿಕ ಹಾಗೂ ಭೌತಿಕ ಲಾಭಗಳೆರಡಕ್ಕೂ ಪ್ರಯೋಜನಕಾರಿಯಾಗುತ್ತದೆ. ವೆಚ್ಚದ ಏರಿದರೂ ಆದಾಯದಲ್ಲಿನ ಹೆಚ್ಚಳ ನಿಮ್ಮ ಖರ್ಚುಗಳನ್ನು ನೋಡಿಕೊಳ್ಳುತ್ತದೆ.

**ಧನಸ್ಸು** ನಿಮ್ಮ ಮಹತ್ವಾಕಾಂಕ್ಷೆ ಮತ್ತು ಆಕಾಂಕ್ಷೆಗಳು ಭಯದಿಂದ ಹಾನಿಗೊಳಗಾಗುವ ಸಾಧ್ಯತೆಗಳು ಹೆಚ್ಚಿವೆ. ಇದನ್ನು ನಿಭಾಯಿಸಲು ನಿಮಗೆ ಸರಿಯಾದ ಸಲಹೆ ಬೇಕು. ನೀವು ತ್ವರಿತ ಹಣ ಪಡೆಯುವ ಬಯಕೆ ಹೊಂದಿರುತ್ತೀರಿ.

**ಮಕರ** ನಿಮ್ಮ ಬಗ್ಗೆ ನಿಮಗೇ ಉತ್ತಮ ಅಭಿಪ್ರಾಯ ಬರಲು ಕೆಲಸಗಳನ್ನು ಮಾಡಲು ಒಂದು ಅದ್ಭುತ ದಿನ. ಇಂದು ನೀವು ಹಣಕ್ಕೆ ಸಂಬಂಧಿಸಿದ ಸಮಸ್ಯೆಯನ್ನು ಹೊಂದಿರಬಹುದು.

**ಕುಂಭ** ನಿಮ್ಮ ಧೀರ್ಘಕಾಲೀನ ಅನಾರೋಗ್ಯದ ಜೊತೆ ಹೋರಾಡುವಾಗ ಆತ್ಮ ವಿಶ್ವಾಸ ಶೌರ್ಯದ ಮೂಲವೆಂದು ತಿಳಿದಿರಿ. ನಿಮ್ಮ ಜೀವನದ ಕಳಪೆ ಆರೋಗ್ಯದಿಂದಾಗಿ, ನಿಮ್ಮ ಹಣವನ್ನು ಇಂದು ಖರ್ಚು ಮಾಡಬಹುದು.

**ಮೀನ** ಇಂದು ನೀವು ಭರವಸೆಯ ಮಾಯಾಜಾಲದಲ್ಲಿದ್ದೀರಿ. ಇಂದಿನವರೆಗೂ ಹಣವನ್ನು ಯೋಚಿಸದೆ ಖರ್ಚು ಮಾಡುತ್ತಿದ್ದ ಜನರು, ಅವರಿಗೆ ಇಂದು ಹಣದ ತುಂಬಾ ಅಗತ್ಯವಿರಬಹುದು

# ಅತಿಕ್ರಮಣ ಕಟ್ಟಡಗಳು ತಲೆ ಎತ್ತುತ್ತಿವೆ ಕಡಿವಾಣ ಯಾವಾಗ?

## ಸಂಬಂಧಪಟ್ಟ ಅಧಿಕಾರಿಗಳು ಮೌನವಹಿಸಿದರೆ ಸರ್ಕಾರಿ ಆಸ್ತಿಗಳು ರಕ್ಷಣೆ ಮಾಡುವವರು ಯಾರು ಎಂಬುವುದು ಯಕ್ಷಪ್ರಶ್ನೆ

**ಉದಯವಾಹಿನಿ ವಿಶೇಷ**

• ಉದಯವಾಹಿನಿ ಚಿಂಚೋಳಿ

ಅವಳಿ ಪಟ್ಟಣಗಳಾದ ಚಿಂಚೋಳಿ-ಚಂದಾಪೂರ ಸೇರಿದಂತೆ ತಾಲ್ಲೂಕಾದ್ಯಂತ ಸರ್ಕಾರಿ ಸ್ಥಳಗಳು, ರಸ್ತೆಗಳು ಅತಿಕ್ರಮಣ ಮಾಡುವವರಿಗೆ ಕಡಿವಾಣ ಹಾಕುವವರು ಯಾರು ಎಂಬುವುದು ಯಕ್ಷಪ್ರಶ್ನೆಯಾಗಿ ಉಳಿದಿದೆ.

**ಸಮಾಜಸೇವಕರು ಅಧಿಕಾರಿಗಳು ಮೌನವೇಕೆ ಯಕ್ಷಪ್ರಶ್ನೆ**


ಉದಯವಾಹಿನಿ ಚಿತ್ರ


ಪುರಸಭೆ ವ್ಯಾಪ್ತಿಯಲ್ಲಿ ಸರ್ಕಾರಿ ಜಾಗವಾಗಲಿ,ಸರ್ಕಾರಿ ರಸ್ತೆಯಾಗಲಿ ಅತಿಕ್ರಮಣ ಮಾಡಿಕೊಂಡಿದವರು ಯಾರೇ ಇರಲಿ ಈಗಾಗಲೇ ಕಟ್ಟಡ ಡಬ್ಬಿಗಳು ಹಾಕಿದವರಿಗೆ ಪುರಸಭೆ ಸಿಬ್ಬಂದಿ ವರ್ಗದವರಿಂದ ಹೇಳಲಾಗಿದ್ದು ನೋಟಿಸ್ ಕೂಡ ನೀಡಲಾಗಿದೆ ಸೋಮವಾರದಿಂದ ಎಲ್ಲಾ ಕಟ್ಟಡಗಳು,ಡಬ್ಬಿಗಳು,ಬಡಾವಣೆಗಳಲ್ಲಿ ಚರಂಡಿ ಒತ್ತುವರಿ ಮಾಡಿಕೊಂಡು ಚರಂಡಿಕ್ಕಿಂತ ಮುಂದೆ ಆಗಮಿಸಿ ಕಟ್ಟಡ ನಿರ್ಮಿಸಿದ್ದು ಗಮನಕ್ಕೆ ಬಂದಿದೆ ಪೋಲೀಸರ ಸಹಾಯ ಪಡೆದು ಹಂತ ಹಂತವಾಗಿ ತೆರವುಗೊಳಿಸಿ ಸರ್ಕಾರದ ಜಮೀನು,ಸ್ಥಳಗಳು ಸಂರಕ್ಷಿಸಲಾಗುವುದು.
– ನಿಂಗಮ್ಮಾ ಬಿರಾದಾರ, ಮುಖ್ಯಾಧಿಕಾರಿ ಪುರಸಭೆ ಚಿಂಚೋಳಿ.


ಸರ್ಕಾರಿ ಜಮೀನು 204 ಮತ್ತು 47 ಸರ್ವೆ ಜಮೀನುಗಳು ಹಾಗೂ ಪೋಲಕಪಳ್ಳಿಯ 45ಸರ್ವೇ ನಂಬರ್ ಜಮೀನು ಅನೇಕರು ಅತಿಕ್ರಮಣ ಮಾಡಿಕೊಳ್ಳುತ್ತಿದ್ದಾರೆ,ಬಡವರಿಗೆ ಹಕ್ಕುಪತ್ರ ನೀಡಿ ಉಳಿದ ಗೈರಾಣೆ ಜಮೀನು ಸಂರಕ್ಷಿಸುವಂತೆ ಅನೇಕ ಬಾರಿ ತಹಶೀಲ್ದಾರ್,ಸಹಾಯಕ ಆಯುಕ್ತರಿಗೂ,ಡಿಸಿ ಅವರಿಗೂ ಮನವಿಪತ್ರಗಳು ಬರೆದು ಸಾಕಾಗಿದೆ ಆದರೆ ಸಂಬಂಧಪಟ್ಟ ಅಧಿಕಾರಿಗಳು ಯಾವುದೇ ಕ್ರಮಕೈಗೊಳ್ಳುತ್ತಿಲ್ಲ ಪತ್ರಕ್ಕೆ ಸಹಾಯಕ ಆಯುಕ್ತರು ಹಿಂಬರಹ ಕಳುಹಿಸಿದ್ದು ಸರ್ವೆ ನಡೆಸುವಂತೆ ತಾಲ್ಲೂಕಾಡಳಿತಕ್ಕೆ ಆದೇಶ ಹೊರಡಿಸಿದ್ದಾರೆ ಆದರೆ ಇಲ್ಲಿಯವರೆಗೆ ಪ್ರಯೋಜನವಾಗಿಲ್ಲ. ಬಡವರು ಸಣ್ಣ ಗುಡುಸಿ ಹಾಕಿಕೊಂಡರೆ ಅಧಿಕಾರಿಗಳು ಬೇಗ ಖಾಲಿ ಮಾಡಿಸುತ್ತಾರೆ,ಶ್ರೀಮಂತರು,ಬಲಿಷ್ಠರು 20-30ಫೀಟ್ ವರೆಗೆ ಜಮೀನು ಅಥವಾ ರಸ್ತೆ ಅತಿಕ್ರಮಣ ಮಾಡಿದರೂ ಯಾರು ಕೇಳುವುದಿಲ್ಲ.
– ರಮೇಶ ಯಾಕಾಪೂರ, ಹಿರಿಯ ಸಮಾಜ ಸೇವಕ ಚಿಂಚೋಳಿ.

ಪಟ್ಟಣದ ಚಂದಾಪೂರದ 204ಸರ್ವೆ ಜಮೀನು ಮತ್ತು 47ಸರ್ವೆ ಜಮೀನು ತಾಲ್ಲೂಕಿನ ಪೋಲಕಪಳ್ಳಿಯ 45ಸರ್ವೆ ಜಮೀನು ಗೈರಾಣಿ ಜಮೀನುಗಳು ಸೇರಿದಂತೆ ರಾಷ್ಟ್ರೀಯ ಹೆದ್ದಾರಿ ಮತ್ತು ರಾಜ್ಯ ಹೆದ್ದಾರಿಗಳ ಪಕ್ಕದಲ್ಲೇ ಹಾಗೂ ಪಟ್ಟಣ ಗ್ರಾಮಗಳಲ್ಲಿ ರಸ್ತೆಗಳು ಕಬಳಿಕೆ ಮಾಡುತ್ತಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಮಾತ್ರ ಮೌನವಹಿಸಿದ್ದು ಸಂಶಯಕ್ಕೆ ಎಡೆಮಾಡಿಕೊಟ್ಟಿದೆ.

ಸಂಬಂಧಪಟ್ಟ ಅಧಿಕಾರಿಗಳು ಮೌನವಹಿಸಿದರೆ ಸರ್ಕಾರಿ ಆಸ್ತಿಗಳು ರಕ್ಷಣೆ ಮಾಡುವವರು ಯಾರು ಎಂಬುವುದು ಯಕ್ಷಪ್ರಶ್ನೆಯಾಗಿ ಉಳಿದಿದೆ.

ಪುರಸಭೆ ವ್ಯಾಪ್ತಿ,ಪಟ್ಟಣ ಪಂಚಾಯಿತಿ,ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿ ಅನೇಕ ಸರ್ಕಾರಿ ಜಮೀನು ಸೇರಿದಂತೆ ರಸ್ತೆಗಳು ಸಹ ಬಲಿಷ್ಠರು ಅತಿಕ್ರಮಣ ಮಾಡಿಕೊಂಡು ದೊಡ್ಡ ದೊಡ್ಡ ಕಟ್ಟಡ ನಿರ್ಮಾಣ ಮಾಡಿಕೊಳ್ಳುತ್ತಿದ್ದಾರೆ,ಆದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ಇದ್ದರೂ ಸಹ ಮೌನವಹಿಸಿದ್ದಾರೆ,ಆದರೆ ಅಧಿಕಾರಿಗಳಿಗೆ ಕೆಲ ಮಾಹಿತಿ ಇಲ್ಲದಿದ್ದರೂ ಕೆಲವರು ಸಮಾಜ ಸೇವಕರು ಸಂಬಂಧ ಪಟ್ಟ ಅಧಿಕಾರಿಗಳಿಗೆ ದೂರು ಸಲ್ಲಿಸಿದರೂ ಯಾವುದೇ ಕ್ರಮಕ್ಕೆಗೊಳ್ಳದೆ ಇರುವುದು ನೋವಿನ ಸಂಗತಿಯಾಗಿದೆ.

ಯಾರಾದರೂ ಬಡವರು ಸರ್ಕಾರಿ ಜಮೀನುಯಾಗಲಿ ಅಥವಾ ರಸ್ತೆಗಳು ಒಂದು ಫೀಟ್ ಜಾಗೆ ಅತಿಕ್ರಮಣ ಮಾಡಿದರೆ ಸಾಕು ಅಧಿಕಾರಿಗಳು ತಕ್ಷಣ ನೋಟಿಸ್ ಜಾರಿ ಮಾಡಿ ಕ್ರಮಕೈಗೊಳ್ಳುತ್ತಾರೆ,ಅದೆ ಬಲಿಷ್ಠರು 20-30 ಫೀಟ್ ಜಾಗೆ ಮತ್ತು 5ಫೀಟ್ ರಸ್ತೆಗಳು ಅತಿಕ್ರಮಣ ಮಾಡಿಕೊಂಡಿದರೂ ಸಂಬಂಧಪಟ್ಟ ಅಧಿಕಾರಿಗಳು ಮೌನವಹಿಸುತ್ತಾರೆ ಯಾಕೆ ಎಂಬುವುದು ಯಕ್ಷ ಪ್ರಶ್ನೆಯಾಗಿದೆ, ಬಡವರಿಗೆ ಒಂದು ಕಾನೂನು ಶ್ರೀಮಂತರಿಗೆ ಒಂದು ಕಾನೂನುಯಿದೆಯಾ ಎಂಬುವುದು ಬಡವರ ಪ್ರಶ್ನೆಯಾಗಿದೆ. ಅನೇಕರು ಆಂದ್ರಪ್ರದೇಶದ,ತೆಲಂಗಾಣ ರಾಜ್ಯಗಳಿಂದ ಚಿಂಚೋಳಿಗೆ ಆಗಮಿಸಿ ಲೇಔಟ್ ಹಾಕಿ ಪ್ಲಾಟ್ ಗಳು ಮಾರಾಟ ಮಾಡುತ್ತಿದ್ದಾರೆ ಆದರೆ ಯಾವುದೇ ಕಾನೂನು ನಿಯಮಗಳು ಪಾಲನೆ ಮಾಡದೆ ಗಾಳಿಗೆ ತೂರಿ ಮನಬಂದಂತೆ ಮಾಡುತ್ತಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಎಚ್ಚೇತುಕೊಂಡು ಅತಿಕ್ರಮಣ ಮಾಡಿಕೊಂಡವರ ವಿರುದ್ಧ ಕ್ರಮ ಕೈಗೊಳ್ಳುತ್ತಾರೆಯೋ ಇಲ್ಲವೋ ಕಾದು ನೋಡಬೇಕಾಗಿದೆ.

# ಗುರು ಎಂದರೆ ಅಭಿಮಾನ, ಆಶೀರ್ವಾದ, ಚೈತನ್ಯ ಸ್ವರೂಪ

• ಉದಯವಾಹಿನಿ ಕೆಂಭಾವಿ

ಅಜ್ಞಾನದಿಂದ ಸುಜ್ಞಾನದೆಡೆಗೆ ಕೊಂಡೊಯ್ಯುವ ಮಹಾ ಶಕ್ತಿಯೇ ಗುರು ಅಂತಹ ಸದ್ಗುರುವಿನ ಸನ್ನಿಧಿಯಲ್ಲಿ ಜರುಗುವ ಹುಣ್ಣಿಮೆಯ ಸತ್ಸಂಗ ಮಹಾ ಬೆಳಕು ಎಂದು ಶಿವಬಸಯ್ಯ ಸ್ವಾಮಿ ಕುಕೂನೂರು ಹೇಳಿದರು.


ಉದಯವಾಹಿನಿ ಚಿತ್ರ

**ಮಾಸಿಕ ಹುಣ್ಣಿಮೆಯ ಶಿವಾನುಭವ ಗೋಷ್ಠಿ**

ಪಟ್ಟಣದ ಹಿರೇಮಠ ಸಂಸ್ಥಾನದಲ್ಲಿ ಶ್ರೀಗುರು ಕಾಂತೇಶ್ವರ ಜನ ಕಲ್ಯಾಣ ಸೇವಾ ಪ್ರತಿಷ್ಠಾನದ ವತಿಯಿಂದ ಹಮ್ಮಿಕೊಂಡಿದ್ದ ಮಾಸಿಕ ಹುಣ್ಣಿಮೆಯ ಶಿವಾನುಭವ ಗೋಷ್ಠಿ ಉದ್ಘಾಟಿಸಿ ಉಪನ್ಯಾಸ ನೀಡಿದ ಅವರು ಗುರು ಎಂದರೆ ಅಭಿಮಾನ, ಗುರು ಎಂದರೆ ಆಶೀರ್ವಾದ, ಗುರು ಎಂದರೆ ಚೈತನ್ಯ ಸ್ವರೂಪ, ಎನ್ನುತ್ತಾ, ಜಗದ ಜನರು ಜಂಜಾಟಗಳಿಂದ ಜರ್ಜರಿತವಾದಗ ಜನಜೀವನಕ್ಕೆ ಜೀವಾಮೃತ ತುಂಬಿ ಜಾಗೃತಿಗೊಳಿಸುವ ಜಂಗಮ ಸ್ವರೂಪವೇ ಗುರು ಎಂದವರು, ಸಾಧು, ಸಂತರು, ಸತ್ಪುರುಷರು, ಚಿಂತಕರು, ಶ್ರೇಷ್ಠ ದಾರ್ಶನಿಕರು ತೋರಿದ ಮಾರ್ಗವನ್ನು ಅನುಸರಿಸುತ್ತಾ, ಭಗವಂತನ ಸಾಕ್ಷಾತ್ಕಾರಕ್ಕೆ ಸಾಕ್ಷಿಯಾಗುವ ಮೂಲಕ ಸದ್ಭಕ್ತರ ಬಾಳು ಬೆಳಗಲಿ ಎಂಬ ಸದುದ್ದೇಶದಿಂದ ಮಾಸಿಕ ಶಿವಾನುಭವ ಗೋಷ್ಠಿಯನ್ನು ಆಯೋಜಿಸಿ ಅನುಭವದ ಅಮೃತಧಾರೆ ಎರೆಯುವ ಷ ಬ್ರ ಚನ್ನಬಸವ ಶಿವಾಚಾರ್ಯರ ಘನ ಕಾರ್ಯ ನಿಜಕ್ಕೂ ಶ್ಲಾಘನೀಯ ಎಂದರು.

ಷ ಬ್ರ ಚನ್ನಬಸವ ಶಿವಾಚಾರ್ಯರು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಸಿದ್ದಲಿಂಗ ಸ್ವಾಮಿ ಚಿಂಚೋಳಿ ಹಾಗೂ ರಾಜಶೇಖರ ಸ್ವಾಮಿ ಅಳ್ಳೊಳ್ಳಿ ಇವರಿಂದ ಸಂಗೀತ ಕಾರ್ಯಕ್ರಮ ಮೂಡಿ ಬಂತು. ಪತ್ರಕರ್ತರಾದ ಇಲಿಯಾಸ್ ಪಟೇಲ್, ಪರಶುರಾಮ ಮಾಳಹಳ್ಳಿಕರ್, ವೀರೇಶ ಟಕ್ಕಳಕಿ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಡಾ ಯಂಕನಗೌಡ ಪಾಟೀಲ ನಿರೂಪಿಸಿ ವಂದಿಸಿದರು. ಪ್ರಮುಖರಾದ ಸಾಹಿತಿ ನಿಂಗನಗೌಡ ದೇಸಾಯಿ, ಮಹಾದೇವಪ್ಪ ವಜ್ಜಲ್, ಅಭಿಷೇಕ್ ಪಾಟೀಲ ನಿಜಗುಣಿ ವಿಶ್ವಕರ್ಮ, ಶ್ರೀಮಠದ ಸದ್ಭಕ್ತರು ಸೇರಿದಂತೆ ಮಹಿಳೆಯರು, ಮಕ್ಕಳು, ಉಪಸ್ಥಿತರಿದ್ದರು.

ಭಕ್ತಿಯೇ ಮುಕ್ತಿಗೆ ಮೂಲ ಮಂತ್ರ ಎನ್ನುತ್ತಾ, ಪ್ರತಿಯೊಬ್ಬರ ಬದುಕಿನ ಬವಣೆಗಳು ದೂರಾಗಲು, ಬದುಕಲಿ ಕಠಿಣ ವ್ರತ ಆಚರಣೆಗಳು ಬೇಕು, ಅವುಗಳನ್ನು ಕಟ್ಟುನಿಟ್ಟಾಗಿ ಪಾಲಿಸಿದಾಗ, ಪರಶಿವನ ಕೃಪೆ ಸುಲಭ ಸಾಧ್ಯ. ನೀತಿ ನಿಯಮ, ಚೌಕಟ್ಟುಗಳ ತತ್ವೂಪದೇಶ ಆಲಿಸಲು ಸತ್ಸಂಗದಲ್ಲಿ ಸೇರೋಣ.
-ಮುದುಕಣ್ಣ ಸಾಹುಕಾರ ಹುಣಸಿಗಿ

# ದೇಶದ ಆರ್ಥಿಕ ಪ್ರಗತಿಗೆ ಸ್ವದೇಶಿ ವಸ್ತು ಅತ್ಯವಶ್ಯ

• ಉದಯವಾಹಿನಿ ರಬಕವಿ ಬನಹಟ್ಟಿ

ದೇಶದ ಆರ್ಥಿಕ ಸ್ವಾವಲಂಬನೆಗೆ ಗುರಿಯಿಟ್ಟು ಕೇಂದ್ರ ಹಾಗೂ ರಾಜ್ಯ ಮಟ್ಟದಲ್ಲಿ ಹಲವು ಜಾಗೃತಿಯ ಕಾರ್ಯಕ್ರಮಗಳು ನಡೆಯುತ್ತಿರುವ ಸಂದರ್ಭದಲ್ಲಿ ಆತ್ಮ ನಿರ್ಬರ ಸ್ವದೇಶಿ ಪ್ರತಿಜ್ಞೆ ಎಂಬುದು ಜನರಲ್ಲಿ ಸ್ವದೇಶಿ ಉತ್ಪಾದನೆಗೆ ಬೆಂಬಲ ಕೋರಿ ರೂಪಿಸಲಾದ ಮಹತ್ವದ ಬದ್ಧತೆಯಾಗಿ ಹೊರ ಹೊಮ್ಮಿದೆ ಎಂದು ಜಿಪಂ ಮಾಜಿ ಸದಸ್ಯ ಬಾಬಾಗೌಡ ಪಾಟೀಲ ಹೇಳಿದರು.

ಅವರೂ ತಾಲ್ಲೂಕಿನ ನಾವಲಗಿ ಗ್ರಾಮದಲ್ಲಿ ಮನೆ ಮನೆಗೆ ಆತ್ಮ ನಿರ್ಬರ ಸ್ವದೇಶಿ ಪ್ರತಿಜ್ಞೆ ಕರ ಪತ್ರಗಳನ್ನು ಹಂಚಿ ಮಾತನಾಡಿದರು,ಸ್ಥಳೀಯ ಉತ್ಪನಗಳ ಬಳಕೆಯನ್ನು ಉತ್ತೇಜಿಸುವುದರ ಮೂಲಕ ದೇಶದ ಕೈಗಾರಿಕಾ ಪ್ರಗತಿ ಹಾಗೂ ಉದ್ಯೋಗಾವಕಾಶಗಳ ವಿಸ್ತರಣೆಯ ಕಡೆಗೆ ಪ್ರಜೆಗಳು ಹೆಜ್ಜೆ ಹಾಕುವಂತೆ ಮಾಡುವುದೆ ಇದರ ಮುಖ್ಯ ಉದ್ದೇಶ,ಭಾರತೀಯ ಉತ್ಪನ್ನಗಳು,ಕೈ ತರಕಾರಿ ವಸ್ತುಗಳು,ಸ್ಥಳೀಯ ಸೇವೆಗಳು ಮತ್ತು ಸ್ವದೇಶಿ ಕೈಗಾರಿಕೆಗಳಿಗೆ ಆದ್ಯತೆ ನೀಡುವ ಮೂಲಕ ಸಂಕಲ್ಪ ಮಾಡಬೇಕು,ವಿದೇಶಿ ಉತ್ಪನ್ನಗಳ ಮೇಲಿನ



ಉದಯವಾಹಿನಿ ಚಿತ್ರ

ಅವಲಂಬನೆ ಕಡಿಮೆಯಾಗುವ ಜೋತೆಯಲ್ಲಿ ಸ್ಥಳೀಯ ವ್ಯಾಪಾರಿಗಳಿಗೆ ಉತ್ಸಾಹ ಸಿಗಲಿದೆ, ಪ್ರಧಾನಿ ನರೇಂದ್ರ ಮೋದಿಜೀಯವರ ಮಹತ್ವದ ಸಂಕಲ್ಪವಾಗಿದ್ದು ದೇಶದ ಹಣ ದೇಶದಲ್ಲೇ ಸುತ್ತಾಡುವಂತೆ ಮಾಡುವುದು ಸಣ್ಣ ಮಧ್ಯಮ ಕೈಗಾರಿಕೆಗಳಿಗೆ ಬಲ ತುಂಬುವುದು ಯುವಕರಿಗೆ ಉದ್ಯೋಗಾವಕಾಶ ಸೃಷ್ಟಿಸುವುದು ಕೌಶಲ್ಯಾಭಿವೃದ್ಧಿ, ತಂತ್ರಜ್ಞಾನ ಆವಿಷ್ಕಾರ ಸೇರಿದಂತೆ ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದಾರೆ ಆದ್ದರಿಂದ ಪ್ರತಿಯೊಬ್ಬರು ಕೈಜೋಡಿಸೋಣವೆಂದರು.

ಈ ಸಂದರ್ಭದಲ್ಲಿ ಗ್ರಾಮೀಣ ಘಟಕದ ಅಧ್ಯಕ್ಷ ಸುರೇಶ ಅಕ್ಕಿವಾಟ, ಗ್ರಾಪಂ ಅಧ್ಯಕ್ಷ ರೇಖಾ ಕಾಂತಿ, ಆನಂದ ಕಂಪು, ಮುತ್ತಪ್ಪ ಅಂಗಡಿ, ಮುತ್ತು ಆಸಂಗಿ ಹಾಜರಿದ್ದರು.

# ವೃದ್ಧರ ಸಮಗ್ರ ಜಾಗೃತಿ ಕಾರ್ಯಕ್ರಮ

• ಉದಯವಾಹಿನಿ ಬಸವನಬಾಗೇವಾಡಿ



ಪಟ್ಟಣದ ಬ್ರಹ್ಮಕುಮಾರಿ ಸೇವಾ ಕೇಂದ್ರದ ವತಿಯಿಂದ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಡಿ. 6 ಶನಿವಾರ ಸಂಜೆ 5:00 ಗಂಟೆಗೆ ವೃದ್ಧರ ಸಮಗ್ರ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಕಾರ್ಯಕ್ರಮಕ್ಕೆ ಚಾಲನೆ ನೀಡಲು ಬಾಗಲಕೋಟೆಯ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಬಿಕೆ ನಾಗರತ್ನ ಅಕ್ಕನವರು ಆಗಮಿಸಲಿದ್ದಾರೆ. ಅಧ್ಯಕ್ಷತೆಯನ್ನು ಪಟ್ಟಣದ ಈಶ್ವರೀಯ ವಿಶ್ವವಿದ್ಯಾಲಯದ ಬಿಕೆ ಸುರೇಖಾ ಅಕ್ಕನವರು ವಹಿಸಲಿದ್ದಾರೆ. ಉಪನ್ಯಾಸಕರಾಗಿ ಮೌಂಟ್ ಅಬುವಿನ ಡಾ. ಮಹೇಶ ಹೇಮಾದ್ರಿ, ಬಹಿರಿಯ ನ್ಯಾಯವಾದಿ ಬಿ. ಆರ್. ಅಡ್ಡೋಡಗಿ , ತಾಲ್ಲೂಕ ಹಿರಿಯ ನಾಗರಿಕರ ವೇದಿಕೆ ಅಧ್ಯಕ್ಷ ಆರ್. ಜಿ ಅಳ್ಳಗಿ, ತಾಲ್ಲೂಕ ಆರೋಗ್ಯ ಅಧಿಕಾರಿಗಳು ಆಗಮಿಸಲಿದ್ದಾರೆ. ತಾಲ್ಲೂಕಿನ ಹಿರಿಯ ನಾಗರಿಕರು ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಪಟ್ಟಣದ ಬಿಕೆ ಪ್ರಕಾಶ ಅಣ್ಣನವರು ತಿಳಿಸಿದ್ದಾರೆ.

# ಸರ್ಕಾರಿ ನೌಕರರ ಸಂಘಕ್ಕೆ ನಾಮ ನಿರ್ದೇಶಕರಾಗಿ ಡಿ ಮಹೇಶ್ ಆಯ್ಕೆ



ಉದಯವಾಹಿನಿ ಚಿತ್ರ

• ಉದಯವಾಹಿನಿ ಚಿತ್ರದುರ್ಗ

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಚಿತ್ರದುರ್ಗ ಜಿಲ್ಲಾ ಶಾಖೆಯ ಕಾರ್ಯಕಾರಿ ಸಮಿತಿಯ ನಾಮನಿರ್ದೇಶಕ ಸ್ಥಾನಕ್ಕೆ ಆರೋಗ್ಯ ಇಲಾಖೆಯ ಮಹೇಶ ಡಿ, ಇವರನ್ನು ಶುಕ್ರವಾರ ನೂತನವಾಗಿ ಆಯ್ಕೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಚಿತ್ರದುರ್ಗ ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಮಾಲತೇಶ ಮುದ್ದಜ್ಜಿ, ಜಿಲ್ಲಾ ಖಜಾಂಚಿ ಮಲ್ಲಿಕಾರ್ಜುನ, ಹಾಗೂ ಜಿಲ್ಲಾ ನಿರ್ದೇಶಕರಾದ ಬಾಗೇಶ್ ಉಗ್ರಾಣ, ಹನುಮಂತ ಪೂಜಾರ್, ಅರವಿಂದ್, ಪ್ರಸನ್ನ , ಹಿರಿಯೂರು ತಾಲ್ಲೂಕು ಅಧ್ಯಕ್ಷರಾದ ರಮೇಶ ಮತ್ತು ಜಿಲ್ಲಾ ಆರೋಗ್ಯ ನಿರೀಕ್ಷಣಾಧಿಕಾರಿಗಳ ಸಂಘದ ಪದಾಧಿಕಾರಿಗಳು, ಆರೋಗ್ಯ ನಿರೀಕ್ಷಣಾಧಿಕಾರಿಗಳು, ಮತ್ತು ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳು ಡಿ ಮಹೇಶ್ ಅವರನ್ನು ಅಭಿನಂದಿಸಿದರು.

# ರೈತರ ಸಂಕಷ್ಟ ಕೇಳುವವರಿಲ್ಲ

• ಉದಯವಾಹಿನಿ ಚನ್ನಮ್ಮನ ಕಿತ್ತೂರು

ರಾಜ್ಯದಲ್ಲಿ ಗದ್ದುಗೆ ಗುದ್ದಾಟ ಜೋರಾಗಿದ್ದು ಸರ್ಕಾರ ಜನರ ನೋವುಗಳಿಗೆ ಸ್ಪಂದಿಸದೇ ಸುಮ್ಮನೆ ಕುಳಿತುಕೊಂಡಿದ್ದು ಮುಖ್ಯ ಮಂತ್ರಿ-ಉಪಮುಖ್ಯಮಂತ್ರಿಗಳು ನಾಟಿ ಕೋಳಿ ಊಟದಲ್ಲಿ ಬಿಜಿಯಾಗಿದ್ದರಿಂದ ಅಭಿವೃದ್ಧಿ ಮರೆಯಾಗಿದೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್ ರವಿಕುಮಾರ ಹೇಳಿದರು.

ರಾಜ್ಯದಲ್ಲಿ ರೈತರ ಸಂಕಷ್ಟ ಕೇಳುವವರಿಲ್ಲ, ಅವರು ಬೆಳೆದ ಕಬ್ಬು, ಸೋಯಾಬಿನ್, ಉದ್ದು, ಹೆಸರು, ಸೇರಿದಂತೆ ಇನ್ನೂ ಹಲವಾರು ಬೆಳೆಗಳಿಗೆ ಬೆಲೆ ನಿಗದಿಯಿಲ್ಲ ಮತ್ತು ಖರೀದಿ ಕೇಂದ್ರ ತೆರೆದಿಲ್ಲ. ಅದಲ್ಲದೇ ಅಪರಾಧ, ದರೋಡೆಗಳು ನಡೆಯುತ್ತ ಕಾನೂನು ಸುವ್ಯವಸ್ಥೆ ಹದಗೆಟ್ಟಿದ್ದು ಸರ್ಕಾರ ಕಣ್ಣು ಮುಚ್ಚಿ ಕುಳಿತಿದೆ ಎಂದು ಹರಿಹಾಯ್ದರು.

# ಸೂರತ್ -ಚೆನ್ನೈ ರಸ್ತೆಗೆ ಸಂಪರ್ಕ ಕಲ್ಪಿಸಲು ಮನವಿ

• ಉದಯವಾಹಿನಿ ವಡಗೇರಾ

ತಾಲ್ಲೂಕು ಕೇಂದ್ರ ವಡಗೇರಾ ಮೂಲಕ ಹಾದು ಹೋಗಿರುವ ಭಾರತ್ ಮಾಲ್ ರಾಷ್ಟ್ರೀಯ ಹೆದ್ದಾರಿ ಸೂರತ್ ಚೆನ್ನೈ ರಸ್ತೆಗೆ ವಡಗೇರಾ ಪಟ್ಟಣದಿಂದ ಸಂಪರ್ಕ ಕಲ್ಪಿಸಲು ಕ್ರಮ ಕೈಗೊಳ್ಳುವಂತೆ ಕರ್ನಾಟಕ ರಕ್ಷಣಾ ವೇದಿಕೆ ತಾಲ್ಲೂಕು ಅಧ್ಯಕ್ಷ ಅಬ್ದುಲ್ ಚಿಗಾನೂರ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಮನವಿ ಸಲ್ಲಿಸಿ ಮಾತನಾಡಿದ ಅವರು ಈಗಾಗಲೇ ಖಾನಾಪುರ ಮತ್ತು ಬೆಂಡಬೆಂಬಳಿ ಗ್ರಾಮದ ಹತ್ತಿರ ರಸ್ತೆ ಸಂಪರ್ಕ ಕಲ್ಪಿಸಿದ್ದಾರೆ ತಾಲ್ಲೂಕಿನ ರೈತರ ಸಾವಿರಾರು ಎಕರೆ ಭೂಮಿ ಕಳೆದುಕೊಂಡಿದ್ದು ತಾಲ್ಲೂಕಿನ ಜನತೆಗೆ ಓಡಾಡಲು ಅವಕಾಶವಿಲ್ಲವೆಂದರೆ ಇದ್ಯಾವ ನ್ಯಾಯ ಆದರೆ ತಾಲ್ಲೂಕು ಕೇಂದ್ರದಲ್ಲಿ ರಸ್ತೆ ಸಂಪರ್ಕ ಕಲ್ಪಿಸದೆ ಈ ಭಾಗದ ಜನತೆಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಅನ್ಯಾಯವಸಿಗಿದೆ ತಾಲ್ಲೂಕು ಕೇಂದ್ರಕ್ಕೆ ಸುಮಾರು ಹಳ್ಳಿಗಳು ಒಳಪಡುತ್ತವೆ ಇಲ್ಲಿಂದ ವ್ಯವಹಾರಿಕವಾಗಿ ದೂರದ ಪಟ್ಟಣಗಳಿಗೆ ತೆರಳಲು ಈ ರಸ್ತೆಯ ಅವಶ್ಯಕತೆ ತುಂಬಾ ಇದೆ ಕೂಡಲೆ ಮತ್ತೊಮ್ಮೆ ಪರಿಶೀಲಿಸಬೇಕು ಜಿಲ್ಲಾಡಳಿತವು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಗಮನಕ್ಕೆ ತಂದು ಪಟ್ಟಣದಿಂದ



ಉದಯವಾಹಿನಿ ಚಿತ್ರ


ಸೂರತ್ ಚೆನ್ನೈ ರಸ್ತೆಗೆ ಪಟ್ಟಣದಿಂದ ಸಂಪರ್ಕ ಕಲ್ಪಿಸಲು ಕ್ರಮ ಕೈಗೊಳ್ಳಬೇಕು ಒಂದು ವೇಳೆ ವಿಳಂಬ ಮಾಡಿದ್ದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ತಾಲ್ಲೂಕು ಘಟಕ ವಿವಿಧ ಸಂಘಟನೆಗಳು ಹಾಗೂ ಪಟ್ಟಣ ಹಾಗೂ ಸುತ್ತಮುತ್ತಲ ಗ್ರಾಮದ ಸಾರ್ವಜನಿಕರೊಂದಿಗೆ ಸೇರಿ ಉಗ್ರ ಹೋರಾಟ ಮಾಡುವುದಾಗಿ ಕರವೇ ತಾಲ್ಲೂಕು ಅಧ್ಯಕ್ಷ ಅಬ್ದುಲ್ ಚಿಗಾನೂರ,ಸತೀಶ್ ಜಡಿ, ಪೀರ ಸಾಬ್ ಮರಡಿ, ಶ್ರೀನಿವಾಸ ಮಡಿವಾಳ, ಶರಣು ಕುರಿ, ಬಸವರಾಜ,ಕೊದ್ದಡ್ಡಿ, ಸುರೇಶ್ ಬಾಡದ,ದೇವು ವಿಶ್ವಕರ್ಮ, ಮಹೇಶ್ ಕಾಡಮಗೇರ, ಹಣಮಂತ ಹಾಗೂ ಕರವೇ ಮುಖಂಡರು ಎಚ್ಚರಿಸಿದ್ದಾರೆ

# ಪೋಲಿಯೋ ನಿರ್ಮೂಲನೆಯೇ ಮೊದಲ ಆದ್ಯತೆ: ರಾಮಕೃಷ್ಣ

• ಉದಯವಾಹಿನಿ ಸುಳ್ಯ

ವಿಶ್ವದಲ್ಲಿ ಪೋಲಿಯೋ ನಿರ್ಮೂಲನೆ ಮಾಡುವುದು ನಮ್ಮ ಉದ್ದೇಶ. ಆದುದರಿಂದ ಪೋಲಿಯೋ ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ತನಕ ರೋಟರಿಯ ಪ್ರಯತ್ನ ಮುಂದುವರಿಯಲಿದೆ ಎಂದು ರೋಟರಿ ಜಿಲ್ಲಾ ಗವರ್ನರ್ ರಾಮಕೃಷ್ಣ ಪಿ.ಕೆ.ಹೇಳಿದ್ದಾರೆ.

ಸುಳ್ಯ ರೋಟರಿ ಕ್ಲಬ್‌ಗೆ ಅಧಿಕೃತ ಭೇಟಿ ನೀಡಿದ ಸಂದರ್ಭದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಡಿ.21ರಂದು ಪೋಲಿಯೋ ಲಸಿಕೆ ಕಾರ್ಯಕ್ರಮ ನಡೆಯಲಿದೆ ಎಂದ ಅವರು ಭಾರತ 2013ರಲ್ಲಿ ಮುಕ್ತ ಆಗಿದೆ. ಆದರೆ ಜಗತ್ತಿನಲ್ಲಿ ಒಟ್ಟು 39 ಪೋಲಿಯೋ ಕೇಸುಗಳು ಇದೆ. ಪಾಕಿಸ್ತಾನದಲ್ಲಿ 30 ಹಾಗೂ ಅಫಘಾನಿಸ್ತಾನದಲ್ಲಿ 9 ಪೋಲಿಯೋ ಕೇಸುಗಳು ಇದೆ ಎಂದು ಅವರು ಹೇಳಿದರು.



ಉದಯವಾಹಿನಿ ಚಿತ್ರ

ಈ ಪೋಲಿಯೋ ಪಿಡುಗು ಮತ್ತೆ ಹರಡದಂತೆ ಲಸಿಕೆ ಹಾಕಿಸಿ ಎಚ್ಚರಿಕೆ ವಹಿಸುವ ಅಗತ್ಯ ಇದೆ ಎಂದು ಹೇಳಿದರು.

ಸಮಾಜದ ಅಭಿವೃದ್ಧಿಗೆ ರೋಟರಿ ಫೌಂಡೇಶನ್ ವತಿಯಿಂದ ಹಲವಾರು ಸಾಮಾಜಿಕ ಸೇವೆಗಳನ್ನು ಮಾಡುತ್ತಾ ಬಂದಿದೆ. ಪ್ರತಿ ಕ್ಲಬ್ ಕೂಡ ಹಲವು ಸಾಮಾಜಿಕ ಸೇವೆಗಳನ್ನು ನಡೆಸುತಿದೆ. ರೋಟರಿ ಜಿಲ್ಲಾ ವ್ಯಾಪ್ತಿಯಲ್ಲಿ 4 ಕೋಟಿಯ ವಿವಿಧ ಯೋಜನೆಗಳನ್ನು ರೂಪಿಸಿದೆ ಎಂದರು.

ರೋಟರಿ ಕ್ಲಬ್ ಸುಳ್ಯ ಸಿಟಿಗೆ ಸುಳ್ಯ ಸರಕಾರಿ ಆಸ್ಪತ್ರೆಯ ಕಣ್ಣಿನ ಚಿಕಿತ್ಸಾ ವಿಭಾಗದಲ್ಲಿ ಶಸ್ತ್ರಚಿಕಿತ್ಸಾ ವಿಭಾಗಕ್ಕೆ ಮೈಕ್ರೋ ಸ್ಕೋಪ್ ನೀಡುವ ಯೋಜನೆ ಇದೆ ಎಂದರು.

ಸಮಾಜದ ಬೇಡಿಕೆಗೆ ಅನುಸಾರವಾಗಿ ವಿವಿಧ ಮೂಲಭೂತ ಅವಶ್ಯಕತೆಗಳನ್ನು ಪೂರೈಸುತಿದೆ ಎಂದು ಹೇಳಿದರು. ಸುಳ್ಯ ರೋಟರಿ ಕ್ಲಬ್‌ಗೆ ಅಧಿಕೃತ ಭೇಟಿ ಸಂದರ್ಭದಲ್ಲಿ ವಿವಿಧ ಕಾರ್ಯಕ್ರಮದಲ್ಲಿ ಭಾಗವಹಿಸಿದ ಗವರ್ನರ್ ಮಿತ್ತಡ್ಕದ ರೋಟರಿ ಶಾಲಾ ಕ್ಯಾಂಪಸ್‌ನಲ್ಲಿ ನಿರ್ಮಿಸಿದ ಟ್ರಸ್ಟ್ ರೂಮ್, ಶೌಚಾಲಯಗಳ ಉದ್ಘಾಟನೆ ನೆರವೇರಿಸಿದರು.

# ಶತಕದ ಗಡಿಗೆ ಟೊಮ್ಯಾಟೋ ಬೆಲೆ : ಇತ್ತ ಕಣ್ಣೀರಿಡುವಂತೆ ಮಾಡ್ತಿದೆ ಈರುಳ್ಳಿ ದರ, ಕ್ವಿಂಟಾಲ್‌ಗೆ 500 ರೂ.ಗೆ ಕುಸಿತ

• ಉದಯವಾಹಿನಿ ರಾಯಚೂರು

ಒಂದ್ಕಡೆ ಟೊಮ್ಯಾಟೋ ದರ ಗ್ರಾಹಕರ ಜೇಬು ಸುಡುತ್ತಿದ್ರೆ, ಇನ್ನೊಂದ್ಕಡೆ ಈರುಳ್ಳಿ ದರ ರೈತರ ನಿದ್ದೆಗೆಡಿಸುವಂತೆ ಮಾಡಿದೆ. ಬಿಸಿಲನಾಡು ರಾಯಚೂರು ಜಿಲ್ಲೆಯ ರೈತರನ್ನ ಈರುಳ್ಳಿ ದರ ನಿಜಕ್ಕೂ ಕಣ್ಣೀರಿಡುವಂತೆ ಮಾಡಿದೆ.ರಾಯಚೂರು ಜಿಲ್ಲೆಯ ಈರುಳ್ಳಿ ಬೆಳೆಗಾರರ ಬದುಕು ಅಕ್ಷರಶಃ ಈ ಬಾರಿ ಬೀದಿಗೆ ಬಂದಿದೆ. ಬೆಲೆ ಕುಸಿತದಿಂದಾಗಿ ಈರುಳ್ಳಿ ಕಣ್ಣಲ್ಲಿ ನೀರನ್ನೇ ತರಿಸುತ್ತಿದೆ. ದಿನದಿಂದ ದಿನಕ್ಕೆ ಪಾತಾಳಕ್ಕೆ ಕುಸಿಯುತ್ತಿರುವ ಈರುಳ್ಳಿ ಬೆಲೆಯಿಂದಾಗಿ ರೈತರು ತಮ್ಮ ಬೆಳೆಯನ್ನ ಮಾರುಕಟ್ಟೆಗೆ ತರಲು ಹಿಂದೇಟು ಹಾಕುತ್ತಿದ್ದಾರೆ. ಸಾಗಾಟದ ವೆಚ್ಚ, ಕೂಲಿ ಖರ್ಚು ವಾಪಸ್ ಬರಲ್ಲ ಅಂತ ರೈತರು ತಮ್ಮ ಈರುಳ್ಳಿ ಬೆಳೆಯನ್ನು ತಾವೇ ನಾಶ ಮಾಡುತ್ತಿದ್ದಾರೆ. ಟ್ರಯಾಕ್ಟರ್ ರೂಟವೇಟರ್ ನಿಂದ ಭೂಮಿಯೊಳಗಿನ ಈರುಳ್ಳಿ ಗೆಡ್ಡೆಗಳನ್ನ ಹೊರತೆಗೆದು ನಾಶ ಮಾಡುತ್ತಿದ್ದಾರೆ. ಕೂಲಿ, ಗೊಬ್ಬರ, ಕಳೆ ಕೀಟನಾಶಕ ಅಂತ ಎಕರೆಗೆ 70 ರಿಂದ 80 ಸಾವಿರ ರೂ. ಖರ್ಚು ಮಾಡಿದ್ದ ರೈತರ

**ಮಾರುಕಟ್ಟೆಗೆ ತರಲು ಹಿಂದೇಟು**

ಈರುಳ್ಳಿ ಕ್ವಿಂಟಾಲ್‌ಗೆ 500 ರಿಂದ 800 ರೂ. ಮಾತ್ರ ಬೆಲೆ ಸಿಗುತ್ತಿದೆ. ಇನ್ನೂ ತರಕಾರಿ ಮಾರುಕಟ್ಟೆಯಲ್ಲಿ 10 ರಿಂದ 15 ರೂ.ಗೆ ಕೆ.ಜಿ ಮಾರಾಟವಾಗುತ್ತಿದೆ ಎಂದು ರೈತರು ಕಣ್ಣೀರಿಡುತ್ತಿದ್ದಾರೆ.

ಕಳೆದ ವರ್ಷ ಈರುಳ್ಳಿ 2,500 ರಿಂದ 3,000 ರೂ. ಕ್ವಿಂಟಾಲ್ ಮಾರಾಟವಾಗಿತ್ತು. ಈಗ 500 ರಿಂದ 800 ರೂ.ಗೆ ಬಂದಿದ್ದು, ಇನ್ನೂ ಇಳಿಕೆಯಾಗುತ್ತಿದೆ. ಇದರಿಂದ ರೈತರು ನಷ್ಟ ಅನುಭವಿಸುತ್ತಿದ್ದಾರೆ. ಮಾರಾಟಕ್ಕಾಗಿ ಹೆಚ್ಚು ಪ್ರಮಾಣದಲ್ಲಿ ತಂದ ವ್ಯಾಪಾರಿಗಳು ನಷ್ಟ ಅನುಭವಿಸುತ್ತಿದ್ದಾರೆ.

ಗ್ರಾಹಕರು ಮಾತ್ರ ಕಡಿಮೆ ಬೆಲೆಯಲ್ಲಿ ಈರುಳ್ಳಿ ಸಿಗುತ್ತೆ ಅಂತ ನಿಟ್ಟುಸಿರು ಬಿಡುತ್ತಿದ್ದಾರೆ. ಒಟ್ನಲ್ಲಿ, ಈ ಬಾರಿ ಈರುಳ್ಳಿ ಬೆಳೆದವರಿಗೂ ಲಾಭವಿಲ್ಲ, ಮಾರಾಟ ಮಾಡುವವರಿಗೂ ಲಾಭವಿಲ್ಲ. ಕಳೆದ ವರ್ಷ ಬಂಪರ್ ಬೆಳೆ ತೆಗೆದವರು ಈ ಬಾರಿ ಸಾಲಗಾರರಾಗಿದ್ದಾರೆ. ವ್ಯವಸಾಯ ಒಂದು ರೀತಿಯ ಜೂಜಾಟ ಅನ್ನೋ ರೀತಿ ರೈತರು ಕೈ ಸುಟ್ಟುಕೊಂಡಿದ್ದಾರೆ. ಸರ್ಕಾರ ಬೆಂಬಲ ಬೆಲೆ ನೀಡಿ ಈರುಳ್ಳಿ ಖರೀದಿಸಬೇಕು ಅಂತ ರೈತರು ಒತ್ತಾಯಿಸಿದ್ದಾರೆ.

# ಕರ್ನಾಟಕದ ಜೀವದಾತೆಗೆ ಬೇಕಿದೆ ತುರ್ತು ಚಿಕಿತ್ಸೆ: 4 ನದಿಗಳ ನೀರು ಕಲುಷಿತ

## ರಾಜ್ಯದ 14 ನದಿಗಳ ನೀರು ಕುಡಿಯುವುದಕ್ಕೆ ಯೋಗ್ಯವಿಲ್ಲ ಎಂಬ ಆಘಾತಕಾರಿ ವರದಿಯೊಂದನ್ನು ಸಿಪಿಸಿಬಿ ಬಿಡುಗಡೆ ಮಾಡಿದೆ

• ಉದಯವಾಹಿನಿ ಶಿವಮೊಗ್ಗ

ನದಿಗಳನ್ನು ದೈವರೂಪದಲ್ಲಿ ಕಂಡು ಆರಾಧಿಸುವ ದೇಶದಲ್ಲಿಯೇ ಅವುಗಳ ಸ್ಥಿತಿ ಚಿಂತಾಜನಕವಾಗಿದೆ. ರಾಜ್ಯದ 14 ನದಿಗಳ ನೀರು ಕುಡಿಯುವುದಕ್ಕೆ ಯೋಗ್ಯವಿಲ್ಲಎಂಬ ಆಘಾತಕಾರಿ ವರದಿಯೊಂದನ್ನು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ (ಸಿಪಿಸಿಬಿ) ಬಿಡುಗಡೆ ಮಾಡಿದೆ. ಸಿಪಿಸಿಬಿಯಿಂದ 2022-23ರ ವರೆಗೆ ರಾಜ್ಯದ 125 ಸ್ಥಳಗಳಲ್ಲಿ ನೀರಿನ ಗುಣಮಟ್ಟವನ್ನು ಪರಿಶೀಲಿಸಲಾಗಿದೆ. ಅದರಲ್ಲಿ 14 ನದಿಗಳ 67 ಜಾಗಗಳಲ್ಲಿ ನೀರು ಕಲುಷಿತವಾಗಿರುವುದು ಪತ್ತೆಯಾಗಿದೆ. ಈ ನೀರಿನಲ್ಲಿ ಜೀವ ರಾಸಾಯನಿಕ ಆಮ್ಲಜನಕದ ಬೇಡಿಕೆ (ಬಿಒಡಿ) ಮಿತಿಗಿಂತ ಅಧಿಕವಿದ್ದು, ಕೆಲವು ನದಿಗಳ ನೀರು ಬಳಕೆಗೆ ಸೂಕ್ತವಾಗಿಲ್ಲ.

ನೀರಿನಲ್ಲಿ ಬಿಒಡಿ ಮಟ್ಟ ಪ್ರತಿ ಲೀಟರ್‌ಗೆ 0.5ರಿಂದ 1 ಮಿಲಿ ಗ್ರಾಂ ಇದ್ದಲ್ಲಿ ಕುಡಿಯಲು ಯೋಗ್ಯ. ಒಂದುವೇಳೆ, 1 ರಿಂದ 2 ಎಂಜಿ ಇದ್ದರೆ ಅಲ್ಪ ಪ್ರಮಾಣದಲ್ಲಿಮಲಿನ, 3-5 ಎಂಜಿ ಇದ್ದರೆ ಕಲುಷಿತ ಹಾಗೂ 8 ಎಂಜಿಗಿಂತ ಅಧಿಕವಿದ್ದರೆ ಅತೀ ಕಲುಷಿತ ಎಂದು ವಿಶ್ಲೇಷಿಸಲಾಗುತ್ತದೆ. ನಮ್ಮ ರಾಜ್ಯದ ನಾಲ್ಕು ನದಿಗಳು ಅತಿ ಕಲುಷಿತದ ಪಟ್ಟಿಗೆ ಸೇರುತ್ತವೆ.


ಉದಯವಾಹಿನಿ ಚಿತ್ರ

**ಐಸಿಯುನಲ್ಲಿ ನಾಲ್ಕು ನದಿ**

ಅರ್ಕಾವತಿ ನದಿಯ ಐದು ಕಡೆಗಳಲ್ಲಿ ನೀರನ್ನು ಪರೀಕ್ಷಿಸಿದ್ದು, ಹೆಸರಘಟ್ಟ ಜಲಾಶಯದಿಂದ ಕನಕಪುರ ಪಟ್ಟಣದವರೆಗಿನ ನೀರಲ್ಲಿ 72 ಮಿಲಿ ಗ್ರಾಂ ಬಿಒಡಿ ಇರುವುದು ದೃಢಪಟ್ಟಿದೆ. ಭೀಮಾದಲ್ಲಿ 20 ಎಂಜಿ, ದಕ್ಷಿಣ ಪಿನಾಕಿನಿಯಲ್ಲಿ 146 ಎಂಜಿ ಹಾಗೂ ಹೊನ್ನಾಳಿ ಸೇತುವೆ ಬಳಿ ತುಂಗಭದ್ರಾ ನದಿಯ ನೀರಿನಲ್ಲಿ 78 ಎಂಜಿ ಬಿಒಡಿ ಇರುವುದು ವೈಜ್ಞಾನಿಕ ವರದಿಗಳಿಂದ ಪತ್ತೆಯಾಗಿದೆ. ಲೋಕಾಯುಕ್ತ ನ್ಯಾಯಾಲಯ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ನದಿ ಮಾಲಿನ್ಯ ತಡೆಯುವಂತೆ ಸೂಚನೆ ನೀಡಿದರೂ ನಗರದ ಕಲುಷಿತ ನೀರು ನದಿಗೆ ಬಿಡುವುದು ನಿಂತಿಲ್ಲ. ರಾಜಾರೋಷವಾಗಿ ಕೊಳಚೆ ನೀರು ನದಿ ಸೇರುತ್ತಿದೆ. ಇದನ್ನೇ ಮುಂದಿನ ಜಿಲ್ಲೆಗಳು ಕೃಷಿ ಮತ್ತು ಕುಡಿಯುವುದಕ್ಕಾಗಿ ಬಳಸುತ್ತಿವೆ.

ನೀರಿನಲ್ಲಿ ಜೈವಿಕ ಆಮ್ಲಜನಕ ಹೆಚ್ಚಾದಾಗ ನೀರು ಕಲುಷಿತಗೊಳ್ಳುತ್ತದೆ. ಆಮ್ಲಜನಕದ ಕೊರತೆಯಿಂದ ವಿವಿಧ ಬಗೆಯ ಹಾನಿಕಾರಕ ಸೂಕ್ಷ್ಮಾಣು ಜೀವಿಗಳು ಉತ್ಪತ್ತಿ ಆಗುತ್ತವೆ. ಇವುಗಳಿಗೆ ಆಮ್ಲಜನಕದ ಅವಶ್ಯಕತೆ ಇರುವುದಿಲ್ಲ. ಇಂತಹ ಜೀವಿಗಳ ಸಂಖ್ಯೆ ಹೆಚ್ಚಳದಿಂದಾಗಿ ಜಲಮೂಲ ಕೊಳೆಯುವ ಸ್ಥಿತಿಗೆ ತಲುಪುತ್ತವೆ. ಜತೆಗೆ ಸ್ಥಳೀಯ ಜೀವ ಪ್ರಭೇದಗಳು ಕಡಿಮೆಯಾಗುತ್ತವೆ ಎಂದಿದ್ದಾರೆ ಪ್ರೊ.ಕೆ.ಯೋಗೇಂದ್ರ, ಮುಖ್ಯಸ್ಥ, ಪರಿಸರ ವಿಜ್ಞಾನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ.

- ನೀರಿನಲ್ಲಿ ಜೀವ ರಾಸಾಯನಿಕ ಆಮ್ಲಜನಕದ ಬೇಡಿಕೆ (ಬಿಒಡಿ) ಮಿತಿಗಿಂತ ಅಧಿಕವಿದ್ದು, ಕೆಲವು ನದಿಗಳ ನೀರು ಬಳಕೆಗೆ ಸೂಕ್ತವಾಗಿಲ್ಲ.
- ನಮ್ಮ ರಾಜ್ಯದ ನಾಲ್ಕು ನದಿಗಳು ಅತಿ ಕಲುಷಿತದ ಪಟ್ಟಿಗೆ ಸೇರುತ್ತವೆ.
- ನೀರಿನಲ್ಲಿ ಜೈವಿಕ ಆಮ್ಲಜನಕ ಹೆಚ್ಚಾದಾಗ ನೀರು ಕಲುಷಿತಗೊಳ್ಳುತ್ತದೆ

**ತುಂಗೆ ಕಲುಷಿತೆ**

ತುಂಗಾ ನದಿ ನೀರಿನಲ್ಲಿ ಅಲ್ಯೂಮಿನಿಯಂ ಪ್ರಮಾಣ ಪತ್ತೆಯಾದ ಬೆನ್ನಲ್ಲೇ ಅದರೆಡೆಗೆ ಶಿವಮೊಗ್ಗ ಜಿಲ್ಲಾಡಳಿತ, ಮಹಾನಗರ ಪಾಲಿಕೆ ಮತ್ತು ಮಾಲಿನ್ಯ ನಿಯಂತ್ರಣ ಮಂಡಳಿ ಆದಿಯಾಗಿ ವಿವಿಧ ಇಲಾಖೆಗಳು ನಿರಂತರ ನೀರಿನ ಮಾದರಿ ಸಂಗ್ರಹಿಸುವ ಕಾರ್ಯ ಕೈಗೆತ್ತಿಕೊಂಡಿವೆ. ಆದರೆ, ಇದುವರೆಗೆ ಮಾಲಿನ್ಯ ನಿಂತಿಲ್ಲ. ಶಿವಮೊಗ್ಗ ನಗರದಲ್ಲಿ ತುಂಗಾ ನದಿ ನೀರಿನಲ್ಲಿ 8 ಎಂಜಿ ಬಿಒಡಿ ಇರುವುದು ದೃಢಪಟ್ಟಿದೆ.

# ಪಾಕ್‌ನ ಸಿಂಧ್ ಪ್ರಾಂತ್ಯದ ಹಿಂದೂ ವಿದ್ಯಾರ್ಥಿನಿಯರಿಗೆ ಒತ್ತಡ



**ಕರಾಚಿ:** ಸಿಂಧ್ ಪ್ರಾಂತ್ಯದ ಕೆಲವು ಹಿಂದೂ ವಿದ್ಯಾರ್ಥಿನಿಯರು ತಮ್ಮ ವಿದ್ಯಾಭ್ಯಾಸ ಮುಂದುವರಿಸಲು ಇಸ್ಲಾಂಗೆ ಮತಾಂತರವಾಗಬೇಕೆಂಬ ಆರೋಪ ಸಂಬಂಧ ಸರ್ಕಾರ ತನಿಖೆಗೆ ಆದೇಶಿಸಿದೆ ಎಂದು ಅಲ್ಲಿನ ಅಧಿಕಾರಿಯೊಬ್ಬರು ಶುಕ್ರವಾರ ತಿಳಿಸಿದ್ದಾರೆ.

ಸಿಂಧ್‌ನ ಮಿರ್ಪುರ್ ಸಕ್ರೋದಲ್ಲಿರುವ ಸರ್ಕಾರಿ ಪ್ರೌಢಶಾಲೆಯ ಹಿಂದೂ ವಿದ್ಯಾರ್ಥಿನಿಯರ ಪೋಷಕರು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ಶಾಲೆಯ ಮುಖ್ಯೋಪಾಧ್ಯಾಯಿನಿ ಹಿಂದೂ ವಿದ್ಯಾರ್ಥಿನಿಯರು ತಮ್ಮ ವಿದ್ಯಾಭ್ಯಾಸ ಮುಂದುವರಿಸಲು ಇಸ್ಲಾಂಗೆ ಮತಾಂತರಗೊಳ್ಳುವಂತೆ ಒತ್ತಾಯಿಸುತ್ತಿರುವುದಾಗಿ ಆರೋಪಿಸಿದ್ದಾರೆ.

ಹಿಂದೂ ವಿದ್ಯಾರ್ಥಿನಿಯರಿಗೆ ಕಲ್ಮಾ ಪಠಿಸುವಂತೆ ಒತ್ತಾಯಿಸಲಾಗುತ್ತಿದೆ ಮತ್ತು ನಮ್ಮ ನಂಬಿಕೆಗಳನ್ನು ಅಪಹಾಸ್ಯ ಮಾಡಲಾಗುತ್ತಿದೆ.

ಇಸ್ಲಾಂಗೆ ಮತಾಂತರಗೊಳ್ಳಲು, ಕಲ್ಮಾ ಪಠಿಸಲು ನಿರಾಕರಿಸಿದ ಕೆಲವು ವಿದ್ಯಾರ್ಥಿನಿಯರನ್ನು ಮನೆಗೆ ಕಳುಹಿಸಲಾಗಿದೆ ಎಂದು ಪೋಷಕರು ತಿಳಿಸಿದ್ದಾರೆ.

ಧಾರ್ಮಿಕ ಇಲಾಖೆಯ ರಾಜ್ಯ ಸಚಿವ ಖೀಸೊ ಮಲ್ ಖೀಲ್ ದಾಸ್, ಪ್ರಾಂತೀಯ ಶಿಕ್ಷಣ ಸಚಿವರು ಈ ಆರೋಪ ಸಂಬಂಧ ತನಿಖೆಗೆ ಆದೇಶಿಸಿದ್ದಾರೆ ಎಂದು ಗುರುವಾರ ಸೆನೆಟ್‌ಗೆ ತಿಳಿಸಿದ್ದಾರೆ. ಸಿಂಧ್ ಶಿಕ್ಷಣ ಸಚಿವ ಸೈಯದ್ ಸರ್ದಾರ್ ಅಲಿ ಶಾ ಅವರ ವಕ್ತಾರರು ಪ್ರತಿಕ್ರಿಯಿಸಿ, ಮಿರ್ಪುರ್ ಸಕ್ರೊಗೆ ಭೇಟಿ ನೀಡಿ ಆರೋಪದ ಸತ್ಯಾಸತ್ಯತೆ ತಿಳಿಯಲು ಸಮಿತಿಯನ್ನು ರಚಿಸಲಾಗಿದೆ. ಸಮಿತಿ ಸದಸ್ಯರು ಈಗಾಗಲೇ ವಿದ್ಯಾರ್ಥಿನಿಯರು ಮತ್ತವರ ಪೋಷಕರು, ಮುಖ್ಯೋಪಾಧ್ಯಾಯಿನಿ ಮತ್ತು ಇತರ ಶಿಕ್ಷಕರಿಂದ ಹೇಳಿಕೆ ದಾಖಲಿಸಿಕೊಂಡಿದ್ದಾರೆ.

ಮತಾಂತರಕ್ಕೆ ಒತ್ತಾಯಿಸಲು ಯಾರಿಗೂ ಬಲವಂತ ಅಥವಾ ಬೆದರಿಕೆ ಹಾಕಲು ಅವಕಾಶವಿಲ್ಲ ಎಂದು ಹೇಳಿದರು.ಪಾಕಿಸ್ತಾನದ ಸಿಂಧ್ ಪ್ರಾಂತ್ಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಆರ್ಥಿಕವಾಗಿ ಹಿಂದುಳಿದ ಹಿಂದೂ ಸಮುದಾಯದವರಿದ್ದಾರೆ. ಹಿಂದೂ ಯುವತಿಯರನ್ನು ಅಪಹರಿಸಿ ಮುಸ್ಲಿಂ ಪುರುಷರೊಂದಿಗೆ ವಿವಾಹ ಮಾಡಿಸುತ್ತಿರುವ ಪ್ರಕರಣಗಳು ನಡೆಯುತ್ತಿವೆ.

ಪಾಕಿಸ್ತಾನದಲ್ಲಿ ಪ್ರತಿ ವರ್ಷ ಸಾವಿರಕ್ಕೂ ಹೆಚ್ಚು ಅಲ್ಪಸಂಖ್ಯಾತ ಯುವತಿಯರನ್ನು ಬಲವಂತವಾಗಿ ಮತಾಂತರಗೊಳಿಸಲಾಗುತ್ತದೆ ಎಂದು ಮಾನವ ಹಕ್ಕುಗಳ ಸಂಘಟನೆಗಳು ಅಂದಾಜಿಸಿವೆ, ಇದರಲ್ಲಿ ಬಹುಪಾಲು ಸಿಂಧ್‌ನ ದಲಿತ ಹಿಂದೂ ಸಮುದಾಯಕ್ಕೆ ಸೇರಿದವರಾದ್ದಾರೆ. ಒತ್ತಡ ಮತ್ತು ಬೆದರಿಕೆ ಹಾಕಿ ಬಡ ಹಿಂದೂ ಯುವತಿಯರನ್ನು ಬಲವಂತವಾಗಿ ಮತಾಂತರಿಸಿ ಮುಸ್ಲಿಂ ಪುರುಷರೊಂದಿಗೆ ವಿವಾಹ ಮಾಡಿಸಲಾಗುತ್ತಿದೆ. ಈ ಬಲವಂತದ ಮತಾಂತರದ ವಿರುದ್ಧ ಪಾಕಿಸ್ತಾನದಲ್ಲಿ ಕಠಿಣ ಫೆಡರಲ್ ಕಾನೂನುಗಳ ಕೊರತೆಯಿದೆ.

ನಿರೀಕ್ಷೆಯಂತೆಯೇ ಭಾರತೀಯ ರಿಸರ್ವ್ ಬ್ಯಾಂಕ್ ರೆಪೋ ದರವನ್ನು ಇಳಿಕೆ ಮಾಡಿದ್ದು, ಶೇ. 5.5ರಿಂದ ಶೇ. 5.25ಕ್ಕೆ ಇಳಿಕೆಗೊಂಡಿದೆ. ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಅಧ್ಯಕ್ಷತೆಯಲ್ಲಿ ನಡೆದ ಹಣಕಾಸು ನೀತಿ ಸಮಿತಿಯ ಸಭೆಯ ಕೊನೆಯ ದಿನ, ರೆಪೋ ದರವನ್ನು ಕಡಿತಗೊಳಿಸುವ ನಿರ್ಧಾರಕ್ಕೆ ಸರ್ವಸಮ್ಮತಿ ವ್ಯಕ್ತವಾಗಿದೆ. ರೆಪೋ ದರವನ್ನು ಇಳಿಕೆ ಮಾಡುವ ಬಗ್ಗೆ ಆರ್‌ಬಿಐ ನಿನ್ನೆಯೇ ಮುನ್ಸೂಚನೆ ನೀಡಿತ್ತಾದರೂ, ಶುಕ್ರವಾರ ರೆಪೋ ದರವನ್ನು 25 ಬೇಸಿಸ್ ಪಾಯಿಂಟ್‌ಗೆ ಇಳಿಕೆ ಮಾಡಲಾಗಿದೆ.

# ಸಾಲಗಾರರು ನಿರಾಳ

## ರೆಪೋ ದರವನ್ನು 25 ಬೇಸಿಸ್ ಪಾಯಿಂಟ್‌ಗೆ ಇಳಿಕೆ ಮಾಡಿದ ರಿಸರ್ವ್ ಬ್ಯಾಂಕ್











**ಹೊಸದಿಲ್ಲಿ:** ಮಹತ್ವದ ಬೆಳವಣಿಗೆಯೊಂದರಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ), ತನ್ನ ರೆಪೋ ದರವನ್ನು ಶೇ. 5.5ರಿಂ ಶೇ. 5.25ಕ್ಕೆ ಇಳಿಕೆ ಮಾಡಿದೆ. ಆರ್‌ಬಿಐ ಹಣಕಾಸು ನೀತಿ ಸಮಿತಿಯ ಮೂರು ದಿನಗಳ ದ್ವೈಮಾಸಿಕ ಸಭೆ ಬಳಿಕ, ರೆಪೋ ದರವನ್ನು 25 ಬೇಸಿಸ್ ಪಾಯಿಂಟ್‌ಗಳಿಗೆ ಇಳಿಕೆ ಮಾಡುವ ನಿರ್ಧಾರವನ್ನು ಪ್ರಕಟಿಸಲಾಗಿದೆ. ಹಣಕಾಸು ನೀತಿ ಸಮಿತಿಯ ಸಭೆ ಮುಕ್ತಾಯಗೊಳ್ಳುತ್ತಿದ್ದಂತೇ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ, ರೆಪೋ ದರವನ್ನು ಶೇ. 5.5ದಿಂದ ಶೇ. 5.25ಕ್ಕೆ ಇಳಿಸುವ ಕುರಿತು ಎಂಪಿಸಿ ಸಭೆಯಲ್ಲಿ ಸರ್ವಾನುಮತದ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಸ್ಪಷ್ಟಪಡಿಸಿದರು.

ಆರ್‌ಬಿಐ ರೆಪೋ ದರದಲ್ಲಿ ಒಟ್ಟು 25 ಬೇಸಿಸ್ ಪಾಯಿಂಟ್ ಇಳಿಕೆ ಮಾಡಿದ್ದು, ಇದರಿಂದ ಸಾಲಗಾರರು ಕೊಂಚ ನಿರಾಳರಾಗಲಿದ್ದಾರೆ. ಕನಿಷ್ಠ ಮಟ್ಟಕ್ಕೆ ತಲುಪಿದ ರೂಪಾಯಿ ಕುಸಿತಕ್ಕೆ ಹೋಲಿಸಿದರೆ, ಇದು ದಾಖಲೆಯ ಕಡಿಮೆ ಹಣದುಬ್ಬರವನ್ನು ಹೊಂದಿದೆ. ರೆಪೋ ದರದಲ್ಲಿನ ಕಡಿತವು ಚಿಲ್ಲರೆ ಸಾಲಗಾರರಿಗೆ ಕಡಿಮೆ ಸಾಲ ಇಎಂಐ ಗಳಾಗಿ ಪರಿವರ್ತನೆಯಾಗುವ ನಿರೀಕ್ಷೆಯಿದೆ.

2025ರ ಕೊನೆಯ ತಿಂಗಳಲ್ಲಿ ಭೌಗೋಳಿಕ ರಾಜಕೀಯ ಮತ್ತು ವ್ಯಾಪಾರ ಅನಿಶ್ಚಿತತೆಗಳಿಂದ ಉದ್ಭವಿಸುವ ಸವಾಲುಗಳ ಹೊರತಾಗಿಯೂ, ಪ್ರಸ್ತುತ ಹಣಕಾಸು ವರ್ಷವು ಬಲವಾದ ಬೆಳವಣಿಗೆ ಮತ್ತು ಸೌಮ್ಯವಾದ ಹಣದುಬ್ಬರವನ್ನು ಕಂಡಿದೆ .ಆರ್‌ಬಿಐ ನಿಲುವು ತಟಸ್ಥವಾಗಿದೆ ಮತ್ತು ಅದು ಹೊಸ ವರ್ಷವನ್ನು ಹೊಸ ಭರವಸೆ, ಚೈತನ್ಯ ಮತ್ತು ದೃಢಸಂಕಲ್ಪದೊಂದಿಗೆ ಬರಮಾಡಿಕೊಳ್ಳಲಿದೆ ಎಂದು ಗವರ್ನರ್ ಸಂಜಯ್ ಮಲ್ಹೋತ್ರಾ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. ಹಣದುಬ್ಬರ ಕಡಿಮೆಯಾಗುತ್ತಿರುವುದರಿಂದ, ಎಂಪಿಸಿಯು ಕಳೆದ ಜೂನ್‌ನಲ್ಲಿ ಪ್ರಮುಖ ಸಾಲ ದರವನ್ನು ಶೇ. 6ರಿಂದ ಶೇ.5.5ಕ್ಕೆ ಇಳಿಕೆ ಮಾಡಿತ್ತು. ಇದೀಗ ರೆಪೋ ದರವನ್ನು ಶೇ. 5.25ಕ್ಕೆ ಇಳಿಸುವ ಮೂಲಕ ಸಾಲವನ್ನು ಮತ್ತಷ್ಟು ಅಗ್ಗವಾಗಿಸಿದೆ.

ಹಣದುಬ್ಬರವು ರೆಪೋ ದರದ ಮೇಲೆ ಪರಿಣಾಮ ಬೀರುತ್ತದೆ. ಹೀಗಾಗಿ ಹಣದುಬ್ಬರ ಏರಿಕೆ ಮತ್ತು ಇಳಿಕೆಯ ವೇಗವನ್ನು ಗಮನದಲ್ಲಿಟ್ಟುಕೊಂಡು ರೆಪೋ ದರವನ್ನು ಇಳಿಕೆ ಮಾಡಲಾಗಿದೆ. ಇತ್ತೀಚೆಗೆ ಚಿಲ್ಲರೆ ಹಣದುಬ್ಬರ ಕನಿಷ್ಠ ಮಟ್ಟಕ್ಕೆ ಇಳಿದಿದ್ದು ಬೆಲೆಯ ಮೇಲೆ ಸ್ಥಿರತೆ ಕಾಯ್ದುಕೊಳ್ಳಲು ಆರ್ ಬಿಐ ಸಾಕಷ್ಟು ಅವಕಾಶ ನೀಡಿದೆ. ಹೀಗಾಗಿ ದೇಶದ ಆರ್ಥಿಕತೆಯು ಉತ್ತಮವಾಗಿಯೇ ಕಾರ್ಯನಿರ್ವಹಿಸುತ್ತಿದೆ.ರೆಪೋ ದರ ಇಳಿಕೆ ನಿರ್ಧಾರ ಪ್ರಕಟಿಸಿದ ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ, ರೆಪೋ ದರದ ಬಗ್ಗೆ ಚರ್ಚಿಸಲು ಡಿಸೆಂಬರ್ ಕಳೆದ ಮೂರು ದಿನಗಳಿಂದ ಸಭೆ ನಡೆಯುತ್ತಿದೆ. ಬೆಳವಣಿಗೆ ಕಾಣುತ್ತಿರುವ ಆರ್ಥಿಕ ಪರಿಸ್ಥಿತಿಗಳು ಮತ್ತು ಭವಿಷ್ಯದ ದೃಷ್ಟಿಕೋನವನ್ನು ಅವಲಂಭಿಸಿ ರೆಪೋ ದರವನ್ನು 25 ಬೇಸಿಸ್ ಪಾಯಿಂಟ್ ಗಳಿಂದ ಶೇ. 5.25ಕ್ಕೆ ಇಳಿಸಲು ಎಂಪಿಸಿ ಸರ್ವಾನುಮತದಿಂದ ನಿರ್ಣಯ ಮಾಡಿದ್ದು ಇದು ತಕ್ಷಣದಿಂದ ಜಾರಿಯಾಗಲಿದೆ ಎಂದು ಅವರು ತಿಳಿಸಿದರು.ಹಣಕಾಸು ವರ್ಷದ ಎರಡನೇ ತ್ರೈಮಾಸಿಕದಲ್ಲಿ ಜಿಡಿಪಿಯಲ್ಲಿ ಶೇ. 8.2ರಷ್ಟು ಬೆಳವಣಿಗೆಯಾಗಿದೆ. ಅಲ್ಪ ಪ್ರಮಾಣದ ಹಣದುಬ್ಬರದ ಪರಿಣಾಮ ಇದರ ಮೇಲೆ ಬಿದ್ದಿದೆ. ಕಳೆದ ಅಕ್ಟೋಬರ್‌ನಲ್ಲಿ ಚಿಲ್ಲರೆ ಮಾರುಕಟ್ಟೆ ಮೇಲೆ ಹಣ ದುಬ್ಬರದ ಪ್ರಭಾವ ಶೇ. 0.25ರಷ್ಟಾಗಿದೆ. ಇದು ದಾಖಲೆಯ ಕನಿಷ್ಠ ಮಟ್ಟವಾಗಿದೆ.

### ಏನಿದು ರೆಪೋ ದರ..

ರಿಸರ್ವ್ ಬ್ಯಾಂಕ್ ನಿಂದ ವಾಣಿಜ್ಯ ಬ್ಯಾಂಕ್‌ಗಳು ಪಡೆಯುವ ಅಲ್ಪಾವಧಿ ಸಾಲದ ಮೇಲಿನ ಬಡ್ಡಿ ದರಕ್ಕೆ ರೆಪೋ ದರ ಎನ್ನಲಾಗುತ್ತದೆ. ರೆಪೋ ದರ ಕಡಿಮೆಯಾದರೆ ಬ್ಯಾಂಕ್‌ಗಳಿಗೆ ಕಡಿಮೆ ಬಡ್ಡಿ ದರದಲ್ಲಿ ಹೆಚ್ಚಿನ ಸಾಲಸೌಲಭ್ಯ ದೊರೆಯುತ್ತದೆ. ರೆಪೋ ರೇಟ್ ಹೆಚ್ಚಾದರೆ ಬ್ಯಾಂಕ್‌ಗಳುನೀಡುವ ಸಾಲದ ಮೇಲಿನ ಬಡ್ಡಿ ದರದಲ್ಲಿ ಹೆಚ್ಚಳವಾಗುತ್ತದೆ.

ಇದರಿಂದ ವಾಹನ, ಗೃಹ ಸಾಲಗಳ ಬಡ್ಡಿ ದರದಲ್ಲಿ ಹೆಚ್ಚಳವಾಗುತ್ತದೆ.

ಅಕ್ಟೋಬರ್ 1ರಿಂದ ರೆಪೋ ದರವನ್ನು ಶೇಕಡಾ 5.5ರಷ್ಟು ಕಾಯ್ದುಕೊಂಡಿರುವ ಆರ್ ಬಿಐ ಇದೀಗ ವರ್ಷಾಂತ್ಯದಲ್ಲಿ ರೆಪೋ ದರವನ್ನು ಇಳಿಕೆ ಮಾಡಿದೆ. ಜಿಡಿಪಿ ಬಲವಾಗಿರುವಾಗ ಹಣದುಬ್ಬರವು ಇಳಿಕೆಯಾಗುವ ನೀರಿಕ್ಷೆಯಿಂದ ರೆಪೋ ದರ ಇಳಿಸಲಾಗಿದೆ ಎಂದು ಎಂದು ಆರ್ಥಿಕ ತಜ್ಞರು ತಿಳಿಸಿದ್ದಾರೆ.

ಬ್ಲೂಮ್‌ಬರ್ಗ್ ನಡೆಸಿರುವ ಸಮೀಕ್ಷೆ ಪ್ರಕಾರ ಹೆಚ್ಚಿನ ಆರ್ಥಿಕ ತಜ್ಞರು ಹಣದುಬ್ಬರವು ಶೇ. 4ಕ್ಕಿಂತ ಕಡಿಮೆಯಿರುವುದರಿಂದ ಆರ್‌ಬಿಐ ರೆಪೋ ದರವನ್ನು ಶೇ. 5.25ಕ್ಕೆ ಇಳಿಸುತ್ತಾರೆ ಎಂದು ನಿರೀಕ್ಷೆ ವ್ಯಕ್ತಪಡಿಸಿದ್ದರು. ಭಾರತದ ಆರ್ಥಿಕತೆ ವೇಗವಾಗಿ ವಿಸ್ತರಿಸುತ್ತಿರುವುದರಿಂದ ಡಾಲರ್ ಎದುರು ರೂಪಾಯಿ ಮೌಲ್ಯ 90ಕ್ಕಿಂತ ಕಡಿಮೆ ದಾಖಲೆಯ ಕನಿಷ್ಠ ಮಟ್ಟಕ್ಕೆ ಇಳಿದಿದೆ. ಹೀಗಾಗಿ ರೆಪೋ ದರವನ್ನು ಕೂಡ ಆರ್‌ಬಿಐ ಕನಿಷ್ಠ ಮಟ್ಟಕ್ಕೆ ಇಳಿಸಿದೆ.

# ಹಿಂದಿ-ಉರ್ದು ಭಾಷಿಗರನ್ನು ಪಾಕ್‌ಗೆ ಕಳಿಸಬೇಕು: ಸಂಸದೆ ಆಕ್ರೋಶ



**ನವದೆಹಲಿ:** ಲೋಕಸಭೆಯಲ್ಲಿ ತೃಣಮೂಲ ಕಾಂಗ್ರೆಸ್ ಮತ್ತು ಬಿಜೆಪಿ ಸದಸ್ಯರ ನಡುವೆ ವಾಕ್ಸಮರ ನಡೆಯಿತು. ಟಿಎಂಸಿ ಸಂಸದೆ ಶತಾಬ್ದಿ ರಾಯ್ ಬಾಂಗ್ಲಾ ಮಾತನಾಡುವ ಜನರನ್ನು ಬಾಂಗ್ಲಾದೇಶಕ್ಕೆ ಗಡೀಪಾರು ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಸಂಸತ್ ಅಧಿವೇಶನದ ಐದನೇ ದಿನ ಲೋಕಸಭೆಯಲ್ಲಿ ಭಾಷೆಯ ಬಗ್ಗೆ ಚರ್ಚೆ ನಡೆಯಿತು. ಬಾಂಗ್ಲಾ ಮಾತನಾಡುವ ಕಾರ್ಮಿಕರನ್ನು ಬಾಂಗ್ಲಾದೇಶೀಯರು ಎಂದು ಹಣೆಪಟ್ಟಿ ಕಟ್ಟಿ, ಬಂಧಿಸಿ, ಅವರನ್ನು ಬಾಂಗ್ಲಾದೇಶಕ್ಕೆ ಕಳುಹಿಸುವುದಾಗಿ ಬೆದರಿಕೆ ಹಾಕುವ ಮೂಲಕ ಒಡಿಶಾ ಸರ್ಕಾರವು ಅವರನ್ನು ಕೆಟ್ಟದಾಗಿ ನಡೆಸಿಕೊಳ್ಳುತ್ತಿದೆ ಎಂದು ಟಿಎಂಸಿ ಸಂಸದ ಶತಾಬ್ದಿ ರಾಯ್ ಆರೋಪಿಸಿದರು.

ಬಾಂಗ್ಲಾ ಮಾತನಾಡುತ್ತಾರೆ ಎಂಬ ಕಾರಣಕ್ಕಾಗಿ ಯಾರನ್ನೇ ಆಗಲಿ ಬಾಂಗ್ಲಾದೇಶಿ ಎಂದು ಹಣೆಪಟ್ಟಿ ಕಟ್ಟಿ ಅವರನ್ನು ನುಸುಳುಕೋರರು ಎಂದು ಹೇಗೆ ಗಡೀಪಾರು ಮಾಡುತ್ತಾರೆ ಎಂದು ಸಂಸದ ಶತಾಬ್ದಿ ರಾಯ್ ಪ್ರಶ್ನಿಸಿದರು. ಬಾಂಗ್ಲಾ ಮಾತನಾಡುವವರು ಬಾಂಗ್ಲಾದೇಶಕ್ಕೆ ಹೋಗಬೇಕು ಎಂದಾದರೆ, ಹಿಂದಿ-ಉರ್ದು ಭಾಷಿಕರನ್ನು ಪಾಕಿಸ್ತಾನಕ್ಕೆ ಕಳುಹಿಸಬೇಕಾ ಶೂನ್ಯ ಸಮಯದಲ್ಲಿ ಒಡಿಶಾದಲ್ಲಿ ವ್ಯಕ್ತಿಯೊಬ್ಬನನ್ನು ಗಡೀಪಾರು ಮಾಡುವ ವಿಷಯವನ್ನು ಅವರು ಎತ್ತಿದರು. ಸಮಯದ ಕೊನೆಯಲ್ಲಿ ಶತಾಬ್ದಿ ರಾಯ್ ಮೈಕ್ರೊಫೋನ್ ಆಫ್ ಮಾಡಿದಾಗ ಮತ್ತೊಂದು ನಾಟಕ ನಡೆಯಿತು.

ಶತಾಬ್ದಿ ರಾಯ್ ಮತ್ತು ಅವರ ಸಹ ಸಂಸದೆ ಮಹುವಾ ಮೊಯಿತ್ರಾ ಕೋಪದಿಂದ ಖಜಾನೆ ಪೀಠದ ಕಡೆಗೆ ಓಡಿಹೋಗಿ ಅಲ್ಲಿ ಬಿಜೆಪಿ ಸಂಸದ ಜುಗಲ್ ಕಿಶೋರ್ ಅವರ ಆಸನದ ಬಳಿ ನಿಂತ ಅವರ ಮೈಕ್ರೊಫೋನ್‌ನಲ್ಲಿ ಮಾತನಾಡಲು ಪ್ರಾರಂಭಿಸಿದರು.

ಅಧ್ಯಕ್ಷರು ಅವರನ್ನು ತಮ್ಮ ಸ್ಥಾನಗಳಿಗೆ ಹಿಂತಿರುಗಲು ಹೇಳಿದರು. ಬಿಜೆಪಿ ಸಂಸದೆ ಜಗದಾಂಬಿಕಾ ಪಾಲ್ ಕೂಡ ಅವರನ್ನು ಸಮಾಧಾನಪಡಿಸಲು ಪ್ರಯತ್ನಿಸಿದರು. ತಮ್ಮ ಭಾಷಣವನ್ನು ಪೂರ್ಣಗೊಳಿಸುವಾಗ, ಶತಾಬ್ದಿ ರಾಯ್ ವಿವಾದಾತ್ಮಕ ಹೇಳಿಕೆ ನೀಡಿದರು. ಬಾಂಗ್ಲಾ ಭಾಷಿಕರನ್ನು ಬಾಂಗ್ಲಾದೇಶಕ್ಕೆ ಕಳುಹಿಸಬಹುದಾದರೆ, ಹಿಂದಿ ಮತ್ತು ಉರ್ದು ಮಾತನಾಡುವ ಬಿಜೆಪಿ ಸದಸ್ಯರನ್ನು ಪಾಕಿಸ್ತಾನಕ್ಕೆ ಕಳುಹಿಸಬೇಕು ಎಂದು ಅವರು ಹೇಳಿದರು. ಹೇಳಿಕೆಯು ಸದನದಲ್ಲಿ ಮತ್ತೊಂದು ಕೋಲಾಹಲಕ್ಕೆ ಕಾರಣವಾಯಿತು. ಪುರಿ ಸಂಸದ ಸಂಬಿತ್ ಪಾತ್ರ ಶತಾಬ್ದಿ ರಾಯ್ ಅವರ ಪ್ರಶ್ನೆ ಮತ್ತು ಆರೋಪಕ್ಕೆ ಪ್ರತಿಕ್ರಿಯಿಸಿದರು. ಯಾರನ್ನೂ ಹೆಸರಿಸದೆ, ಟಿಎಂಸಿ ಸಂಸದರ ಆರೋಪಗಳು ಸಂಪೂರ್ಣವಾಗಿ ಆಧಾರರಹಿತ ಮತ್ತು ಸುಳ್ಳು ಎಂದು ಹೇಳಿದರು.

# ಭೀಕರ ಅಪಘಾತದಲ್ಲಿ ಐವರು ಸಾವು



**ಡೆಹ್ರಾಡೂನ್:** ಉತ್ತರಾಖಂಡದ ಲೋಹಘಾಟ್ ಪ್ರದೇಶದಲ್ಲಿ ಶುಕ್ರವಾರ ಮದುವೆಗೆ ತೆರಳುತ್ತಿದ್ದ ಜೀಪೊಂದು ಆಳವಾದ ಕಂದಕಕ್ಕೆ ಉರುಳಿ ಬಿದ್ದಿದ್ದು, ಭೀಕರ ಅಪಘಾತದಲ್ಲಿ ಐವರು ಸಾವನ್ನಪ್ಪಿದ್ದಾರೆ ಮತ್ತು ಐವರು ಗಾಯಗೊಂಡಿದ್ದಾರೆ.

ಜಿಲ್ಲಾ ವಿಪತ್ತು ನಿಯಂತ್ರಣ ಕೊಠಡಿಯ ಪ್ರಕಾರ, ಕುಟುಂಬವೊಂದು ಮದುವೆ ಕಾರ್ಯಕ್ರಮ ಮುಗಿಸಿ ಮಹೀಂದ್ರಾ ಬೊಲೆರೊ ಜೀಪಿನಲ್ಲಿ ಹಿಂತಿರುಗುತ್ತಿದ್ದಾಗ ರಾಷ್ಟ್ರೀಯ ಹೆದ್ದಾರಿಯ ಬರಾಕೋಟ್ ಬಳಿ ಚಾಲಕನ ನಿಯಂತ್ರಣ ಕಳೆದುಕೊಂಡು ಕಂದಕಕ್ಕೆ ಉರುಳಿದೆ ಎಂದು ವರದಿಯಾದೆ.

ಬರಾಕೋಟ್ ಬಳಿಯ ಬಾಗ್ಧರ್ ಬಳಿ ಈ ಅಪಘಾತ ಸಂಭವಿಸಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.ಪೊಲೀಸರು ಮತ್ತು ಎಸ್‌ಡಿಆರ್‌ಎಫ್ ತಂಡಗಳು ತಕ್ಷಣ ರಕ್ಷಣಾ ಕಾರ್ಯಾಚರಣೆ ಪ್ರಾರಂಭಿಸಿದವು. ಆಳವಾದ ಕಂದಕದಿಂದ ಮೃತರನ್ನು ಹೊರತೆಗೆಯುವುದು ಅತ್ಯಂತ ಸವಾಲಿನ ಕೆಲಸ ಎಂದು ಎಸ್‌ಡಿಆರ್‌ಎಫ್ ಕಮಾಂಡೆಂಟ್ ಅರ್ಪಣ್ ಯದುವಂಶಿ ಹೇಳಿದ್ದಾರೆ. ಆದರೆ ನಿರಂತರ ಪ್ರಯತ್ನಗಳ ನಂತರ ಎಲ್ಲರನ್ನೂ ಹೊರತೆಗೆಯಲಾಗಿದೆ.

ಮೃತರನ್ನು ರುದ್ರಪುರದ ಸುಭಾಷನಗರದ ಪ್ರಕಾಶ್ ಚಂದ್ ಉನಿಯಾಲ್ (40); ಕೇವಲ್ ಚಂದ್ರ ಉನಿಯಾಲ್ (35); ಸುರೇಶ್ ನೌಟಿಯಾಲ್ (32); ಭಾವನಾ ಚೌಬೆ (28); ಮತ್ತು ಅವರ ಆರು ವರ್ಷದ ಮಗ ಪ್ರಿಯಾಂಶು ಚೌಬೆ ಎಂದು ಗುರುತಿಸಲಾಗಿದೆ. ಗಾಯಗೊಂಡವರಲ್ಲಿ ಚಾಲಕ, ಅಲ್ಮೋರಾದ ಸೆರಾಘಾಟ್‌ನ ದೇವಿದತ್ ಪಾಂಡೆ(38); ರುದ್ರಾಪುರದ ಧೀರಜ್ ಉನಿಯಾಲ್ (12); ಗಂಗೊಳ್ಳಿಹಾಟ್‌ನ ಬ್ಯಾಂಕೋಟ್‌ನ ರಾಜೇಶ್ ಜೋಶಿ(14); ದೆಹಲಿಯ ಚೇತನ್ ಚೌಬೆ (5); ಮತ್ತು ಗಂಗೊಳ್ಳಿಹಾಟ್ ನ ಸೇರಘಟ್ಟದ ಭಾಸ್ಕರ್ ಪಾಂಡವ ಎಂದು ಗುರುತಿಸಲಾಗಿದ್ದು, ಅವರನ್ನು ಲೋಹಘಾಟ್ ಉಪಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಇಚಿಂತಾಜನಕವಾಗಿದೆ.

# ನಕಲಿ ವೀಸಾದಿಂದ ನೇಪಾಳ ಹೋಗಲು ಯತ್ನಿಸುತ್ತಿದ್ದ ಕೆನಡಾ ಪ್ರಜೆ ಬಂಧನ

**ಮಹಾರಾಜಗಂಜ್:** ಭಾರತ-ನೇಪಾಳ ಗಡಿಯಲ್ಲಿರುವ ಸೋನೌಲಿ ವಲಸೆ ಚೆಕ್‌ಪೋಸ್ಟ್‌ನಲ್ಲಿ ಮಾನ್ಯ ವೀಸಾ ಇಲ್ಲದೆ ನೇಪಾಳಕ್ಕೆ ಪ್ರವೇಶಿಸಲು ಯತ್ನಿಸಿದ ಕೆನಡಾದ ಪ್ರಜೆಯನ್ನು ಬಂಧಿಸಲಾದೆ. ವಿಮಲ್ ಡ್ಯಾನ್‌ಎಂದು ಗುರುತಿಸಲಾದ ಈ ವ್ಯಕ್ತಿಯನ್ನು ಗಡಿ ಗೇಟ್‌ನಲ್ಲಿ ಸಶಸ್ತ್ರ ಸೀಮಾ ಬಲ್ (ಎಸ್‌ಎಸ್‌ಬಿ) ಸಿಬ್ಬಂದಿ ಟ್ಯಾಕ್ಸಿಯಲ್ಲಿ ನೇಪಾಳದಿಂದ ಭಾರತಕ್ಕೆ ಪ್ರಯಾಣಿಸುತ್ತಿದ್ದಾಗ ತಡೆದು ಪರಿಶೀಲನೆಗಾಗಿ ವಲಸೆ ಅಧಿಕಾರಿಗಳಿಗೆ ಹಸ್ತಾಂತರಿಸಲಾಗಿದೆ ಎಂದು ಅವರು ಹೇಳಿದರು. ವಿಚಾರಣೆಯ ಸಮಯದಲ್ಲಿ,

ಅವರು ಮೂಲತಃ ಪಂಜಾಬ್‌ನ ಮೊಹಾಲಿಯ ನಿವಾಸಿ ಎಂದು ಬಹಿರಂಗಪಡಿಸಿದರು. ಅವರ ಪಾಸ್‌ಪೋರ್ಟ್‌ನಲ್ಲಿ ದೆಹಲಿ ವಿಮಾನ ನಿಲ್ದಾಣದ ವಲಸೆ ಕಚೇರಿಯ ನಕಲಿ ಮುದ್ರೆ ಕಂಡುಬಂದಿದೆ ಎಂದು ವಲಸೆ ಮತ್ತು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಅವರು ನಕಲಿ ವಲಸೆ ಮುದ್ರೆಯನ್ನು ಬಳಸಿಕೊಂಡು ನೇಪಾಳದ ಮೂಲಕ ಕೆನಡಾಕ್ಕೆ ಪ್ರಯಾಣಿಸಲು ತಯಾರಿ ನಡೆಸುತ್ತಿದ್ದರು.

ಅವರು ಕೆನಡಾದ ಪಾಸ್‌ಪೋರ್ಟ್ ಹೊಂದಿದ್ದರೂ, ಅವರು ಭಾರತಕ್ಕೆ ಮಾನ್ಯ ವೀಸಾ ಹೊಂದಿಲ್ಲ ಎಂದು ಸೋನೌಲಿ ಅಜೀತ್ ಪ್ರತಾಪ್ ಸಿಂಗ್ ಹೇಳಿದ್ದಾರೆ.

# ಅನಾಥರಿಗೆ ಶೇ.1 ರಷ್ಟು ಮೀಸಲಾತಿ ಐತಿಹಾಸಿಕ



**ಮುಂಬೈ:** ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರು ಶಿಕ್ಷಣ ಮತ್ತು ಉದ್ಯೋಗದಲ್ಲಿ ಅನಾಥರಿಗೆ ಶೇ. 1ರಷ್ಟು ಮೀಸಲಾತಿ ನೀಡುವ ರಾಜ್ಯ ಸರ್ಕಾರದ ನೀತಿಯನ್ನು ಐತಿಹಾಸಿಕ ಎಂದು ಬಣ್ಣಿಸಿದ್ದಾರೆ ಮತ್ತು ಇದು ನಿಜವಾದ ಸಾಮಾಜಿಕ ಪರಿವರ್ತನೆ ಮತ್ತು ಸಮಾನತೆಯತ್ತ ಒಂದು ಪ್ರಮುಖ ಹೆಜ್ಜೆ ಎಂದು ಹೇಳಿದ್ದಾರೆ. ಎರಡನೇ ಬಾರಿ ಸಿಎಂ ಆಗಿ ಅಧಿಕಾರ ವಹಿಸಿಕೊಂಡ ಮೊದಲ ವಾರ್ಷಿಕೋತ್ಸವದ ಅಂಗವಾಗಿ ಫಡ್ನವೀಸ್ ಅವರು 2018ರಲ್ಲಿ ಮುಖ್ಯಮಂತ್ರಿಯಾಗಿದ್ದ ಹಿಂದಿನ ಅವಧಿಯಲ್ಲಿ ಪರಿಚಯಿಸಿದ ಈ ನೀತಿಯ ಫಲಾನುಭವಿಗಳೊಂದಿಗೆ ಸಂವಾದ ನಡೆಸಿದರು ಮತ್ತು ಇದು ಡಾ. ಬಿ.ಆರ್. ಅಂಬೇಡ್ಕರ್ ಅವರ ಸಮಾನ ಅವಕಾಶದ ತತ್ವದಲ್ಲಿ ಬೇರೂರಿದೆ ಎಂದು ಹೇಳಿದರು.

ಅನಾಥ ಯುವಕರಿಗೆ ಮೀಸಲಾತಿ ನೀಡುವ ನೀತಿಯು ತಮ್ಮ ಜೀವನದ ಅತ್ಯಂತ ಭಾವನಾತ್ಮಕವಾಗಿ ನಿರ್ಧಾರವಾಗಿದೆ ಎಂದು ಫಡ್ನವೀಸ್ ಹೇಳಿದರು. 862 ಫಲಾನುಭವಿಗಳು ಈಗ ಸ್ವಾವಲಂಬಿಗಳಾಗಿದ್ದಾರೆ ಮತ್ತು ಸಮಾಜಕ್ಕೆ ಕೊಡುಗೆ ನೀಡುತ್ತಿದ್ದಾರೆ ಎಂದು ಮಹಾ ಸಿಎಂ ತಿಳಿಸಿದರು.

ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಒಂದು ವರ್ಷದ ನಂತರ, ನಡೆಯುತ್ತಿರುವ ಕಾರ್ಯಕ್ರಮ ಒಂದು ಸುಂದರ ಆರಂಭವಾಗಿದೆ. ಸರ್ಕಾರದಲ್ಲಿ ಅನೇಕ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುತ್ತದೆ. ಅನೇಕ ಕೆಲಸಗಳು ಪೂರ್ಣಗೊಳ್ಳುತ್ತವೆ. ಆದರೆ ಕೆಲವು ನಿಜವಾಗಿಯೂ ಹೃದಯವನ್ನು ತಟ್ಟುತ್ತವೆ.

# ಕಬ್ಬು ಬೆಳೆಗಾರರ ಸಮಸ್ಯೆ ರಾಜ್ಯಸಭೆಯಲ್ಲಿ ಪ್ರಸ್ತಾಪಿಸಿದ ಸಂಸದ



**ನವದೆಹಲಿ:** ಸಕ್ಕರೆ ಉದ್ಯಮಕ್ಕೆ ಸಂಬಂಧಿಸಿದಂತೆ ಕಬ್ಬಿನ ರಿಕವರಿ ದರ ಇಳಿಕೆ ಮಾಡುವುದು, ಕಬ್ಬು ಕಟಾವು ಮತ್ತು ಸಾರಿಗೆ ಹೊರತುಪಡಿಸಿ ಎಫ್‌ಆರ್‌ಪಿ ದರ ನಿಗಧಿ ಸಕ್ಕರೆಯ ಎಂಎಸ್‌ಪಿ ದರವನ್ನು ಹೆಚ್ಚಿಗೆ ಮಾಡುವುದು ಹಾಗೂ ಕರ್ನಾಟಕಕ್ಕೆ ಎಥೆನಾಲ್ ಮಾರಾಟಕ್ಕೆ ಹೆಚ್ಚಿನ ಅವಕಾಶ ನೀಡಬೇಕೆಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಆಗ್ರಹಿಸಿದರು. ಸಂಸತ್ತಿನ ಚಳಿಗಾಲ ಅಧಿವೇಶನದ ಶೂನ್ಯ ವೇಳೆಯಲ್ಲಿ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದರು. ದೇಶದ ಕೃಷಿ ಆಧಾರಿತ ಪ್ರಮುಖ ವಲಯದಲ್ಲಿ ಸಕ್ಕರೆ ಉದ್ಯಮವು ಒಂದು ದೊಡ್ಡ ಉದ್ಯಮವಾಗಿದೆ. ಇದು ಕೋಟ್ಯಂತರ ಜನ ರೈತರು, ಕಾರ್ಮಿಕರು, ವ್ಯಾಪಾರಿಗಳು ಮತ್ತು ಉದ್ಯಮಿಗಳು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ತಮ್ಮ ಜೀವನೋಪಾಯವನ್ನು ಇದರಲ್ಲಿ ಕಂಡುಕೊಂಡಿದ್ದಾರೆ.

ಕರ್ನಾಟಕ ರಾಜ್ಯದಲ್ಲಿ 81 ಸಕ್ಕರೆ ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿವೆ. ರೈತರ ಕಠಿಣ ಪರಿಶ್ರಮದ ಫಲವಾಗಿ ದೇಶದ ಸಕ್ಕರೆ ಉತ್ಪಾದನೆಯಲ್ಲಿ ಕರ್ನಾಟಕ ರಾಜ್ಯವು ಮೂರನೇ ಸ್ಥಾನದಲ್ಲಿದೆ. ದೇಶದ ಒಟ್ಟು ಸಕ್ಕರೆ ಉತ್ಪಾದನೆಯಲ್ಲಿ ಶೇಕಡಾ 16% ರಷ್ಟು ಕರ್ನಾಟಕದಲ್ಲಿಯೇ ಉತ್ಪಾದನೆಯಾಗುತ್ತದೆ. ರಾಜ್ಯದಲ್ಲಿ ಸುಮಾರು 7.5 ಲಕ್ಷ ಹೆಕ್ಟರ್ ಪ್ರದೇಶದಲ್ಲಿ ಕಬ್ಬು ಬೆಳೆಯಲಾಗುತ್ತಿದ್ದು, ಇದರಿಂದ ಸುಮಾರು 45 ಲಕ್ಷ ಮೆಟ್ರಿಕ್ ಟನ್‌ಗಳಷ್ಟು ಸಕ್ಕರೆ ಉತ್ಪಾದಿಸಲಾಗುತ್ತದೆ. ಸುಮಾರು 270 ಕೋಟಿ ಲೀಟರ್ ಎಥೆನಾಲ್ ಉತ್ಪಾದಿಸುವುದರ ಜೊತೆಗೆ ಬಹಳ ದೊಡ್ಡ ಪ್ರಮಾಣದಲ್ಲಿ ಬೆಲ್ಲ ಉತ್ಪಾದನೆ ಕೂಡಾ ಮಾಡಲಾಗುತ್ತದೆ ಎಂದು ತಿಳಿಸಿದರು.

ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ರೈತರ ಕಲ್ಯಾಣಕ್ಕೆ ಬದ್ಧವಾಗಿದೆ. ರೈತರ ಕಠಿಣ ಪರಿಶ್ರಮಕ್ಕೆ ತಕ್ಕ ಆದಾಯ ನೀಡುವ ಹಿನ್ನೆಲೆಯಲ್ಲಿ ಸುಮಾರು 23 ಬೆಳೆಗಳಿಗೆ ಬೆಂಬಲ ಬೆಲೆ ಘೋಷಿಸಲಾಗಿದೆ. ಜೊತೆಗೆ ಕಬ್ಬಿನ ಬೆಳೆಗೂ ಕೂಡ ಪ್ರತಿ ಟನ್‌ಗೆ 3,550 ರೂ. ನ್ಯಾಯಯುತ ಮತ್ತು ಲಾಭದಾಯಕ ಬೆಲೆ (ಎಫ್.ಆರ್.ಪಿ) ಘೋಷಿಸಿರುವುದನ್ನು ಸ್ವಾಗತಿಸಿದರು. ಪ್ರತಿಬಾರಿ ಎಫ್‌ಆರ್‌ಪಿ ದರ ನಿಗದಿ ಮಾಡುವಾಗ ಕಬ್ಬಿನ ರಿಕವರಿ ಪ್ರಮಾಣವನ್ನು 9.5% ರಿಂದ 10.25% ಕ್ಕೆ ಏರಿಕೆ ಮಾಡಲಾಗಿದೆ. ಆದರೆ, ಕರ್ನಾಟಕ ರಾಜ್ಯದ ಕಬ್ಬು ಬೆಳೆಯ ಸರಾಸರಿ ರಿಕವರಿ 9.5% ಆಗಿದೆ. 10.25% ಕ್ಕೆ ಹೆಚ್ಚಿಸಿರುವ ರಿಕವರಿ ಪ್ರಮಾಣವನ್ನು ಮರುಪರೀಶೀಲಿಸಿ 9.5% ಕ್ಕೆ ಇಳಿಕೆ ಮಾಡಲು ವಿನಂತಿಸಿದರು. ಎಫ್ ಆರ್‌ಪಿ ದರ ನಿಗದಿ ಮಾಡುವಾಗ ಕಬ್ಬು ಕಟಾವು ಮತ್ತು ಸಾರಿಗೆ ವೆಚ್ಚ ಸೇರಿಸಿ ದರ ನಿಗದಿ ಮಾಡಿರುವುದು ವೈಜ್ಞಾನಿಕವಲ್ಲದ ಕಾರಣ ಕಬ್ಬು ಕಟಾವು ಮತ್ತು ಸಾರಿಗೆ ಹೊರತುಪಡಿಸಿ ಎಫ್‌ಆರ್‌ಪಿ ದರ ನಿಗದಿ ಮಾಡುವುದು ತೀರಾ ಅಗತ್ಯವಾಗಿದೆ ಎಂದು ತಿಳಿಸಿದರು. 2019 ರಿಂದ ಸಕ್ಕರೆಯ ಎಂಎಸ್‌ಪಿ ದರ ಪ್ರತಿ ಕೆಜಿಗೆ ಕೇವಲ 31 ರೂ. ಮಾತ್ರ ಇದ್ದು, ಅದನ್ನು ಹೆಚ್ಚಿಗೆ ಮಾಡಿರುವುದಿಲ್ಲ.

ಈ ಕಾರಣದಿಂದ ಸಕ್ಕರೆ ಕಾರ್ಖಾನೆಗಳು ರೈತರ ಕಬ್ಬಿಗೆ ಹೆಚ್ಚಿನ ದರ ನೀಡಲು ಹಿಂದೇಟು ಹಾಕುತ್ತಿವೆ. ಆದರೆ, ಈಗಾಗಲೇ ಮುಕ್ತ ಮಾರುಕಟ್ಟೆಯಲ್ಲಿ ಪ್ರತಿ ಕೆಜಿಗೆ ಸುಮಾರು 40 ರೂ.ನಂತೆ ಸಕ್ಕರೆ ಮಾರಾಟವಾಗುವ ಕಾರಣ ಸಕ್ಕರೆಯ ಎಂಎಸ್‌ಪಿ ದರವನ್ನು ಹೆಚ್ಚಿಗೆ ಮಾಡುವುದು ಅನಿವಾರ್ಯವಾಗಿದೆ.

## ಮಿನಿ ನ್ಯೂಸ್

### ಅರುಂಧತಿ ರಾಯ್ ಪುಸ್ತಕ ಮಾರಾಟ ನಿಷೇಧ ಕೋರಿ ಸಲ್ಲಿಸಿದ ಅರ್ಜಿ ವಜಾ



**ನವದೆಹಲಿ:** ಅರುಂಧತಿ ರಾಯ್ ಅವರ ಇತ್ತೀಚಿನ ಪುಸ್ತಕವಾದ ಮದರ್‌ಮೇರಿ ಕಮ್ಸ್‌ಟುಮಿ ಪುಸ್ತಕದ ಮಾರಾಟ, ಪ್ರಸರಣ ಮತ್ತು ಪ್ರದರ್ಶನ ನಿಷೇದ ಕೋರಿ ಸಲ್ಲಿಕೆ ಮಾಡಲಾಗಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್ ವಜಾ ಮಾಡಿದ್ದು, ಲೇಖಕರಾಗಲಿ ಅಥವಾ ಪ್ರಕಾಶಕರಾಗಲಿ ಯಾವುದೇ ಕಾನೂನನ್ನು ಉಲ್ಲಂಘಿಸಿಲ್ಲ ಎಂದು ತಿಳಿಸಿದೆ. ರಾಯ್ ಅವರು ಬೂಕರ್ ಪ್ರಶಸ್ತಿ ವಿಜೇತ ಲೇಖಕಿ ಮತ್ತು ಪ್ರಮುಖ ವ್ಯಕ್ತಿ ಎಂಬುದಾಗಿ ಕೂಡ ಕೋರ್ಟ್ ತಿಳಿಸಿದೆ.

ಅರುಂಧತಿ ರಾಯ್‌ಅವರ ಹೊಸ ಪುಸ್ತಕದ ಮುಖಪುಟದಲ್ಲಿ ಸಿಗರೇಟ್ ಅಥವಾ ಬೀಡಿ ಚಿತ್ರವನ್ನು ಆಕ್ಷೇಪಿಸಲಾಗಿದ್ದು, ಇದು ಕಾನೂನು ಉಲ್ಲಂಘನೆ ಎಂದು ಅರ್ಜಿದಾರರು ವಾದಿಸಿದ್ದರು. ಸಿಜೆಐ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿ ಜೋಯ್ಮಲ್ಯ ಬಾಗ್ಚಿ ಪೀಠದ ಮುಂದೆ ಈ ಅರ್ಜಿ ಬಂದಿತು. ರಾಯ್ ಪ್ರಮುಖ ಲೇಖಕರಾಗಿದ್ದು, ಅವರು ಈ ರೀತಿ ವಿಷಯಗಳನ್ನು ಉತ್ತೇಜಿಸುವುದಿಲ್ಲ. ಪುಸ್ತಕದಲ್ಲಿ ಎಚ್ಚರಿಕೆ ಹಾಕಲಾಗಿದ್ದು, ಅವರು ಪ್ರಮುಖ ವ್ಯಕ್ತಿಯೂ ಆಗಿದ್ದಾರೆ.

ಯಾಕೆ ಈ ರೀತಿ ಅರ್ಜಿ ಸಲ್ಲಿಕೆ ಮೂಲಕ ಪ್ರಚಾರ ಪಡೆಯಲಾಗುತ್ತಿದೆ ಎಂದು ಅರ್ಜಿದಾರರನ್ನು ಪೀಠ ಪ್ರಶ್ನಿಸಿದೆ. ನಗರದಲ್ಲಿ ಪುಸ್ತಕದ ಚಿತ್ರವಿರುವ ಯಾವುದೇ ಹೋರ್ಡಿಂಗ್ ಇಲ್ಲ. ಇದು ಪುಸ್ತಕವನ್ನು ಕೊಂಡು ಓದುವವರಿಗಾಗಿ ಅವರ ಈ ಚಿತ್ರವೂ ಧೂಮಪಾನದ ಪ್ರಚಾರದ ಅಂಶವನ್ನು ಬಿಂಬಿಸುವುದಿಲ್ಲ ಎಂದು ಪೀಠ ಗಮನಿಸಿದೆ.

### ಪಾಸ್‌ಪೋರ್ಟ್ ಪ್ರಕರಣ: ಅಬ್ದುಲ್ಲಾ ಅಜಂಗೆ 7 ವರ್ಷಗಳ ಜೈಲು ಶಿಕ್ಷೆ ವಿಧಿಸಿದ ಕೋರ್ಟ್

**ರಾಮ್‌ಪುರ್ :** ನಕಲಿ ದಾಖಲೆಗಳನ್ನು ಬಳಸಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಸಮಾಜವಾದಿ ಪಕ್ಷದ ನಾಯಕ ಅಬ್ದುಲ್ಲಾ ಅಜಂಗೆ ಏಳು ವರ್ಷಗಳ ಜೈಲು ಶಿಕ್ಷೆ ವಿಧಿಸಿ ನ್ಯಾಯಾಲಯ ಆದೇಶ ನೀಡಿದೆ. ಸಮಾಜವಾದಿ ಪಕ್ಷದ ನಾಯಕ ಅಜಂ ಖಾನ್ ಅವರ ಮಗ ಅಬ್ದುಲ್ಲಾ ಅಜಂಗೆ ಎರಡು ಪಾಸ್‌ಪೋರ್ಟ್ ಹೊಂದಿದ್ದ ಪ್ರಕರಣದಲ್ಲಿ, ಸಂಸದ - ಶಾಸಕರ( ಜನಪ್ರತಿನಿಧಿಗಳ) ನ್ಯಾಯಾಲಯ ಏಳು ವರ್ಷಗಳ ಜೈಲು ಶಿಕ್ಷೆ, 50,000 ರೂಪಾಯಿ ದಂಡ ವಿಧಿಸಿ ಆದೇಶಿಸಿದೆ. ಈ ಪ್ರಕರಣದ ವಿಚಾರಣೆಗೆ ಅಬ್ದುಲ್ಲಾ ಅಜಂ ವಿಡಿಯೋ ಕಾನ್ಫರೆನ್ಸ್ ಮೂಲಕ ಹಾಜರಾಗಿದ್ದರು. ಈ ಹಿಂದೆ ಇವರ ವಿರುದ್ಧ ದಾಖಲಾದ್ದ ನಾಲ್ಕು ಪ್ರಕರಣಗಳಲ್ಲಿ ತೀರ್ಪು ಬಂದಿದೆ. ಈ ಪೈಕಿ ಮೂರು ಪ್ರಕರಣಗಳಲ್ಲಿ ಅವರು ತಪ್ಪಿತಸ್ಥರೆಂದು ಸಾಬೀತಾದ್ದು, ಒಂದರಲ್ಲಿ ಅವರು ಖುಲಾಸೆಗೊಂಡಿದ್ದಾರೆ. ಕಳೆದ ತಿಂಗಳು, ಎರಡು ಪಾನ್ ಕಾರ್ಡ್ ಪ್ರಕರಣದಲ್ಲಿ ಏಳು ವರ್ಷಗಳ ಶಿಕ್ಷೆ ನೀಡಿ ಆದೇಶಿಸಲಾಗಿತ್ತು. ಇದಕ್ಕೂ ಮುನ್ನ ಅಂದರೆ ಅಕ್ಟೋಬರ್‌ನಲ್ಲಿ, ಜನನ ಪ್ರಮಾಣಪತ್ರ ಪ್ರಕರಣಗಳಲ್ಲಿ ಅಬ್ದುಲ್ಲಾ, ಅಜಂ ಖಾನ್ ಮತ್ತು ತಾಜಿನ್ ಫಾತಿಮಾ ಅವರಿಗೆ ಏಳು ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗಿತ್ತು.

**ಪ್ರಕರಣ ದಾಖಲಿಸಿದ್ದ ಬಿಜೆಪಿ ನಾಯಕರು:** ಅಬ್ದುಲ್ಲಾ ಅಜಂ ಎರಡು ಪಾಸ್‌ಪೋರ್ಟ್‌ಗಳನ್ನು ಹೊಂದಿದ್ದಾರೆ ಎಂದು ಆರೋಪಿಸಿ ಬಿಜೆಪಿ ನಾಯಕ ಆಕಾಶ್ ಸಕ್ಸೇನಾ ಸಿವಿಲ್ ಲೈನ್ಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ಈ ಪ್ರಕರಣದ ದೀರ್ಘ ಕಾಲದ ವಿಚಾರಣೆ ಬಳಿಕ ನ್ಯಾಯಾಲಯವು ತನ್ನ ತೀರ್ಪು ಪ್ರಕಟಿಸಿದೆ. ಸೆಕ್ಷನ್ 420ರ ಅಡಿ 3 ವರ್ಷ ಶಿಕ್ಷೆ ಮತ್ತು 10,000 ರೂ. ದಂಡ ವಿಧಿಸಲಾಗಿದೆ. ದಂಡ ಪಾವತಿಸಲು ವಿಫಲವಾದರೆ ಹೆಚ್ಚುವರಿಯಾಗಿ 3 ತಿಂಗಳು ಜೈಲು ಶಿಕ್ಷೆ ವಿಧಿಸಲಾಗುತ್ತದೆ.

ಸೆಕ್ಷನ್ 467 ರ ಅಡಿ 7 ವರ್ಷ ಶಿಕ್ಷೆ ಮತ್ತು 20,000 ರೂ. ದಂಡ, ಇದನ್ನು ಪಾವತಿಸಲು ವಿಫಲವಾದರೆ ಹೆಚ್ಚುವರಿಯಾಗಿ 6 ತಿಂಗಳು ಜೈಲು ಶಿಕ್ಷೆ ವಿಧಿಸಲಾಗುತ್ತದೆ. ಸೆಕ್ಷನ್ 468 ರ ಅಡಿ 3 ವರ್ಷ ಶಿಕ್ಷೆ ಮತ್ತು 10,000 ರೂ. ದಂಡ. ಪಾವತಿಸಲು ವಿಫಲವಾದರೆ ಹೆಚ್ಚುವರಿಯಾಗಿ 3 ತಿಂಗಳು ಜೈಲು ಶಿಕ್ಷೆ ವಿಧಿಸಲಾಗುತ್ತದೆ ಎಂದು ಕೋರ್ಟ್ ತಿಳಿಸಿದೆ. ಸೆಕ್ಷನ್ 471ರ ಅಡಿ ಎರಡು ವರ್ಷ ಶಿಕ್ಷೆ 10 ಸಾವಿರ ದಂಡ ವಿಧಿಸಲಾಗಿದ್ದು, ಇದನ್ನು ಪಾವತಿಸಲು ವಿಫಲವಾದರೆ, ಮೂರು ತಿಂಗಳ ಜೈಲು ಸೇರಿದಂತೆ ಒಟ್ಟಾರೆ 7 ವರ್ಷಗಳ ಶಿಕ್ಷೆ ಹಾಗೂ 50 ಸಾವಿರ ದಂಡವನ್ನು ವಿಧಿಸಲಾಗಿದೆ.

### ಗುಜರಾತ್‌ನಲ್ಲಿ ಎಸ್‌ಐಆರ್ ಪ್ರಕ್ರಿಯೆ: ಮತಪಟ್ಟಿಯಲ್ಲಿ 17 ಲಕ್ಷ ಮೃತಪಟ್ಟ ಮತದಾರರ ಹೆಸರು!

**ಗುಜರಾತ್:** ರಾಜ್ಯದಲ್ಲಿ ಸಾಗುತ್ತಿರುವ ಮತದಾರರ ಪಟ್ಟಿಯ ತೀವ್ರ ಪರಿಷ್ಕರಣೆ(ಎಸ್‌ಐಆರ್)ಯ ವೇಳೆ ಸುಮಾರು 17 ಲಕ್ಷ ಮೃತಪಟ್ಟ ಮತದಾರರು ಇನ್ನೂ ಮತದಾರರ ಪಟ್ಟಿಯಲ್ಲಿ ಇರುವುದು ಕಂಡುಬಂದಿದೆ ಎಂದು ಮುಖ್ಯ ಚುನಾವಣಾ ಅಧಿಕಾರಿ ಕಚೇರಿಯ ಪ್ರಕಟಣೆ ತಿಳಿಸಿದೆ.

ನವೆಂಬರ್ 4ರಿಂದ ರಾಜ್ಯದಲ್ಲಿ ಈ ಮತದಾರರ ಪಟ್ಟಿ ಪರಿಷ್ಕರಣೆ ಸಾಗಿದ್ದು, ಬೂತ್ ಮಟ್ಟದ ಅಧಿಕಾರಿಗಳು(ಬಿಎಲ್ ಒಗಳು) ತಮಗೆ ನಿಗದಿಸಿದ ಪ್ರದೇಶಗಳಲ್ಲಿ ಗಣತಿ ನಮೂನೆಗಳನ್ನು ವಿತರಿಸಿದ್ದು, ಈ ಅಭಿಯಾನ ಡಿಸೆಂಬರ್ 11ರ ವರೆಗೆ ಸಾಗಲಿದೆ.

ಕಳೆದ ಒಂದು ತಿಂಗಳಿನಿಂದ ಗಣತಿ ನಮೂನೆಯನ್ನು 2025ರಲ್ಲಿ ಮತದಾರರ ಪಟ್ಟಿಯಲ್ಲಿ ನೋಂದಣಿ ಮಾಡಿರುವ ಐದು ಕೋಟಿಗೂ ಹೆಚ್ಚು ಮತದಾರರಿಗೆ ನೀಡಲಾಗಿದೆ. 33 ಜಿಲ್ಲೆಗಳಲ್ಲಿ ನಮೂನೆ ವಿತರಣಾ ಕಾರ್ಯ ಶೇ.100ರಷ್ಟು ಮುಗಿದಿದೆ.

### ವಿಚ್ಛೇದನ ನಿರಾಕರಿಸಿದ ಪತಿ ಕೊಂದ ಪತ್ನಿ: ಅರಣ್ಯದಲ್ಲಿ ಕೊಂದು ಶವ ಸುಟ್ಟು ಎಸ್ಕೇಪ್

**ಮಹಾರಾಷ್ಟ್ರ:** ವಿಚ್ಛೇದನ ನೀಡಲು ನಿರಾಕರಿಸಿದ ಪತಿಯನ್ನು ಪತ್ನಿಯೇ ಕೊಲೆ ಮಾಡಿಸಿರುವ ಘಟನೆ ಬೆಳಕಿಗೆ ಬಂದಿದೆ. ಈ ಪ್ರಕರಣ ಸಂಬಂಧ ಆರೋಪಿ ಪತ್ನಿ ಮತ್ತು ಕೊಲೆ ಮಾಡಿದ ಆಕೆಯ ಸಹೋದರ ಹಾಗೂ ಗೆಳೆಯರನ್ನು ಪೊಲೀಸರು ಬಂಧಿಸಿದ್ದಾರೆ. ಬಳ್ಳಾರಿ ಜಿಲ್ಲೆಯ ಶಿರುಗುಪ್ಪ ಮೂಲದ ತಿಪ್ಪಣ್ಣ ಕೊಲೆಯಾದವರು. ಇವರ ಪತ್ನಿ ಮಹಾರಾಷ್ಟ್ರದ ಕಲ್ಯಾಣ್ ಮೂಲದ ಹಸೀನಾ ಮೆಹಬೂಬ್ ಶೇಖ್. ಆರೋಪಿಗಳನ್ನು ರಿಕ್ಷಾ ಚಾಲಕ ಫೈಯಾಜ್, ಸಿಕಂದರ್ ಬಾದ್‌ಶಾ ಮುಜಾವರ್ ಮತ್ತು ಗುಲಾಮ್ ಅಕ್ಬರ್ ಇಖ್ತಿಯಾರ್ ಎಂದು ಗುರುತಿಸಲಾಗಿದೆ. ಕೌಟುಂಬಿಕ ಕಲಹದಿಂದ ಪತಿ ಪತ್ನಿ ಇಬ್ಬರ ಮಧ್ಯೆ ಜಗಳವಾಗಿದ್ದು, ಪ್ರತ್ಯೇಕವಾಗಿ ವಾಸವಾಗಿದ್ದರು.

ಇದರಿಂದ ಕಲ್ಯಾಣ್‌ದಲ್ಲಿ ವಾಸವಾಗಿದ್ದ ಪತ್ನಿ ವಿಚ್ಛೇದನ ಪಡೆಯಲು ನಿರ್ಧರಿಸಿದ್ದರು. ಆದರೆ ವಿಚ್ಛೇದನ ಕೊಡಲು ಪತಿ ಒಪ್ಪಿರಲಿಲ್ಲ. ಇದರಿಂದ ಪತಿಯ ಕೊಲೆ ಸಂಚು ರೂಪಿಸಿದ್ದಳು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

**ಕೊಲೆ ಪ್ರಕರಣ ಭೇದಿಸಿದ ಮಹಾ ಪೊಲೀಸರು:** ಆರೋಪಿ ಮಹಿಳೆಯ ಸಂಚಿನಂತೆ ಆಕೆಯ ಸಹೋದರ ಮತ್ತು ಆತನ ಸ್ನೇಹಿತರು ತಿಪ್ಪಣ್ಣನ ಕೊಲೆ ಮಾಡಿದ್ದಾರೆ.


# ಸಮಂತಾ ಮದುವೆ ಬೆನ್ನಲ್ಲೇ ಶೋಭಿತಾ ಕಡೆಯಿಂದ ಅಚ್ಚರಿಯ ಪೋಸ್ಟ್

ನಾಗ ಚೈತನ್ಯ ಅವರಿಂದ ವಿಚ್ಛೇದನ ಪಡೆದ ನಾಲ್ಕು ವರ್ಷಗಳ ನಂತರ, ನಟಿ ಸಮಂತಾ ರುತ್ ಪ್ರಭು ನಿರ್ದೇಶಕ ರಾಜ್ ನಿಧಿಮೋರು ಅವರನ್ನು ವಿವಾಹವಾದರು. ಇಬ್ಬರಿಗೂ ಇದು ಎರಡನೇ ಮದುವೆ. ಡಿಸೆಂಬರ್ 1 ರಂದು ಕೊಯಮತ್ತೂರಿನ ಇಶಾ ಯೋಗ ಕೇಂದ್ರದಲ್ಲಿರುವ ಲಿಂಗ ಭೈರವಿ ದೇವಸ್ಥಾನದಲ್ಲಿ ಕೆಲವೇ ಅತಿಥಿಗಳ ಸಮ್ಮುಖದಲ್ಲಿ ಅವರು ವಿವಾಹವಾದರು. ಈ ವಿವಾಹದ ಮೂರು



ದಿನಗಳ ನಂತರ, ಡಿಸೆಂಬರ್ 4 ರಂದು, ಶೋಭಿತಾ ವಿವಾಹದ ವಿಡಿಯೋ ಹಂಚಿಕೊಂಡಿದ್ದಾರೆ. ನಾಗ ಚೈತನ್ಯ ಮತ್ತು ಶೋಭಿತಾ ಧೂಲಿಪಾಲ ಮದುವೆ ಆಗಿ ಒಂದು ವರ್ಷ ಆಗಿದೆ. ಕಳೆದ ವರ್ಷ ಡಿಸೆಂಬರ್ 4 ರಂದು ಶೋಭಿತಾ ಮತ್ತು ನಾಗ ಚೈತನ್ಯ ವಿವಾಹವಾದರು. ಈಗ, ಮೊದಲ ವಿವಾಹ ವಾರ್ಷಿಕೋತ್ಸವದ ಸಂದರ್ಭದಲ್ಲಿ, ಶೋಭಿತಾ ತಮ್ಮ ಸಾಮಾಜಿಕ ಮಾಧ್ಯಮ ಖಾತೆಯಲ್ಲಿ ಒಂದು ರೀಲ್ ಮದುವೆ ವಿಡಿಯೋ ಪೋಸ್ಟ್ ಮಾಡಿದ್ದಾರೆ.

ಅವರ ವಿವಾಹ ಹೇಗಿತ್ತು ಎಂಬುದರ ಝಲಕ್ ಇದರಲ್ಲಿ ಇದೆ. ಈ ವಿಡಿಯೋದಲ್ಲಿ, ಸೋಭಿತಾ ಮತ್ತು ನಾಗ್ ಚೈತನ್ಯ ಪರಸ್ಪರ ತಮ್ಮ ಭಾವನೆಗಳನ್ನು ಮುಕ್ತವಾಗಿ ವ್ಯಕ್ತಪಡಿಸುತ್ತಿರುವುದು ಕಂಡುಬರುತ್ತದೆ. ಸಮಂತಾ ಅವರ ವಿವಾಹದ ಮೂರು ದಿನಗಳ ನಂತರ ಶೋಭಿತಾ ಈ ವೀಡಿಯೊವನ್ನು ಹಂಚಿಕೊಂಡಿದ್ದಾರೆ ಮತ್ತು ಇದು ಚರ್ಚೆಗೆ ಗ್ರಾಸವಾಗಿದೆ. ಈ ವಿಡಿಯೋದಲ್ಲಿ, 'ಒಬ್ಬ ವ್ಯಕ್ತಿ ಅಪೂರ್ಣ ಎಂದು ನಾನು ನಂಬುವುದಿಲ್ಲ. ಇನ್ನೊಬ್ಬ ವ್ಯಕ್ತಿ ನನ್ನ ಜೀವನದಲ್ಲಿ ಬಂದಾಗ, ಆ ಶೂನ್ಯವು ತುಂಬುತ್ತದೆ. ಏಕೆಂದರೆ ನಾವಿಬ್ಬರೂ ನಮ್ಮ ಸ್ವಂತ ಜೀವನದಲ್ಲಿ ಪೂರ್ಣರಾಗಿದ್ದೇವೆ. ಆದರೂ, ಅವನ ಅನುಪಸ್ಥಿತಿಯಲ್ಲಿ ನಾನು ಪೂರ್ಣವಾಗಿಲ್ಲ' ಎಂದು ಶೋಭಿತಾ ಹೇಳಿದ್ದಾರೆ. ನಾಗ ಚೈತನ್ಯ ಕೂಡ ಶೋಭಿತಾ ಬಗ್ಗೆ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. 'ನಾನು ಎದ್ದಾಗ ಅಥವಾ ಮಲಗಿದಾಗ ಅವಳ ಬಗ್ಗೆ ಮತ್ತು ಅವಳು ನನ್ನ ಜೀವನದಲ್ಲಿ ಇದ್ದಾಳೆ ಎಂಬ ಆಲೋಚನೆ ನನ್ನ ಮನಸ್ಸನ್ನು ಹಗುರಗೊಳಿಸುತ್ತದೆ. ಅದು ತುಂಬಾ ನಿರಾಳತೆಯ ಭಾವನೆ. ಅವಳು ನನ್ನ ಪಕ್ಕದಲ್ಲಿದ್ದಾಗ ನಾನು ಯಾವುದನ್ನಾದರೂ ಜಯಿಸಬಲ್ಲೆ ಎಂದು ನನಗೆ ಅನಿಸುತ್ತದೆ' ಎಂದಿದ್ದಾರೆ. ಶೋಭಿತಾ ವಿವಾಹ ಆಗಿ ಒಂದು ವರ್ಷ ಆದರೂ ಮದುವೆಯ ವಿಡಿಯೋ ಹಂಚಿಕೊಂಡಿರಲಿಲ್ಲ. ಈಗ ಅವರು ಏಕಾಏಕಿ ವಿಡಿಯೋ ಪೋಸ್ಟ್ ಮಾಡಿದ್ದು ಅಚ್ಚರಿ ಮೂಡಿಸಿದೆ. ಹಲವು ವರ್ಷಗಳ ಕಾಲ ಪರಸ್ಪರ ಡೇಟಿಂಗ್ ಮಾಡಿದ ನಂತರ ನಾಗ ಚೈತನ್ಯ ಮತ್ತು ಸಮಂತಾ ರುತ್ ಪ್ರಭು 2017ರಲ್ಲಿ ವಿವಾಹವಾದರು. ಆದರೆ ಮದುವೆಯಾದ ನಾಲ್ಕು'ರ್ಷಗಳಲ್ಲಿ ಅವರು ವಿಚ್ಛೇದನ ಪಡೆದರು.



ಫ್ಯಾನ್ಸ್‌ಗೆ ಧನ್ಯವಾದ ಹೇಳಿದ ಅಲ್ಲು ಅರ್ಜುನ್

# ಪುಷ್ಪ-2ಗೆ ವರ್ಷದ ಸಂಭ್ರಮ

ಸುಕುಮಾರ್ ನಿರ್ದೇಶನದಲ್ಲಿ ಮೂಡಿಬಂದ ಅಲ್ಲು ಅರ್ಜು ನಟನೆಯ ಪುಷ್ಪ ಹಾಗೂ ಪುಷ್ಪ-2 ಸಿನಿಮಾ ವಿಶ್ವದಾದ್ಯಂತ ಸದ್ದು ಮಾಡಿದೆ. ಬಾಕ್ಸಾಫೀಸ್‌ನಲ್ಲಿ ತನ್ನದೇ ಹೊಸ ದಾಖಲೆ ಸೃಷ್ಟಿಸಿದ ಪುಷ್ಪ-2 ಸಿನಿಮಾ ತೆರೆಕಂಡು ಇಂದಿಗೆ (ಡಿ.5) ಒಂದು ವರ್ಷವಾಗಿದೆ. ಒಂದು ವರ್ಷದ ಸಂಭ್ರಮದಲ್ಲಿ ನಟ ಅಲ್ಲು ಅರ್ಜುನ್ ಅಭಿಮಾನಿಗಳಿಗೆ ಧನ್ಯವಾದ ಹೇಳಿದ್ದಾರೆ.

ನಿರ್ದೇಶಕ ಸುಕುಮಾರ್ ಜೊತೆಗಿನ ಪುಷ್ಪ-2 ಸೆಟ್‌ನ ಫೋಟೋ ಹಂಚಿಕೊಂಡು ಕೃತಜ್ಞತೆಯ ಸಾಲುಗಳನ್ನ ಬರೆದುಕೊಂಡಿದ್ದಾರೆ. ಪುಷ್ಪ ನಮ್ಮ ಜೀವನದಲ್ಲಿ ಐದು ವರ್ಷಗಳ ಮರೆಯಲಾಗದ ಪ್ರಯಾಣ. ಹೊಸ ಬಗೆಯ ಪ್ರಯತ್ನಕ್ಕೆ ಬೆನ್ನು ತಟ್ಟಿ, ಮತ್ತೊಂದು ಇಂತಹ ಪ್ರಯತ್ನ ಮಾಡಲು ಧೈರ್ಯ. ಶಕ್ತಿ, ಪ್ರೇರಣೆ ನೀಡಿದ ಪ್ರೇಕ್ಷಕರು ಹಾಗೂ ನಮ್ಮ ಅಭಿಮಾನಿಗಳಿಗೆ ಧನ್ಯವಾದಗಳು ಎಂದಿದ್ದಾರೆ.

ಜೊತೆಗೆ ತಮ್ಮ ಗುರುಗಳಾದ ನಿರ್ದೇಶಕ ಸುಕುಮಾರ್ ಅವರಿಗೆ ಧನ್ಯವಾದ ತಿಳಿಸಿದ್ದಾರೆ. ಅಂದಹಾಗೆ ಪುಷ್ಪ-2 ಸಿನಿಮಾ 2024ರ ಡಿಸೆಂಬರ್ 5 ರಂದು ತೆರೆಕಂಡು ಭರ್ಜರಿ ರೆಸ್ಪಾನ್ಸ್ ಪಡೆದುಕೊಂಡಿತ್ತು. ಈ ಸಿನಿಮಾದ ಪ್ರೀಮಿಯರ್ ಸಂದರ್ಭದಲ್ಲಿ ಕಾಲ್ತುಳಿತ ಪ್ರಕರಣ ನಟನಿಗೆ ಜೈಲು ದರ್ಶನ ಮಾಡಿಸಿತ್ತು. ಕಾಲ್ತುಳಿತದಲ್ಲಿ ಮಹಿಳೆ ಸಾವನ್ನಪ್ಪಿದ್ದರು. ಸಿನಿಮಾದ ಪ್ರೀಮಿಯರ್‌ಗೆ ಬಂದ ನಟನಿಗೆ ಸಂಕಷ್ಟ ಎದುರಾಗಿತ್ತು. ಒಂದು ಕಡೆ ಸಿನಿಮಾ ಯಶಸ್ವಿ ಪ್ರದರ್ಶನ.. ಮತ್ತೊಂದು ಕಡೆ ಅಭಿಮಾನಿ ಸಾವಿನಿಂದ ಅಲ್ಲು ಅರ್ಜುನ್ ಮಾನಸಿಕವಾಗಿ ಕುಗ್ಗಿಹೋಗಿದ್ದರು. ಸದ್ಯ ಪುಷ್ಪ-2 ಸಿನಿಮಾ ಬಳಿಕ ಅಟ್ಲಿ ಜೊತೆ ಸೂಪರ್ ಮ್ಯಾನ್ ಕಾನ್ಸೆಪ್ಟ್ ಸಿನಿಮಾದಲ್ಲಿ ನಟಿಸುತ್ತಿದ್ದಾರೆ ಅಲ್ಲು ಅರ್ಜುನ್.

# ನಯಾ ಲುಕ್‌ನಲ್ಲಿ ಕ್ವೀನ್ ಕಂಗನಾ



ಬಾಲಿವುಡ್ ನಟಿಯೂ ಆಗಿರುವ ಬಿಜೆಪಿ ಸಂಸದೆ ಕಂಗನಾ ರಾಣಾವತ್ ಹೊಸ ಫೋಟೋಶೂಟ್ ಮಾಡಿಸಿದ್ದಾರೆ. ಇದು ವಾಸ್ತವವಾಗಿ ಥೀಮ್ ಫೋಟೋಶೂಟ್ ಆಗಿದ್ದು ಹಿಮಾಚಲ ಪ್ರದೇಶದ ಲಡಾಕ್ ಭಾಗದ ಮಹಿಳೆಯರ ಸಾಂಪ್ರದಾಯಿಕ ಉಡುಗೆಯನ್ನ ಪ್ರತಿನಿಧಿಸುತ್ತದೆ. ವಿಶಿಷ್ಟ ಶೈಲಿ ವಿನ್ಯಾಸ ಈ ಉಡುಗೆ ಧರಿಸಿ ಕಂಗನಾ ರಾಣಾವತ್ ಪೋಸ್ ಕೊಟ್ಟಿದ್ದಾರೆ. ಇಡೀ ದೇಹ ಕವರ್ ಆಗುವ ವಿಶಿಷ್ಟ ಶೈಲಿಯ ಉಡುಗೆ ಇದಾಗಿದ್ದು ಕ್ವೀನ್ ಕಂಗನಾ ಎಲಿಗೆಂಟ್ ಲುಕ್‌ನಲ್ಲಿ ಮಿಂಚಿದ್ದಾರೆ. ಇದು ಹೈವೆಸ್ಟ್ ಪ್ಲೀಟೆಡ್ ಸ್ಕರ್ಟ್ ಆಗಿದ್ದು ಅದಕ್ಕೆ ಹೋಲುವ ರವಿಕೆ ಹಾಗೂ ಹಿಮಾಚಲ ರೇಷ್ಮೆ ದುಪಟ್ಟಾ ಸುತ್ತಿಕೊಂಡಿದ್ದಾರೆ. ಮಂಡಿ ಕ್ಷೇತ್ರದ ಸಂಸದೆಯ ಸಾಂಪ್ರದಾಯಿಕ ಲುಕ್‌ಗೆ ನೆಟ್ಟಿಗರಂತೂ ಫಿದಾ ಆಗಿದ್ದಾರೆ. ಫೋಟೋವನ್ನ ಕಂಗನಾ ಇನ್‌ಸ್ಟಾ ಖಾತೆಯಲ್ಲಿ ಹಂಚಿಕೊಂಡಿದ್ದಾರೆ. ಈ ಫೋಟೋ ವಿಚಾರವಾಗಿ ಮಾಹಿತಿ ಹಂಚಿಕೊಂಡಿರುವ ಕಂಗನಾ, ನಿನ್ನೆ ರಾತ್ರಿ ಒಂದು ವಿವಾಹ ಕಾರ್ಯಕ್ರಮದಲ್ಲಿ ಭಾಗಿಯಾಗಲು ಈ ಲುಕ್‌ನಲ್ಲಿ ಭಾಗಿಯಾಗಿದ್ದರಂತೆ. ಭಾರತದಲ್ಲಿ ಮದುವೆ ಸೀಸನ್ ಬಂದರೆ ಸಾಕು ನಮ್ಮ ಸಂಸ್ಕೃತಿಯನ್ನ ಸಂಪ್ರದಾಯವನ್ನ ಪಾಲಿಸಲು ಅವಕಾಶ ಇರುತ್ತದೆ. ನಮ್ಮ ಭಾಗದಲ್ಲಿ ಚಳಿಗಾಲದ ಮದುವೆ ಕಾರ್ಯಕ್ರಮ ಹೀಗೆ ನಡೆಯುತ್ತದೆ ಎಂಬ ಮಾಹಿತಿ ಹಂಚಿಕೊಂಡಿದ್ದಾರೆ ಕಂಗನಾ. ಕಂಗನಾ ಅವರ ಈ ಲುಕ್‌ನ ಫೋಟೋಶೂಟ್ ಸಖತ್ ಟ್ರೆಂಡ್ ಕ್ರಿಯೆಟ್ ಮಾಡಿದೆ.

**ಸಾಂಪ್ರದಾಯಿಕ ಲುಕ್‌ಗೆ ನೆಟ್ಟಿಗರಂತೂ ಫಿದಾ**

# ಐಎಂಡಿಬಿ ಟಾಪ್-10 ಲಿಸ್ಟ್‌ನಲ್ಲಿ ಕನ್ನಡದ ಆರ್‌ಆರ್‌ಆರ್ ತಾರೆಯರಿಗೆ ಸ್ಥಾನ



2025ರ ಮೋಸ್ಟ್ ಪಾಪುಲರ್ ಇಂಡಿಯನ್ ಸ್ಟಾರ್ ಐಎಂಡಿಬಿ ಬಿಡುಗಡೆ ಮಾಡಿರುವ ರೇಟಿಂಗ್ಸ್ ಪಟ್ಟಿಯಲ್ಲಿ ಕನ್ನಡದ ಮೂವರು ತಾರೆಯರಿಗೆ ಟಾಪ್-10 ರಲ್ಲಿ ಸ್ಥಾನ ಸಿಕ್ಕಿದೆ.

ಕನ್ನಡದ ಮೂವರು ತಾರೆಯರಾದ ರಶ್ಮಿಕಾ ಮಂದಣ್ಣ, ರುಕ್ಮಿಣಿ ವಸಂತ್ ಹಾಗೂ ರಿಷಬ್ ಶೆಟ್ಟಿಗೆ ಸ್ಥಾನ ದೊರಕಿದೆ. ರಶ್ಮಿಕಾ ಮಂದಣ್ಣ ಟಾಪ್-6, ರುಕ್ಮಿಣಿ ವಸಂತ್ ಟಾಪ್-9 ಹಾಗೂ ರಿಷಬ್ ಶೆಟ್ಟಿ ಅವರಿಗೆ ಟಾಪ್-10ನೇ ಸ್ಥಾನವನ್ನ ಐಎಂಡಿಬಿ ನೀಡಿದೆ.ಐಎಂಡಿಬಿ ಪಟ್ಟಿಯಲ್ಲಿ ಕನ್ನಡ ಚಿತ್ರರಂಗದ ನಟರನ್ನ ಹೆಚ್ಚಾಗಿ ಗಣನೆಗೆ ತೆಗೆದುಕೊಳ್ಳುತ್ತಿರಲಿಲ್ಲ. ಇತ್ತೀಚಿನ ದಿನಗಳಲ್ಲಿ ಕೆಜಿಎಫ್ ಹಾಗೂ ಕಾಂತಾರ ಸಿನಿಮಾಗಳ ಮೂಲಕ ಇಡೀ ವಿಶ್ವದ ಗಮನಸೆಳೆದು ತನ್ನತ್ತ ನೋಡುವಂತೆ ಮಾಡಿದೆ ಕನ್ನಡ ಚಿತ್ರರಂಗ. ಪ್ರತಿವರ್ಷ ಐಎಂಡಿಬಿಯು ಭಾರತೀಯ ಪಾಪುಲರ್ ಸ್ಟಾರ್‌ಗಳ ಪಟ್ಟಿ ಬಿಡುಗಡೆ ಮಾಡುತ್ತದೆ. ಅದರಲ್ಲಿ ಆ ವರ್ಷ ಹೆಚ್ಚು ಪ್ರಖ್ಯಾತಿ ಪಡೆದ ತಾರೆಯರ ಪಟ್ಟಿಗೆ ಕನ್ನಡದ ಮೂವರು ನಟರು ಟಾಪ್-10ರಲ್ಲಿ ಸ್ಥಾನ ಪಡೆದಿರೋದು ಕನ್ನಡಕ್ಕೆ ಮತ್ತೊಂದು ಹೆಮ್ಮೆ.ರಶ್ಮಿಕಾ ಮಂದಣ್ಣ ತಮ್ಮ ವಿಭಿನ್ನ ಪ್ರಯತ್ನದ ಸಿನಿಮಾಗಳ ಮೂಲಕ ಭಾರತೀಯ ಚಿತ್ರರಂಗದ ಗಮನ ಸೆಳೆದಿದ್ದಾರೆ. ಇನ್ನು ಕಾಂತಾರ ಚಾಪ್ಟರ್-1 ಸಿನಿಮಾ ಮೂಲಕ ಇಡೀ ದೇಶದ ಗಮನ ಸೆಳೆದಿರುವ ರುಕ್ಮಿಣಿ ವಸಂತ್ ಹಾಗೂ ರಿಷಬ್ ಶೆಟ್ಟಿ ಐಎಂಡಿಬಿ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. ಉಳಿದಂತೆ 1ನೇ ಸ್ಥಾನದಲ್ಲಿ ಸೈಯಾರಾ ಸಿನಿಮಾದ ನಾಯಕ ಅಹಾನ್ ಪಾಂಡೆ, ನಾಯಕಿ ಅನೀತ್ ಪಡ್ಡ 2ನೇ ಸ್ಥಾನದಲ್ಲಿದ್ದಾರೆ. 3ನೇ ಸ್ಥಾನದಲ್ಲಿ ಆಮೀರ್ ಖಾನ್, 4ನೇ ಸ್ಥಾನದಲ್ಲಿ ಇಶಾನ್ ಖಟ್ಟರ್, 5ನೇ ನಟನಾಗಿ ಲಕ್ಷ್ಯ, 6ನೇ ಸ್ಥಾನದಲ್ಲಿ ಕಲ್ಯಾಣಿ ಪ್ರಿಯದರ್ಶನ್, 8ನೇ ಸ್ಥಾನದಲ್ಲಿ ತೃಪ್ತಿ ದಿಮ್ರಿ ಸ್ಥಾನ ಪಡೆದುಕೊಂಡಿದ್ದಾರೆ.


# ಸರಣಿ ಗೆಲ್ಲುತ್ತಾ ರಾಹುಲ್ ಪಡೆ?

ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಿನ 3ನೇ ಏಕದಿನ ವಿಶಾಖಪಟ್ಟಣಂನಲ್ಲಿ ನಡೆಯಲಿದ್ದು, ಸರಣಿ ನಿರ್ಣಾಯಕ ಪಂದ್ಯ ಇದಾಗಿದೆ. ವಿಶಾಖಪಟ್ಟಣಂನಲ್ಲಿ ಭಾರತ ಉತ್ತಮ ದಾಖಲೆ ಹೊಂದಿದೆ (10ರಲ್ಲಿ 7 ಗೆಲುವು), ಆದರೆ ದಕ್ಷಿಣ ಆಫ್ರಿಕಾ ಇಲ್ಲಿ ಯಾವುದೇ ಏಕದಿನ ಪಂದ್ಯ ಆಡಿಲ್ಲ. ಈ ನೆಲದಲ್ಲಿ ಭಾರತ ಮೇಲುಗೈ ಸಾಧಿಸಿ ಸರಣಿ ಗೆಲ್ಲುವ ವಿಶ್ವಾಸದಲ್ಲಿದ್ದರೆ, ಪ್ರೋಟೀಸ್ ಸರಣಿ ಗೆದ್ದು ಇತಿಹಾಸ ಸೃಷ್ಟಿಸಲು ಎದುರು ನೋಡುತ್ತಿದೆ. ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಿನ ಮೂರು ಪಂದ್ಯಗಳ ಏಕದಿನ ಸರಣಿ ನಿರ್ಣಾಯಕ ಘಟ್ಟ ತಲುಪಿದ್ದು, ಸರಣಿ 1-1 ರಿಂದ ಸಮಬಲಗೊಂಡಿದೆ. ಇದೀಗ ವಿಶಾಖಪಟ್ಟಣಂನಲ್ಲಿ ನಡೆಯಲಿರುವ 3ನೇ ಪಂದ್ಯವನ್ನು ಗೆಲ್ಲುವ ಮೂಲಕ ದಕ್ಷಿಣ ಆಫ್ರಿಕಾ ವಿರುದ್ಧ ಏಕದಿನ ಪಂದ್ಯಗಳಲ್ಲಿ ತನ್ನ ಪ್ರಾಬಲ್ಯವನ್ನು ಮುಂದುವರಿಸಲು ಟೀಂ ಇಂಡಿಯಾ ಪ್ರಯತ್ನಿಸುತ್ತಿದ್ದರೆ, ಇತ್ತ ದಕ್ಷಿಣ ಆಫ್ರಿಕಾ 10 ವರ್ಷಗಳ ನಂತರ ಭಾರತದಲ್ಲಿ ಏಕದಿನ ಸರಣಿಯನ್ನು ಗೆಲ್ಲಲು ಎದುರು ನೋಡುತ್ತಿದೆ. ಆದರೆ ಇದಕ್ಕೂ ಮುನ್ನ ಈ ಮೈದಾನದಲ್ಲಿ ಭಾರತದ ದಾಖಲೆ ಹೇಗಿದೆ ಎಂಬುದನ್ನು ನೋಡೋಣ. ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಿನ ಮೂರು ಪಂದ್ಯಗಳ ಏಕದಿನ ಸರಣಿ ನಿರ್ಣಾಯಕ ಘಟ್ಟ ತಲುಪಿದ್ದು, ಸರಣಿ 1-1 ರಿಂದ ಸಮಬಲಗೊಂಡಿದೆ. ಇದೀಗ ವಿಶಾಖಪಟ್ಟಣಂನಲ್ಲಿ ನಡೆಯಲಿರುವ 3ನೇ ಪಂದ್ಯವನ್ನು ಗೆಲ್ಲುವ ಮೂಲಕ ದಕ್ಷಿಣ ಆಫ್ರಿಕಾ ವಿರುದ್ಧ ಏಕದಿನ ಪಂದ್ಯಗಳಲ್ಲಿ ತನ್ನ ಪ್ರಾಬಲ್ಯವನ್ನು ಮುಂದುವರಿಸಲು ಟೀಂ ಇಂಡಿಯಾ ಪ್ರಯತ್ನಿಸುತ್ತಿದ್ದರೆ, ಇತ್ತ ದಕ್ಷಿಣ ಆಫ್ರಿಕಾ 10 ವರ್ಷಗಳ ನಂತರ ಭಾರತದಲ್ಲಿ ಏಕದಿನ ಸರಣಿಯನ್ನು ಗೆಲ್ಲಲು ಎದುರು ನೋಡುತ್ತಿದೆ. ಆದರೆ ಇದಕ್ಕೂ ಮುನ್ನ ಈ ಮೈದಾನದಲ್ಲಿ ಭಾರತದ ದಾಖಲೆ ಹೇಗಿದೆ ಎಂಬುದನ್ನು ನೋಡೋಣ. ವಿಶಾಖಪಟ್ಟಣಂ ಮೈದಾನದಲ್ಲಿ ಭಾರತದ ದಾಖಲೆ ಹೇಗಿದೆ ಎಂಬುದನ್ನು ನೋಡುವುದಾದರೆ.. ಈ ಮೈದಾನದಲ್ಲಿ ಭಾರತ ಇದುವರೆಗೆ 10 ಏಕದಿನ ಪಂದ್ಯಗಳನ್ನಾಡಿದೆ. ಇದರಲ್ಲಿ 7 ಪಂದ್ಯಗಳನ್ನು ಗೆದ್ದಿರುವ ಭಾರತ, ಎರಡರಲ್ಲಿ ಮಾತ್ರ ಸೋತಿದೆ. ಉಳಿದಂತೆ ಒಂದು ಪಂದ್ಯ ಡ್ರಾದೊಂದಿಗೆ ಅಂತ್ಯಗೊಂಡಿದೆ. ಅಂದರೆ ಈ ಮೈದಾನದಲ್ಲಿ ಭಾರತ ಮೇಲುಗೈ ಸಾಧಿಸಿದೆ ಎಂಬುದನ್ನು ಅಂಕಿ ಅಂಶಗಳಿಂದ ತಿಳಿಯಬಹುದು. ವಿಶಾಖ ಪಟ್ಟಣಂ ಮೈದಾನದಲ್ಲಿ ಭಾರತದ ದಾಖಲೆ ಹೇಗಿದೆ ಎಂಬುದನ್ನು ನೋಡುವುದಾದರೆ.. ಈ ಮೈದಾನದಲ್ಲಿ ಭಾರತ ಇದುವರೆಗೆ 10 ಏಕದಿನ ಪಂದ್ಯಗಳನ್ನಾಡಿದೆ.

ಇದರಲ್ಲಿ 7 ಪಂದ್ಯಗಳನ್ನು ಗೆದ್ದಿರುವ ಭಾರತ, ಎರಡರಲ್ಲಿ ಮಾತ್ರ ಸೋತಿದೆ. ಉಳಿದಂತೆ ಒಂದು ಪಂದ್ಯ ಡ್ರಾದೊಂದಿಗೆ ಅಂತ್ಯಗೊಂಡಿದೆ. ಅಂದರೆ ಈ ಮೈದಾನದಲ್ಲಿ ಭಾರತ ಮೇಲುಗೈ ಸಾಧಿಸಿದೆ ಎಂಬುದನ್ನು ಅಂಕಿ ಅಂಶಗಳಿಂದ ತಿಳಿಯಬಹುದು. ಆದಾಗ್ಯೂ, ಈ ಮೈದಾನದಲ್ಲಿ ಟೀಂ ಇಂಡಿಯಾದ ತನ್ನ ಕೊನೆಯ ಏಕದಿನ ಗೆಲುವನ್ನು 2019 ರಲ್ಲಿ ಸಾಧಿಸಿತ್ತು. ಆ ಬಳಿಕ 2023 ರಲ್ಲಿ ನಡೆದಿದ್ದ ಪಂದ್ಯದಲ್ಲಿ ಆಸ್ಟ್ರೇಲಿಯಾ ಗೆದ್ದುಕೊಂಡಿತ್ತು. ಈಗ, ಆರು ವರ್ಷಗಳ ನಂತರ, ಟೀಂ ಇಂಡಿಯಾ ಈ ಮೈದಾನದಲ್ಲಿ ಮತ್ತೆ ಗೆಲ್ಲಲು ನೋಡುತ್ತಿದೆ. ಆದಾಗ್ಯೂ, ಈ ಮೈದಾನದಲ್ಲಿ ಟೀಂ ಇಂಡಿಯಾದ ತನ್ನ ಕೊನೆಯ ಏಕದಿನ ಗೆಲುವನ್ನು 2019 ರಲ್ಲಿ ಸಾಧಿಸಿತ್ತು. ಆ ಬಳಿಕ 2023 ರಲ್ಲಿ ನಡೆದಿದ್ದ ಪಂದ್ಯದಲ್ಲಿ ಆಸ್ಟ್ರೇಲಿಯಾ ಗೆದ್ದುಕೊಂಡಿತ್ತು. ಈಗ, ಆರು ವರ್ಷಗಳ ನಂತರ, ಟೀಂ ಇಂಡಿಯಾ ಈ ಮೈದಾನದಲ್ಲಿ ಮತ್ತೆ ಗೆಲ್ಲಲು ನೋಡುತ್ತಿದೆ. ಮತ್ತೊಂದೆಡೆ, ಈ ಮೈದಾನ ದಕ್ಷಿಣ ಆಫ್ರಿಕಾಕ್ಕೆ ಸಂಪೂರ್ಣವಾಗಿ ಅಪರಿಚಿತವಾಗಿದೆ. ಪ್ರೋಟಿಯಸ್ ಇಲ್ಲಿ ಒಂದೇ ಒಂದು ಏಕದಿನ ಪಂದ್ಯವನ್ನು ಆಡಿಲ್ಲ. ಆದಾಗ್ಯೂ, 2019 ರಲ್ಲಿ ಆಫ್ರಿಕಾ ತಂಡ ಇಲ್ಲಿ ಒಂದು ಟೆಸ್ಟ್ ಮತ್ತು 2022 ರಲ್ಲಿ ಒಂದು ಟಿ 20 ಪಂದ್ಯವನ್ನು ಆಡಿದ್ದು, ಎರಡರಲ್ಲೂ ಸೋತಿದೆ. ಇದರರ್ಥ ವಿಶಾಖಪಟ್ಟಣಂ ನೆಲದಲ್ಲಿ ದಕ್ಷಿಣ ಆಫ್ರಿಕಾದ ದಾಖಲೆ ಶೂನ್ಯವಾಗಿಯೇ ಉಳಿದಿದೆ.

ಮತ್ತೊಂದೆಡೆ, ಈ ಮೈದಾನ ದಕ್ಷಿಣ ಆಫ್ರಿಕಾಕ್ಕೆ ಸಂಪೂರ್ಣವಾಗಿ ಅಪರಿಚಿತವಾಗಿದೆ. ಪ್ರೋಟಿಯಸ್ ಇಲ್ಲಿ ಒಂದೇ ಒಂದು ಏಕದಿನ ಪಂದ್ಯವನ್ನು ಆಡಿಲ್ಲ. ಆದಾಗ್ಯೂ, 2019 ರಲ್ಲಿ ಆಫ್ರಿಕಾ ತಂಡ ಇಲ್ಲಿ ಒಂದು ಟೆಸ್ಟ್ ಮತ್ತು 2022 ರಲ್ಲಿ ಒಂದು ಟಿ 20 ಪಂದ್ಯವನ್ನು ಆಡಿದ್ದು, ಎರಡರಲ್ಲೂ ಸೋತಿದೆ. ಇದರರ್ಥ ವಿಶಾಖಪಟ್ಟಣಂ ನೆಲದಲ್ಲಿ ದಕ್ಷಿಣ ಆಫ್ರಿಕಾದ ದಾಖಲೆ ಶೂನ್ಯವಾಗಿಯೇ ಉಳಿದಿದೆ.

**ವೈಜಾಗ್‌ನಲ್ಲಿ ಟೀಂ ಇಂಡಿಯಾ ದಾಖಲೆ**




# 3ನೇ ಪಂದ್ಯಕ್ಕೆ ಟೀಂ ಇಂಡಿಯಾದಲ್ಲಿ ಬದಲಾವಣೆ ಖಚಿತ

ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಿನ ಮೂರನೇ ಏಕದಿನ ಪಂದ್ಯ ಶನಿವಾರ ವಿಶಾಖಪಟ್ಟಣದಲ್ಲಿ ನಡೆಯಲಿದೆ.

ಈ ಪಂದ್ಯಕ್ಕಾಗಿ ಟೀಂ ಇಂಡಿಯಾದ ಆಡುವ ಹನ್ನೊಂದರ ಬಳಗ ಹೇಗಿರಲಿದೆ ಎಂಬುದು ಕುತೂಹಲಕಾರಿಯಾಗಿದೆ. ಏಕೆಂದರೆ ಮೊದಲೆರಡು ಪಂದ್ಯಗಳಲ್ಲಿ ಟೀಂ ಇಂಡಿಯಾದ ಬ್ಯಾಟಿಂಗ್ ವಿಭಾಗ ತನ್ನ ಕೆಲಸ ಮಾಡಿತ್ತು. ಆದರೆ ಆಲ್ ರೌಂಡರ್ ವಿಭಾಗ ಹಾಗೂ ಬೌಲಿಂಗ್ ವಿಭಾಗ ನಿರೀಕ್ಷಿತ ಪ್ರದರ್ಶನ ನೀಡಿರಲಿಲ್ಲ. ಇದರ ಫಲವಾಗಿ ಟೀಂ ಇಂಡಿಯಾ ಬೃಹತ್ ಮೊತ್ತ ಕಲೆಹಾಕಿದರೂ 2ನೇ ಪಂದ್ಯವನ್ನು ಸೋತಿತ್ತು. ಇದೀಗ ಮೂರನೇ ಏಕದಿನ ಪಂದ್ಯ ಉಭಯ ತಂಡಗಳಿಗೆ ಸರಣಿ ನಿರ್ಧಾರಕವಾಗಿರುವುದರಿಂದ, ಈ ಪಂದ್ಯವನ್ನು ಗೆಲ್ಲಬೇಕಾದರೆ, ಭಾರತ ತಂಡ ಕೆಲವು ಬದಲಾವಣೆಗಳೊಂದಿಗೆ ಕಣಕ್ಕಿಳಿಯಬೇಕಾಗಿದೆ. ಹಾಗಿದ್ದರೆ, ಸರಣಿಯ ಕೊನೆಯ ಪಂದ್ಯಕ್ಕೆ ರಾಹುಲ್ ಪಡೆ ಹೇಗಿರಲಿದೆ ಎಂಬುದನ್ನು ನೋಡುವುದಾದರೆ..

**ಟೀಂ ಇಂಡಿಯಾದಲ್ಲಿ ಬದಲಾವಣೆ ಅಗತ್ಯ**

ಭಾರತ ತಂಡದ ಆಡುವ ಹನ್ನೊಂದರ ಬಳಗದಲ್ಲಿ ಖಂಡಿತವಾಗಿಯೂ ಬದಲಾವಣೆ




ಮಾಡುವ ಅಗತ್ಯವಿದೆ. ಪ್ರಸಿದ್ಧ್ ಕೃಷ್ಣ ಅವರನ್ನು ಬದಲಿಸಿ ನಿತೀಶ್ ರೆಡ್ಡಿಗೆ ಅವಕಾಶ ನೀಡಿದರೆ, ಟೀಂ ಇಂಡಿಯಾ ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡನ್ನೂ ಬಲಪಡಿಸಬಹುದು. ಈಗ, ನಿತೀಶ್ ರೆಡ್ಡಿ ತಂಡವನ್ನು ಹೇಗೆ ಬಲಪಡಿಸುತ್ತಾರೆ ಎಂದು ನೀವು ಆಶ್ಚರ್ಯ ಪಡುತ್ತಿರಬಹುದು ವಾಸ್ತವವಾಗಿ, ನಿತೀಶ್ ರೆಡ್ಡಿಯನ್ನು ಅರೆಕಾಲಿಕ ಬೌಲರ್ ಆಗಿ ಬಳಸಿಕೊಂಡರೆ ಮತ್ತು ವಾಷಿಂಗ್ಟನ್ ಸುಂದರ್ ಅವರನ್ನು ತಮ್ಮ ಪೂರ್ಣ ಸಾಮರ್ಥ್ಯಕ್ಕೆ ಬಳಸಿಕೊಂಡರೆ, ಭಾರತೀಯ ತಂಡದ ರನ್ ಸೋರಿಕೆ ಸಮಸ್ಯೆಯನ್ನು ಕೊನೆಗೊಳಿಸಬಹುದು.

**ಯಾರು ಇನ್, ಯಾರು ಔಟ್?**

**ಸುಂದರ್ ಅವರನ್ನು ಬಳಸಲೇ ಇಲ್ಲ**

ಅಚ್ಚರಿಯೆಂದರೆ, ಟೀಂ ಇಂಡಿಯಾ ಹಿಂದಿನ ಎರಡೂ ಪಂದ್ಯಗಳಲ್ಲಿ ವಾಷಿಂಗ್ಟನ್ ಸುಂದರ್ ಅವರನ್ನು ಬ್ಯಾಟ್ಸ್‌ಮನ್ ಆಗಿ ಬಳಸಿಕೊಂಡಿದೆ. ಆದರೆ ಅವರಿಗೆ ಎರಡೂ ಪಂದ್ಯಗಳಲ್ಲಿ ಕೇವಲ ಏಳು ಓವರ್‌ಗಳನ್ನು ಮಾತ್ರ ನೀಡಲಾಗಿದೆ. ಈ ಏಳು ಓವರ್‌ಗಳಲ್ಲಿಯೂ ಸಹ ಅವರು ಕೇವಲ 46 ರನ್‌ಗಳನ್ನು ಮಾತ್ರ ಬಿಟ್ಟುಕೊಟ್ಟರು, ಇದು ಈ ಏಕದಿನ ಸರಣಿಯ ಪಿಚ್‌ಗಳನ್ನು ಪರಿಗಣಿಸಿದರೆ ಉತ್ತಮ ಪ್ರದರ್ಶನವಾಗಿದೆ. ಸುಂದರ್‌ಗೆ ಹೆಚ್ಚಿನ ಬೌಲಿಂಗ್ ಮಾಡಲು ಏಕೆ ಅವಕಾಶ ನೀಡಲಿಲ್ಲ ಎಂಬುದು ಪ್ರಶ್ನೆ.

ಈಗ, ವಿಶಾಖಪಟ್ಟಣದಲ್ಲಿ ಅವರ ಪೂರ್ಣ ಕೋಟಾವನ್ನು ನೀಡಿದರೆ ಮತ್ತು ನಿತೀಶ್ ರೆಡ್ಡಿ ಅವರನ್ನು ಅರೆಕಾಲಿಕ ಬೌಲರ್ ಆಗಿ ಬಳಸಿದರೆ, ತಂಡವು ಖಂಡಿತವಾಗಿಯೂ ಪ್ರಯೋಜನ ಪಡೆಯಬಹುದು.

ನಿತೀಶ್ ರೆಡ್ಡಿ ಅವರ ಉಪಸ್ಥಿತಿಯು ತಂಡದ ಬ್ಯಾಟಿಂಗ್ ಅನ್ನು ಬಲಪಡಿಸುತ್ತದೆ ಮತ್ತು ಡೆತ್ ಓವರ್‌ಗಳಲ್ಲಿ ಭಾರತದ ರನ್ ದರವನ್ನು ಹೆಚ್ಚಿಸುತ್ತದೆ. ಇದಕ್ಕೆ ಪೂರಕವಾಗಿ ನಿತೀಶ್ ರೆಡ್ಡಿ ದೊಡ್ಡ ಹೊಡೆತಗಳಿಗೆ ಹೆಸರುವಾಸಿಯಾಗಿದ್ದಾರೆ.

# ಮೊದಲ ಬಾರಿಗೆ ಮಂಧಾನ ಪೋಸ್ಟ್

ಸ್ಮೃತಿ ಮಂಧಾನ ಅವರ ಮದುವೆ ತಂದೆಯ ಅನಾರೋಗ್ಯದಿಂದ ಮುಂದೂಡಲ್ಪಟ್ಟ ನಂತರ ಹಲವು ವದಂತಿಗಳು ಹರಡಿವೆ. ಇದರ ಮಧ್ಯೆ, 12 ದಿನಗಳ ನಂತರ ಸ್ಮೃತಿ ಇನ್‌ಸ್ಟಾಗ್ರಾಮ್‌ನಲ್ಲಿ ಬ್ರ್ಯಾಂಡ್ ಪ್ರಚಾರದ ವೀಡಿಯೊ ಹಂಚಿಕೊಂಡಿದ್ದಾರೆ. ಇದು ಅಭಿಮಾನಿಗಳಿಗೆ ಸಮಾಧಾನ ತಂದರೂ, ಮದುವೆ ಬಗ್ಗೆ ಯಾವುದೇ ಸ್ಪಷ್ಟನೆ ಇಲ್ಲ.

ವಿಶ್ವಕಪ್ ಅನುಭವಗಳ ಬಗ್ಗೆ ವಿಡಿಯೋದಲ್ಲಿ ಮಾತನಾಡಿದ್ದಾರೆ. ಮದುವೆ ಕುರಿತು ಕುಟುಂಬದಿಂದ ಯಾವುದೇ ಮಾಹಿತಿ ಇಲ್ಲ. ಭಾರತ ಮಹಿಳಾ ತಂಡದ ಸ್ಟಾರ್ ಆಟಗಾರ್ತಿ ಸ್ಮೃತಿ ಮಂಧಾನ ಅವರ ಮದುವೆ ಮುಂದೂಡಲ್ಪಟ್ಟಾಗಿನಿಂದ ಅವರು ಎಲ್ಲಿಯೂ ಸಾರ್ವಜನಿಕವಾಗಿ ಕಾಣಿಸಿಕೊಂಡಿಲ್ಲ. ತಂದೆಯ ಅನಾರೋಗ್ಯದ ಕಾರಣದಿಂದಾಗಿ ಅವರ ಮದುವೆ ತಾತ್ಕಾಲಿಕವಾಗಿ ರದ್ದಾಗಿದ್ದರೂ ಸಾಮಾಜಿಕ ಜಾಲತಾಣಗಳಲ್ಲಿ ಬೇರೆಯದ್ದೇ ಕಥೆ ಹೇಳಲಾಗುತ್ತಿದೆ. ಆದಾಗ್ಯೂ ಆ ವದಂತಿಗಳಿಗೆ ಇಬ್ಬರ ಕಡೆಯಿಂದಲೂ ಯಾವುದೇ ಸ್ಪಷ್ಟನೆ ಸಿಕ್ಕಿಲ್ಲ. ಇದನ್ನೇ ಲಾಭ ಮಾಡಿಕೊಂಡಿರುವ ಕೆಲವರು ದಿನಕ್ಕೊಂದು ವದಂತಿಗಳನ್ನು ಹಬ್ಬಿಸುತ್ತಿದ್ದಾರೆ. ಇದೆಲ್ಲದರ ನಡುವೆ ಸುಮಾರು 12 ದಿನಗಳ ನಂತರ ಸ್ಮೃತಿ ಮಂಧಾನ ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಪೋಸ್ಟ್‌ವೊಂದನ್ನು ಹಂಚಿಕೊಂಡಿದ್ದಾರೆ. ಇದು ಅಭಿಮಾನಿಗಳಿಗೆ ಕೊಂಚ ಸಮಾಧಾನ ತಂದಿದೆ. ಆದಾಗ್ಯೂ ಈ ಪೋಸ್ಟ್‌ನಲ್ಲಿ ಮಂಧಾನ ತಮ್ಮ ಮದುವೆಯ ಬಗ್ಗೆ ಯಾವುದೇ ನವೀಕರಣಗಳನ್ನು ನೀಡಿಲ್ಲ. ಆದರೆ ಈ ವೀಡಿಯೊದಲ್ಲಿ, ಅವರು ವಿಶ್ವಕಪ್ ಫೈನಲ್ ಬಗ್ಗೆ ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಸ್ಮೃತಿ ಮಂಧಾನ ಡಿಸೆಂಬರ್ 5 ರಂದು ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ವೀಡಿಯೊವನ್ನು ಪೋಸ್ಟ್ ಮಾಡಿದ್ದಾರೆ.







# 13 ರನ್‌ಗಳಿಗೆ 4 ವಿಕೆಟ್ ಉರುಳಿಸಿದ ಮೊಹಮ್ಮದ್ ಶಮಿ

ಇಂಜುರಿಯಿಂದ ಚೇತರಿಸಿಕೊಂಡಿರುವ ಮೊಹಮ್ಮದ್ ಶಮಿ, ಸೈಯದ್ ಮುಷ್ತಾಕ್ ಅಲಿ ಟಿ20 ಟ್ರೋಫಿಯಲ್ಲಿ ಭರ್ಜರಿ ಪ್ರದರ್ಶನ ನೀಡಿದ್ದಾರೆ.

ಬಂಗಾಳ ಪರ ಆಡಿದ ಶಮಿ, ಸರ್ವಿಸಸ್ ವಿರುದ್ಧ 20 ಎಸೆತಗಳಲ್ಲಿ 13 ರನ್ ನೀಡಿ 4 ವಿಕೆಟ್ ಕಬಳಿಸಿ ತಂಡಕ್ಕೆ ಜಯ ತಂದುಕೊಟ್ಟರು. ಭಾರತ ಟೆಸ್ಟ್ ಮತ್ತು ಏಕದಿನ ತಂಡಗಳಿಗೆ ಮರಳುವ ಗುರಿ ಹೊಂದಿರುವ ಶಮಿ, ತಮ್ಮ ಮಾರಕ ಬೌಲಿಂಗ್ ಮೂಲಕ ಆಯ್ಕೆ ಸಮಿತಿಯ ಗಮನ ಸೆಳೆಯಲು ಪ್ರಯತ್ನಿಸುತ್ತಿದ್ದಾರೆ. ಟೀಂ ಇಂಡಿಯಾದ ಎಲ್ಲಾ ಬಾಗಿಲುಗಳು ಬಹುತೇಕ ಮುಚ್ಚಿರಬಹುದು. ಆದರೆ ಮೊಹಮ್ಮದ್ ಶಮಿ ಮಾತ್ರ ಸೋಲನ್ನು ಸುಲಭವಾಗಿ ಸ್ವೀಕರಿಸಲು ಸಿದ್ಧರಿಲ್ಲ. ಮೊಹಮ್ಮದ್ ಶಮಿ ಭಾರತ ತಂಡದಲ್ಲಿ ಕಾಣಿಸಿಕೊಂಡು ಸುಮಾರು ತಿಂಗಳುಗಳೇ ಕಳೆದಿವೆ. ಇಂಜುರಿಯಿಂದ ಚೇತರಿಸಿಕೊಂಡಿರುವ ಶಮಿ ತನ್ನ ಫಿಟ್ನೆಸ್ ಸಾಭೀತಿಗಾಗಿ ದೇಶಿ ಟೂರ್ನಿಯಲ್ಲಿ ಆಡುತ್ತಿದ್ದಾರೆ. ಅದರಂತೆ ಪ್ರಸ್ತುತ ನಡೆಯುತ್ತಿರುವ ಸೈಯದ್ ಮುಷ್ತಾಕ್ ಅಲಿ ಟಿ20 ಟ್ರೋಫಿಯಲ್ಲಿ ಬಂಗಾಳ ಪರ ಆಡುತ್ತಿರುವ ಶಮಿ ಭರ್ಜರಿ ಪ್ರದರ್ಶನ ನೀಡುತ್ತಿದ್ದಾರೆ. ಈ ಟೂರ್ನಿಯಲ್ಲಿ ನಡೆದ ಸರ್ವಿಸಸ್ ವಿರುದ್ಧದ ಪಂದ್ಯದಲ್ಲಿ ತಮ್ಮ ಮಾರಕ ದಾಳಿ ನಡೆಸಿದ ಶಮಿ ಕೇವಲ 20 ಎಸೆತಗಳಲ್ಲಿ 4 ವಿಕೆಟ್‌ಗಳನ್ನು ಕಬಳಿಸಿ ತಂಡಕ್ಕೆ ಸುಲಭ ಜಯ ತಂದುಕೊಟ್ಟರು. ಭಾರತದ ಟೆಸ್ಟ್ ಮತ್ತು ಏಕದಿನ ತಂಡಗಳಿಗೆ ಮರಳಲು ಕಾಯುತ್ತಿರುವ ಮೊಹಮ್ಮದ್ ಶಮಿ, ತಮ್ಮ ತೀಕ್ಷ್ಣ ಬೌಲಿಂಗ್ ಮೂಲಕ ಮುಖ್ಯ ಆಯ್ಕೆದಾರ ಅಜಿತ್ ಅಗರ್ಕರ್ ಮತ್ತು ಅವರ ಆಯ್ಕೆ ಸಮಿತಿಯ ಗಮನ ಸೆಳೆಯಲು ಪ್ರಯತ್ನಿಸುತ್ತಿದ್ದಾರೆ.

**ಶಮಿ ಅದ್ಭುತ ಪ್ರದರ್ಶನ**

ಆ ಪ್ರಕಾರ ಹೈದರಾಬಾದ್‌ನಲ್ಲಿ ನಡೆದ ಸೈಯದ್ ಮುಷ್ತಾಕ್ ಅಲಿ ಟಿ20 ಟ್ರೋಫಿ ಪಂದ್ಯದಲ್ಲಿ ಶಮಿ ನೇತೃತ್ವದ ಬಂಗಾಳ ತಂಡವು ಸರ್ವಿಸಸ್ ತಂಡವನ್ನು ಎದುರಿಸಿತು. ಈ ಪಂದ್ಯದಲ್ಲಿ ಸರ್ವಿಸಸ್ ಮೊದಲು ಬ್ಯಾಟ್ ಮಾಡಿ 18.2 ಓವರ್‌ಗಳಲ್ಲಿ 165 ರನ್‌ಗಳಿಗೆ ಆಲೌಟ್ ಆಯಿತು. ಕಾಕತಾಳೀಯವಾಗಿ, ಶಮಿ ಇನ್ನಿಂಗ್ಸ್‌ನ ಮೊದಲ ಮತ್ತು ಕೊನೆಯ ವಿಕೆಟ್‌ಗಳನ್ನು ಪಡೆದರು. ಪಂದ್ಯದ ಮೊದಲ ಎಸೆತದಲ್ಲೇ ವಿಕೆಟ್ ಪಡೆಯುವಲ್ಲಿ ಯಶಸ್ವಿಯಾದ ಮೊಹಮ್ಮದ್ ಶಮಿ ಸರ್ವಿಸಸ್ ತಂಡದ ಆರಂಭಿಕ ಆಟಗಾರ ಗೌರವ್ ಕೊಚ್ಚರ್ ಅವರನ್ನು ಡಕ್ ಔಟ್ ಮಾಡಿದರು.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966